# ತಿಳಿ ಕನ್ನಡ

# ದ್ವಿತೀಯ ಭಾಷೆ

# ಹತ್ತನೇಯ ತರಗತಿ

# 10

MAJEED SHAKEEL

## ಪರಿವಿಡಿ


| ಕ್ರಮ ಸಂ. | ಗದ್ಯ ಭಾಗ | ಸಾಹಿತಿಯ ಪರಿಚಯ | ಪು.ಸಂ |
|---|---|---|---|
| 1 | ಒಣಮರದ ಗಿಳಿ. | ಅ.ರಾ. ಮಿತ್ರ | 1 |
| 2 | ಅಸಿ ಮಸಿ ಕೃಷಿ. | ಪಂಡಿತರಾಧ್ಯ ಶಿವಾಚಾರ್ಯ | 5 |
| 3 | ಗಾನಯೋಗಿ ಪಂಡಿತಪುಟ್ಟರಾಜಗವಾಯಿ. | ರಮೇಶಗೌಡ ಎಂ ಕೆ | 8 |
| 4 | ಹಕ್ಕಿ ಗೂಡುಗಳ ನಿಗೂಢ ಜಗತ್ತು. | ಕೆ ಪುಟ್ಟಸ್ವಾಮಿ ಕೃಪಾಕರ ಮತ್ತು ಸೇನಾನಿ | 11 |
| 5 | ಕಾಫಿ ಕಪ್ಪು. | ಗುರುರಾಜ ಕರ್ಜಗಿ | 13 |
| 6 | ಟುಸ್ಸೂಡ್ ವ್ಯಾಕ್ಸ ಮ್ಯೂಸಿಯಂ. | ಬಸವಪ್ರಭು ಪಾಟೀಲ ಕೆ ಸಿದ್ದಯ್ಯಸ್ವಾಮಿ | 16 |
| 7 | ನನ್ನ ಗೋಪಾಲ. | ಕುವೆಂಪು | 18 |
| | ಪದ್ಯಭಾಗ | | |
| 1 | ಏಣಿ | ಸುಕನ್ಯ ಮಾರುತಿ | 21 |
| 2 | ಬೋಧಿ ವೃಕ್ಷದ ಹಾಡು | ಬಸವರಾಜ ಸಬರದ | 23 |
| 3 | ಸವಿಚೈತ್ರ | ಬಸವರಾಜ ಸಾದರ | 25 |
| 4 | ಸದ್ದು ಮಾಡದಿರು | ಸಿ ಪಿ ಕೃಷ್ಣಕುಮಾರ | 27 |
| 5 | ಗುರಿ | ಎಂ ಗೋಪಾಲ ಕೃಷ್ಣ ಅಡಿಗ | 29 |
| 6 | ಮೂಡಲ್ ಕುಣಿಗಲ್ ಕೆರೆ | ಜನಪದ | 31 |
| 7 | ವಚನಗಳು | ಬಸವಣ್ಣ ,ಸಿದ್ದರಾಮ, ಅಕ್ಕಮಹಾದೇವಿ | 33 |
| 8 | ನಿಟ್ಟೋಟದಲಿಹಾಯ್ದನು ಬಿಟ್ಟಮಂಡೆಯಲಿ | ಕುಮಾರವ್ಯಾಸ | 35 |
| | ಪೂರಕ ಓದು | | |
| 1 | ಕಳ್ಳರ ಗುರು | ಬೆಟಗೇರಿ ಕೃಷ್ಣಶರ್ಮ | 38 |
| 2 | ಗೊಂಗೆ ಬೇವುಗಳ ಹಾಡು | ಡಾ.ಎಚ್ ಎಲ್ ಪುಷ್ಪ | 39 |


MAJEED SHAKEEL

# ನೀಲಿ ನಕಾಶೆ ದ್ವಿತೀಯ ಭಾಷೆ ಕನ್ನಡ

| ಕ್ರ. ಸಂ | ಗದ್ಯ ಪದ್ಯ | 1 ಅಂಕ | 2 ಅಂಕ | ಸಂದರ್ಭ | ಪದ್ಯ | ಸಾಹಿತಿ. ಪರಿಚಯ | 4 ಅಂಕ | ಅಂಕಗಳು |
|---|---|---|---|---|---|---|---|---|
| 1 | ಬಣಮರದಗಿಳಿ | | | | | | | |
| 2 | ಆಸಿ. ಮಸಿ. ಕೃಷ | | | | | | | |
| 3 | ಗಾನಯೋಗಿ ಪಂಡಿತ ಪ್ರಟ್ಟರಾಜ ಗವಾಯಿ | | | | | | | |
| 4 | ಹಕ್ಕಿ ಗೂಡುಗಳ ನಿಗೂಢ ಜಗತ್ತು | | | | | | | |
| 5 | ಕಾಫಿ - ಕಪ್ಪು | | | | | | | |
| 6 | ಟುಸ್ಸೊಡ್ - ವ್ಯಾಕ್ಸ ಮೂಸಿಯಂ | | | | | | | |
| 7 | ನನ್ನ ಗೊಪಾಲ | | | | | | | |
| 1 | ಏಣಿ | | | | | | | |
| 2 | ಬೋಧಿ ವೃಕ್ಷದ ಹಾಡಿ | | | | | | | |
| 3 | ಸವಿಚೈತ್ರ | | | | | | | |
| 4 | ಸದ್ದು ಮಾಡದಿರು | | | | | | | |
| 5 | ಗುರಿ | | | | | | | |
| 6 | ಮಾಡಲ್ ಕುಣಿಗಲ್ ಕೆರೆ | | | | | | | |
| 7 | ವಚನಗಳು | | | | | | | |
| 8 | ನಿಟ್ಟೋಟದಲಿ ಹಾಯ್ದುನು ಬಿಟ್ಟ ಮಂಡೆಯಲಿ | | | | | | | |
| 1 | ಕಳ್ಳರ ಗುರು | | | | | | | 2 |
| 2 | ಹೊಂಗೆ ಬೇವುಗಳ ಹಾಡು | | | | | | | 2 |

MAJEED SHAKEEL

# ಗದ್ಯ -1 ಒಣಮರದ ಗಿಳಿ

***ಕವಿ|ಸಾಹಿತಿಯ ಪರಿಚಯ :**

ಸಾಹಿತಿಯ ಹೆಸರು : ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ.

ಕಾಲ : 1935

ಸ್ಥಳ : ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು.

ಕೃತಿಗಳು : ಆರತಕ್ಷತೆ, ನಾನೇಕೆ ಕೊರೆಯುತ್ತೇನೆ, ಛಂದೋಮಿತ್ರ, ಕನ್ನಡ ಮೇಘದೂತ.

ಪ್ರಶಸ್ತಿಗಳು : ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ.

**ಪದಗಳ ಅರ್ಥ :**

ಅಶ್ಚರ್ಯ-ಅಚ್ಚರಿ, ಬೆರಗು. ಆಶ್ರಯ-ಆಸರೆ. ಕಳಕಳಿಸು-ಪ್ರಕಾಶಿಸು. ಕೃತಘ್ನ-ಉಪಕಾರ ಸ್ಮರಣೆ ಇಲ್ಲದವನು. ಗಳಿಗೆ-ಘಟಿಕಾ. ತತ್ತ್ವನಿಶ್ಟೆ-ನಂಬಿದ ವಿಚಾರಗಳಿಗೆ ಬದ್ಧನಾಗಿರುವುದು. ದುರ್ಭರ-ಹೊರಲಾಗದುದು. ದುರದ್ರಷ್ಟ-ಕೆಟ್ಟ ಅದೃಷ್ಟ. ನಂಜು-ವಿಷ. ಬೀಗು-ಉಬ್ಬು. ಭೋಗ-ಸುಖದ ಅನುಭವ. ಮುದ-ಆನಂದ. ಲೋಕವರ್ತನೆ-ಲೋಕದ ಜನರ ನಡವಳಿಕೆ. ವರ-ಕೊಡುಗೆ. ಸಂತೋಷ -ಸಂತಸ. ಸಮೃದ್ಧಿ - ಸಂಪತ್ತು. ಸಿರಿ-ಸಂಪತ್ತು,

* **ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

ಉತ್ತರ:ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಬೇಡನು ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು.

2. ವಿಶದಬಾಣವು ಮರಕ್ಕೆ ಏಕೆ ತಗುಲಿತು?

ಉತ್ತರ:ಜಿಂಕೆಯು ಹಾರಿ ಬಾಣದ ಹೊಡೆತದಿಂದ ತಪ್ಪಿಸಿಕೊಂಡಿದ್ದರಿಂದ ಮರಕ್ಕೆ ತಗುಲಿತು.

3. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?

ಉತ್ತರ: ವಿಷದ ಬಾಣವು ಮರಕ್ಕೆ ತಗುಲಿದರಿಂದ ಮರ ಒಣಗಿತು.

4. ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ?

ಉತ್ತರ:ಮರ ಒಣಗಿ ನಿಂತರೂ ಗಿಳಿ ಮರದ ಪೊಟರೆಯನ್ನು ಬಿಟ್ಟು ಹೋಗದೆ ಇದ್ದುದ್ದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

ಉತ್ತರ: ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.

6. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿಯಲ್ಲಿ ಪ್ರಕಟಿಸಿದನು?

ಉತ್ತರ:ಇಂದ್ರನು ಗಿಳಿರಾಯನಿಗೆ ವರವನ್ನು ಕೊಡ ಬೇಕೆಂದು ತೀರ್ಮಾನಿಸಿಸುವ ಮೂಲಕ ಪ್ರಕಟಿಸಿದ.

* **ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನಾಗಿತ್ತು?

ಉತ್ತರ:ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ. ಹಣ್ಣು ಕೊಟ್ಟಿದೆ. ಹಸಿರು ಬಣ್ಣದಿಂದ ಮನಸ್ಸಿಗೆ ಮುದ ಮತ್ತು ನೆರಳು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದಕ್ಕೆ ರೋಗ ಬಂದಿದೆ. ಹಾಗೆಂದು ಈ ಸ್ಥಿತಿಯಲ್ಲಿ ಅದನ್ನು ಬಿಟ್ಟುಹೋಗಬಾರದು ಎಂದು ನಿರ್ಧರಿಸಿದ್ದೇನೆ ಎಂದು ಸಮರ್ಥನೆ ನೀಡಿತು.

2. ಸಾಮಾನ್ಯವಾದ ಲೋಕವರ್ತನೆ ಯಾವುದು?

ಉತ್ತರ:ಸಮಾನ್ಯವಾದ ಲೋಕವರ್ತನೆ ಮರ ಒಣಗಿದರೆ ಅದರಲ್ಲಿರುವ ಪಕ್ಷಿಗಳು ಬೇರೆ ಮರಗಳಿಗೆ ಹೋಗುವದು ಅವುಗಳ ವರ್ತನೆ. ಹಾಗೆಯೇ ಕಷ್ಟ ಬಂದಾಗ ಯಾರು ಜೊತೆಯಲ್ಲಿ ಇರುವದಿಲ್ಲ ಎಂಬ ವಿಚಾರ ಇಲ್ಲಿದೆ.

3. ಗಿಳಿಯು ಕೇಳಿದ ವರ ಯಾವುದು?

MAJEED SHAKEEL

ಉತ್ತರ: ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸುವ ಫಲಪುಷ್ಪ ಭಾರದಿಂದ ಬೀಗುವ ನೆರಳು ಕೊಡುವ ವರವನ್ನು ಕೊಡು ಎಂದು ಗಿಳಿಯು ಕೇಳಿತು.

* **ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡದ್ದು ಹೇಗೆ ವಿವರಿಸಿ?

ಉತ್ತರ: ಗಿಳಿಯು ಮರವು ಒಣಗಿದರೂ ಆಶ್ರಯವನ್ನು ಬಿಟ್ಟು ಹೋಗಲಿಲ್ಲ. ಜೊತೆಯಲ್ಲಿ ಇದ್ದು ಒಳ್ಳೆಯ ದಿನ ಬರಲಿ ಎಂದು ಹಾರೈಸತೊಡಗಿತು. ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡು ಇಂದ್ರನು ಏನಾದರೂ ವರವನ್ನು ಕೇಳು ಎಂದಾಗ ಮರವು ಮೊದಲಿನಂತೆ ಫಲ ಪುಷ್ಪದಿಂದ ಹಸಿರಿನಿಂದ ಕೂಡಿ ನೆರಳು ಕೊಡುವಂತೆ ದಯಪಾಲಿಸು ಎಂದು ವರ ಕೇಳಿತು. ನನಗೆ ಮರದ ಈಗಿನ ಸ್ಥಿತಿಯನ್ನು ನೋಡಲು ಆಗುವುದಿಲ್ಲ ಎಂದಿತು. ಗಿಳಿಯು ಎಂಥ ಜನ್ಮವನ್ನು ಬಯಸಿದ್ದರೂ ಎಂಥ ಭೋಗವನ್ನು ಬಯಸಿದ್ದರೂ ಇಂದ್ರನು ಕೊಡಲು ಸಿದ್ಧನಾಗಿದ್ದ. ಆದರೆ ಗಿಳಿ ಕೇಳಿದ ವರವು ಸ್ವಾರ್ಥ ರಹಿತವಾಗಿತ್ತು. ಅದರ ನಡತೆ ಲೋಕವರ್ತನೆಗೆ ವಿರುದ್ಧವಾಗಿ ಇರುವುದರಿಂದ ಗಿಳಿ ಪರಹಿತಾಕಾಂಕ್ಷಿ ಎನಿಸಿಕೊಂಡಿದೆ.

2. ಗಿಳಿಯ ವರ್ತನೆಯಿಂದ ಮಾನವನು ಕಲಿಯಬೇಕಾದ ಗುಣಗಳೇನು?

ಉತ್ತರ: ಗಿಳಿಯ ವರ್ತನೆಯು ನಮಗೆ ಕೃತಜ್ಞತೆಯನ್ನು ಕಲಿಸುತ್ತದೆ. ಕಷ್ಟದಲ್ಲಿರುವವರಿಗೆ ಜೊತೆಯಾಗಿದ್ದು ಅದನ್ನು ಪರಿಹರಿಸಬೇಕು. ಸ್ವಾರ್ಥವನ್ನು ಬಿಡಬೇಕು ಬೇರೆಯವರ ಒಳ್ಳೆಯದನ್ನು ಬಯಸುವುದು ಮಾನವನ ಕರ್ತವ್ಯ ಅದರಿಂದ ನಮ್ಮ ಜೀವನದಲ್ಲಿ ಸುಖ ಸಂತೋಷಗಳು ಬರುತ್ತವೆ ಎಂಬುದನ್ನು ತಿಳಿಯಬಹುದು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಯಲ್ಲಿದ್ದವರು ಕಷ್ಟದ ಕಾಲದಲ್ಲೂ ಕೂಡ ಅವರ ಜೊತೆಯಲ್ಲಿ ಇದ್ದು ಉಪಕಾರ ಸ್ಮರಣೆ ಯನ್ನು ಮಾಡ ಬೇಕು ಎಂಬ ಗುಣಗಳನ್ನು ಗಿಳಿಯ ವರ್ತನೆಯಿಂದ ಮಾನವನು ಕಲಿಯಬೇಕು.

**ಸಂದರ್ಭದೊಡನೆ ವಿವರಿಸಿರಿ.**

1. ಇಂಥಾ ಒಣಮರದಲ್ಲಿ ಏಕೆ ವಾಸಮಾಡುತ್ತಿದ್ದೀ?

ಸಂದರ್ಭ:ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ ಮಹಾಭಾರತ ಪಾತ್ರ ಸಂಗತಿಗಳು ಎಂಬ ಕೃತಿಯಿಂದ ಆಯ್ದ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ:-ಈ ಮಾತನ್ನು ಇಂದ್ರನಗಿಳಿಗೆ ಕೇಳಿದನು. ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಅದರ ತತ್ವನಿಷ್ಠೆಯನ್ನು ಕಂಡು ಇಂದ್ರನು ಪ್ರಶ್ನಿಸಿದನು. ಏನಾದರೂ ವರವನ್ನು ಕೊಡಬೇಕು ಎಂದು ಯೋಚಿಸಿ ಹೀಗೆ ಇಂದ್ರನು ಹೇಳಿದನು.

2. ಏನಾದರೂ ವರವನ್ನು ಕೇಳು ಕೊಡುತ್ತೇನೆ.

ಸಂದರ್ಭ:-ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ ಮಹಾ ಭಾರತ ಪಾತ್ರ ಸಂಗತಿಗಳು ಎಂಬ ಕೃತಿಯಿಂದ ಆಯ್ದ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ:-ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು. ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಅದರ ತತ್ವನಿಷ್ಠೆಯನ್ನು ಮೆಚ್ಚಿದ ಅವನು ಗಿಳಿಗೆ ಸಹಾಯ ಮಾಡಬೇಕು ಎಂದು ಯೋಚಿಸಿ ಅದನ್ನು ಕಂಡು ಇಂದ್ರನು ಹೀಗೆ ಹೇಳಿದನು.

3. ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ.

ಸಂದರ್ಭ:-ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ ಮಹಾಭಾರತ ಪಾತ್ರ ಸಂಗತಿಗಳು ಎಂಬ ಕೃತಿಯಿಂದ ಆಯ್ದ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ:-ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳಿತು. ಇಂದ್ರನು ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿ ಏನಾದರೂ ವರವನ್ನು ಕೇಳು ಎಂದಾಗ ಗಿಳಿಯು ಮರದ ಪರಿಸ್ಥಿತಿಯನ್ನು ನೋಡಿ ಅದನ್ನು ಮೊದಲಿನಂತೆ ಮಾಡು ಎಂದು ಇಂದ್ರನಿಗೆ ಹೀಗೆ ಉತ್ತರಿಸಿತು.

MAJEED SHAKEEL

## ಗದ್ಯ 2 ಅಸಿ-ಮಸಿ- ಕೃಷಿ

**ಸಾಹಿತಿಯ ಪರಿಚಯ:**

| | | |
|---|---|---|
| ಸಾಹಿತಿಯ ಹೆಸರು | : | ಪಂಡಿತರಾಧ್ಯ ಶಿವಾಚಾರ್ಯ |
| ಕಾಲ | : | 1951 |
| ಸ್ಥಳ | : | ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಹೆಡಿಯಾಲ |
| ಕೃತಿಗಳು | : | ಜೀವನ ದರ್ಶನ, ಕೈದೀವಿಗೆ, ಸಮಾಧಿಯ ಮೇಲೆ, ಸುಖ ಎಲ್ಲಿದೆ?, |
| ಪ್ರಶಸ್ತಿಗಳು | : | ಗೌರವ ಫೆಲೋಷಿಪ್, ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಾಕ್ಟರೇಟ್, ಪಾಲ್ ಹ್ಯಾರಿಸ್. |

**ಕಠಿಣ ಪದಗಳ ಅರ್ಥ:**

ಆಣೆಕಟ್ಟು-ನದಿಗೆ ಅಡ್ಡ ಕಟ್ಟಿರುವ ತಡೆಗೋಡೆ. ಅಸಿ-ಯುದ್ಧ. ಉಪೇಕ್ಷ-ತಿರಸ್ಕಾರ. ಕೃತಘ್ನ-ಉಪಕಾರ ಸ್ಮರಣೆ ಇಲ್ಲದಿರುವನು. ದುರಾಕ್ರಮಣ- ಮೋಸದ ದಾಳಿ. ನಿರಾಶವಾದಿ-ಜೀವನದಲ್ಲಿ ಆಸೆ ಕಳೆದುಕೊಂಡವ. ಬವಣೆ-ತೊಂದರೆ. ಮಸಿ-ಸಾಹಿತ್ಯ ರಚನೆ. ಮೇಟಿಗಂಬ-ಒಕ್ಕಲು ಕಣದ ಮಧ್ಯದಲ್ಲಿ ರುವ ಕಂಬ. ಸತ್ಪರಿಣಾಮ-ಒಳ್ಳೇಯ ಪರಿಣಾಮ. ಹರಿತ-ಚೋಪಾದ. ಅತಿವೃಷ್ಟಿ-ಅಗತ್ಯಕ್ಕಿಂತ ಹೆಚ್ಚು ಮಳೆ ಬೀಳುವದು. ಉತ್ಪ್ರೇಕ್ಷ-ಅಧಿಕವಾಗಿ ವರ್ಣಿಸುವದು. ಒಕ್ಕಲಿಗ-ರೈತ. ಗುಲಾಮ-ಅಡಿಯಾಳು. ನಶ್ವರ-ನಶಿಸು. ಬಜೆಟ್-ಆಯವ್ಯಯದ ಸಮತೋಲನ ಪಟ್ಟಿ. ಬಿಕ್ಕು-ಅಳು. ಮೇಟಿ-ವ್ಯವಸಾಯ. ರಾಟೆ-ಚಕ್ರ. ಸರ್ವಾಧಿಕಾರ-ಅಧಿಕಾರ ಒಬ್ಬನಲ್ಲಿರುವದು.

*  **ಈ ಪ್ರಶ್ನೆಗಳಿಗೆ ಒಂದು ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

ಉತ್ತರ; ದೇಶದ ಉಧ್ದಾರ ಅಸಿ ಮಸಿ ಕೃಷಿಯನ್ನು ಅವಲಂಬಿಸಿದೆ ಎಂದು ಲೇಖಕರು ಹೇಳೆದ್ದಾರೆ.

2. ಅಸಿ-ಮಸಿ ಎಂದರೇನು?

ಉತ್ತರ: ಅಸಿ ಅಂದರೆ ಕೃಷಿ ಮಸಿ ಅಂದರೆ ಸಾಹಿತ್ಯ.

3. ಈ ನಾಡಿನ ಬೆನ್ನೆಲುಬು ಯಾರು?

ಉತ್ತರ: ಈ ನಾಡಿನ ಬೆನ್ನಲಬು ರೈತ.

4. ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?

ಉತ್ತರ; ಪಂಡಿತಾರಾಧ್ಯ ಶಿವಾಚಾರ್ಯ ರಂಗ ಜಂಗಮ ಎಂದು ಖ್ಯಾತರಾಗಿದ್ದಾರೆ.

5. ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?

ಉತ್ತರ: ಪಂಡಿತರಾಧ್ಯ ಶಿವಚಾರ್ಯರಿಗೆ ರೋಡರಿ ಸಂಸ್ಥೆ ಪಾಲ್ ಹ್ಯಾರಿಸ್ ಪ್ರಶಸ್ತಿ ನೀಡಿದೆ.

*  **ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?

ಉತ್ತರ: ದೇಶದ ಪ್ರಗತಿ, ಜನರಕರಿತು ಜನರಾಡುವ ಮಾತುಗಳೆಂದರೆ ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ, ದೊಡ್ಡದೊಡ್ಡ ಅಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯುತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ ಎಂದು ಹೇಳಬಹುದು.

2. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?

ಉತ್ತರ: ನಮ್ಮ ದೇಶದ ರಕ್ಷಣಾಪಡೆ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ

MAJEED SHAKEEL

ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಮತ್ತು ಬಲಿಷ್ಠ ದೇಶ ಎಲ್ಲರನ್ನೂ ಹೊಡೆದುಹಾಕಿ ತಾನೇ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು.

3. ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ?

ಉತ್ತರ: ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರೆವಣಿಗೆ ಅಷ್ಟೊಂದು ಪರಿಣಾಮಕಾರಿ ಆದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸ ಬಲ್ಲುದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರೆವಣಿಗೆ ಹೆಚ್ಚು ಶಕ್ತಿಶಾಲಿಯಾದುದು.

4. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

ಉತ್ತರ:ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ಬರುತ್ತಿವೆ. ಮತ್ತು ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇವೆಲ್ಲ ರೈತರ ಸಮಸ್ಯೆಗಳು.

5. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

ಉತ್ತರ: ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ದೇಶದ ಆಟ ನಡೆಯುವದಿಲ್ಲ. ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವಿಲ್ಲ. ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ, ಅಕ್ಕಿ, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿ ರೈತ ಬೇಕು.

6. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?

ಉತ್ತರ: ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ ಕೋಟಿ ವಿದ್ಯೆಗಳಲ್ಲಿ ವ್ಯವಸಾಯವೇ ಮೇಲು. ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೆ ನಡೆಯದು. ಎಂದು ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿದ್ದಾರೆ.

* **ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೇಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿದುತ್ತದೆ?

ಉತ್ತರ: ಸೈನಿಕರು ತಮ್ಮ ತಾಯಿ ನಾಡಿಗಾಗಿ ದೂರದಲ್ಲಿ ಗಡಿಕಾಯುತ್ತಾರೆ. ದಾಳಿಯನ್ನು ತಡೆಯಲು ಹಗಲು ರಾತ್ರಿ ಗಡಿ ಕಾಯುವ ಕೆಲಸವನ್ನು ಮಳೆ ಚಳಿ ಬಿಸಿಲಿನಲ್ಲಿ ಎಷ್ಟು ಕಷ್ಟ ಬಂದರೂ ಧೈರ್ಯದಿಂದ ಎದುರಿಸುತ್ತಾರೆ. ಸೈನಿಕ ಬಲ ಇದ್ದಾಗ ಮಾತ್ರ ರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶಕ್ಕೆ ನುಗ್ಗಿ ನಮ್ಮ ಮೇಲೆ ದರಾಕ್ರಮ ಮಾಡಿ ಯುದ್ಧದಿಂದ ನಮ್ಮನ್ನು ಸೋಲಿಸಿ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದ್ದರಿಂದ ದೇಶದ ರಕ್ಷಣೆಗೆ ಸೈನಿಕರು ಅಗತ್ಯ, ಸೈನಿಕರು ಪ್ರಬಲರಿದ್ದಾಗ ಮಾತ್ರ ದೇಶವನ್ನು ರಕ್ಷಿಸಿಕೊಳ್ಳಲು ಸಾಧ್ಯ. ದೇಶದಲ್ಲಿ ಸೈನ್ಯವನ್ನು ಭೂಸೇನೆ, ವಾಯುಸೇನೆ, ಜಲಸೇನೆ ವಿಭಾಗಿಸಿ ಎಷ್ಟೇ ಖರ್ಚಾದರು ಚಿಂತೆ ಇಲ್ಲ ಎಂದು ನಮ್ಮ ದೇಶವನ್ನು ಕಾಪಾಡುವುದು ನಮ್ಮ ಧರ್ಮ ಎಂದು ತಿಳಿದು ಮಿಸಲಾಗಿಡುತ್ತಾರೆ.

2. ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು?

ಉತ್ತರ: ಅಸಿಯ ನಂತರ ಮಸಿಯ ಪ್ರಾಮುಖ್ಯತೆ ಬಗ್ಗೆ ಅಂದರೆ ಸಾಹಿತ್ಯದ ಬಗ್ಗೆ ವಿವರಿಸುವುದು ಏನೆಂದರೆ ಅಸಿಗಿಂತ ಮಸಿ ಮುಖ್ಯವಾಗಿದೆ. ಸಾಹಿತ್ಯದ ರಚನೆಯಿಂದ ಉನ್ನತಿ ಸಾಧಿಸಬಹುದಾಗಿದೆ. ಲೇಖಕರು ಪೆನ್ನು ಖಡ್ಗಕ್ಕಿಂತ ಹರಿತ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಖಡ್ಗದಿಂದ ಸಾಧಿಸಾಲಗದಿದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಉದಾಹರಣೆಗೆ ಒಂದು ಲೇಖನದಿಂದ ಆ ರಾಜ್ಯ ಅಥವಾ ದೇಶದ ಸರ್ಕಾರವನ್ನು ಉರುಳಿಸಿ ಮುಂದೊಂದು ದಿನ ಹೊಸ ಸರ್ಕಾರವನ್ನೇ ರಚಿಸಬಹುದು ಅಂಥಹ ಎಷ್ಟೋ ಉದಾಹರಣೆಗಳನ್ನು ದಿನನಿತ್ಯ ಪತ್ರಿಕೆಗಳಲ್ಲಿ ಕಾಣಬಹುದು. ಇದರ ಅರ್ಥ ಬರವಣಿಗೆ ಎಷ್ಟೋಂದು ಪರಿಣಾಮಕಾರಿ ಎಂದು ಬಿಂಬಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಲ್ಲಿಯವರೆಗೆ ಸಾಹಿತಿಗಳಿಗೆ ನಮ್ಮ ನಾಡಿನಲ್ಲಿ ಅಪಾರ ಗೌರವವಿದೆ. ಈ ಗೌರವಿರುವುದು ಅವರ ಸಾಹಿತ್ಯದ ಸತ್ವದಿಂದಾಗಿ ಅಭಿವೃದ್ಧಿಯ ಮೆಟ್ಟಿಲು

MAJEED SHAKEEL

ಯುಳಿಯಲು ಸಾಧ್ಯ. ಬದುಕಿಗೆ ಶಿವಶರಣ ಬಸವಾದಿಗಳ ವಚನಗಳನ್ನು ದಾಸ ಕಿರ್ತನೆಗಳು ಇಂದಿಗೂ ಪ್ರಸ್ತುತ ಅವರು ಬರೆದಿರುವ ಸಾಹಿತ್ಯ ಈಗಿನವರಿಗೆ ಮುನ್ನಡಿಯಂತಾಗಿದೆ.

3. ಕೃಷಿ ನಾಡಿನ ಬೆನ್ನೆಲುಬು ಈ ಮಾತನ್ನು ಸಮರ್ಥಿಸಿರಿ.

ಉತ್ತರ:ಅಸಿ ಮತ್ತು ಮಸಿಗಳಿಗಿಂತ ಮಹತ್ವವಾದದ್ದು ಕೃಷಿ ಅಂದರೆ ಒಕ್ಕಲಿಗ. ಒಕ್ಕಲಿಗ ಒಕ್ಕಿದರೆ ಜಗವೇಲ್ಲಾ ಬಿಕ್ಕುವುದು ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಇದರ ಅರ್ಥ ಒಂದು ವೇಳೆ ಕೃಷಿಯನ್ನು ಮಾಡದೆ ಕೃಷಿಕ ಸತ್ಯಾಗ್ರಹ ಮಾಡಿಸದರೆ ನಾವು ಭಿಕ್ಷುಕರಂತೆ ಆಗುತ್ತೇವೆ. ತಿನ್ನಲು ಆಹಾರವಿಲ್ಲದೆ ನರಳುತ್ತೇವೆ ಎಲ್ಲಾ ವರ್ಗದ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಇವತ್ತು ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ಬದುಕುವದು ಅಸಾಧ್ಯ ಯಾರೂ ಕಾರ್ಖಾನೆಗಳಿಂದ ಅಕ್ಕಿ, ರಾಗಿ ಪಡೆಯಲು ಸಾಧ್ಯವಿಲ್ಲ. ಇದಕ್ಕೆ ಭೂಮಿ ಬೇಕು. ರೈತರು ಬೆವರು ಸುರಿಸಿ ಭೂಮಿಯನ್ನು ಹದಮಾಡಿ ಬೆಳೆಯನ್ನು ಬೆಳೆಯಲೇ ಬೇಕು ಹಾಗಾದರೆ ಮಾತ್ರ ಪ್ರಗತಿ ಸಾಧ್ಯ. ಲೇಖಕರು ರೈತರನ್ನು ಅವರ ವೃತ್ತಿಯನ್ನು ತಮ್ಮ ಲೇಖನದಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಎಲ್ಲಾ ವಿದ್ಯೆಗಳಿಗಿಂತ ವ್ಯವಸಾಯ ವಿದ್ಯೆಯೇ ಮೇಲು ಎನ್ನಬಹುದು.

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.

ಸಂದರ್ಭ; ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ-ಮಸಿ-ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ವಾಕ್ಯವನ್ನು ಲೇಖಕರು ಕೃಷಿ ಮತ್ತು ರೈತನ ಸಂಕಷ್ಟ ಮತ್ತು ಅದರ ಮಹತ್ವವನ್ನು ವಿವರಿಸುವ ಸಂಧರ್ಭದಲ್ಲಿ ಹೇಳಿದ್ದಾರೆ. ಅಸಿ-ಮಸಿಗಿಂತ ಕೃಷಿ ಮಹತ್ವದ್ದು ಅಂದರೆ ದೇಶದ ಸೈನಿಕರು ಮತ್ತು ಸಾಹಿತ್ಯಗಿಂತ ಕೃಷಿ ವೃತ್ತಿ ಮತ್ತು ಕೃಷಿಕರು ಪ್ರಮುಖವಾಗಿದೆ. ಇದು ಇಲ್ಲದೇ ದೇಶ ಪ್ರಗತಿ ಹೊಂದಲು ಅಸಾಧ್ಯ.

2. ರೈತರು ನಿರಾಶಾವಾದಿಗಳಾದರೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ.

ಸಂದರ್ಭ; ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ-ಮಸಿ-ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ:ರೈತರನ್ನು ಕಾಣುವ ದೃಷ್ಟಿಯನ್ನು ವಿವರಿಸುವಾಗ ಅವರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಅವರು ಕೆಲಸವನ್ನು ಶ್ರದ್ದೆಯಿಂದ ಮಾಡುತ್ತಾರೆ ಎಂದು ವಿವರಿಸುವಾಗ ಲೇಖಕರು ಹೇಳಿದ್ದಾರೆ. ಪ್ರತಿಯೊಬ್ಬರು ಬದಕು ಕೃಷಿಕರನ್ನು ಅವಲಂಬಿಸಿದರೆ ಅವರೆಲ್ಲರು ಕೃಷಿಯನ್ನು ಮಾಡುವ ರೈತನನ್ನು ನಿರ್ಲಕ್ಷಿಸಿದ್ದಾರೆ, ತಮ್ಮ ಮನದಾಳದ ಮಾತುಗಳಿಂದ ಲೇಖಕರು ಹೇಳಿದ್ದಾರೆ.

3. ಅವರು ಯಾರಿಗೂ ಮೋಸ, ವಂಚನೆ ಮಾಡುವವರೆಲ್ಲ.

ಸಂದರ್ಭ:ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ-ಮಸಿ-ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ವಾಕ್ಯವನ್ನು ಲೇಖಕರು ಕೃಷಿಕರ ಮುಗ್ದತೆಯನ್ನು ಎತ್ತಿ ಹಿಡಿದಿದ್ದಾರೆ. ಕಳಪೆ ಬಿಜ ಸಿಕ್ಕಿದರೆ ಉತ್ತಮವಾದ ಬೆಳೆ ಬೆಳೆಯುತ್ತಾರೆ. ಸರಿಯಾಗಿ ಮಳೆ ಬಾರದಿದ್ದರೂ, ನೀರನ್ನು ಸಂಗ್ರಹಿಸಿ ಭೂಮಿಯನ್ನು ಉಳುಮೆ ಮಾಡುತ್ತಾರೆ. ಆದರೆ ಇವರು ಎಲ್ಲರಿಂದ ಮೋಸ ವಂಚನೆಗೆ ಒಳಗಾಗುತ್ತಾರೆ ಎಂದು ಲೇಖಕರು ಮೇಲಿನ ಮಾತು ಹೇಳಿದ್ದಾರೆ.

4. ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯಮೆಟ್ಟಿಲು ತುಳಿಯಲು ಸಾಧ್ಯ?

ಸಂದರ್ಭ:ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ-ಮಸಿ-ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ಅಸಿಗಂತ ಮಸಿ ಮುಖ್ಯವಾದದ್ದು ಎಂದು ಹೇಳುವ ಸಂದರ್ಭದಲ್ಲಿ ಹೇಳಿದ್ದಾರೆ. ಪತ್ರಿಕೆಯಲ್ಲಿ ಬರುವ ಒಂದು ಲೇಖನ ಸರ್ಕಾರವನ್ನು ಉರಳಿಸುವಷ್ಟು ಪ್ರಭಾವಶಾಲಿ ಇರುತ್ತದೆ, ನಾಳೆ ಮತ್ತೊಂದು ಸರ್ಕಾರವನ್ನು ತರಬಹುದು. ಸಾಹಿತ್ಯದ ಸತ್ವದಿಂದ ಇಂತಹ ಸಾಹಿತಿಗಳು ನಾಡಿನಲ್ಲಿ ಹೆಚ್ಚು ಇದ್ದರೆ ಸಮಾಜ ಪ್ರಗತಿಯ ಮೆಟ್ಟಲು ತುಳಿವುದು ಸಾಧ್ಯ.

## ಗದ್ಯ 3.ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

*** ಸಾಹಿತಿಯ ಪರಿಚಯ ಬರೆಯಿರಿ:**

ಸಾಹಿತಿಯ ಹೆಸರು : ರಮೇಶ ಗೌಡ ಮಲ್ಲನಗೌಡ ಕಲ್ಲನಗೌಡ

ಕಾಲ : 1975

ಸ್ಥಳ : ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕಿನ ಕಿತ್ತೂರು.

ಕೃತಿಗಳು: ಅಮೃತಕ್ಕೆ ಹಾರಿದ ಗರುಡ, ರೂಪ ಬಯಲು, ಗಾನಯೋಗಿಪಂಡಿತ ಪುಟ್ಟರಾಜ ಕವಿ ಗವಾಯಿಗಳು.

ಪ್ರಶಸ್ತಿಗಳು : ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ವರ್ಷದ ಉತ್ತಮ ಕೃತಿ ಪ್ರಶಸ್ತಿಗಳು

**ಪದಗಳ ಅರ್ಥ:**

ಅಂಧ-ಕುರುಡ. ಅನಂತ-ಕೊನೆಯಿಲ್ಲದ. ಅಭಿಲಾಶೆ-ಆಸೆ. ಆರ್ತ-ಕಷ್ಟಕ್ಕೆ ಸಿಕ್ಕ. ಗ್ರಹಿಸಿ_ತಿಳಿದುಕೊಂಡು. ನಿಷ್ಣತ-ನಿಪುಣ. ಬಾಷ್ಪ-ಕಣ್ಣೀರು. ಮಾಧುರ್ಯ-ಸಿಹಿ. ವಿಚಲಿತ-ಚಂಚಲ. ವೇದನೆ-ನೋವು. ಸುವರ್ಣ-ಬಂಗಾರ. ಸಿಂಹಾವಲೋಕನೆ-ಹಿನ್ನೋಟ. ಅಂತ:ಕರಣ-ಮನಸ್ಸು. ಅನಿಕೇತನ-ಮನೆ ಇಲ್ಲದವನು. ಅಮರ_ಶಾಶ್ವತವಾಗು. ಉದರ-ಹೊಟ್ಟೆ. ಜಂಗಮ-ಚಲಿಸುವ. ಪರಿ-ಕಣ್ಣಿನ ರೊಗ. ಮುಡುಪು-ಮೀಸಲು. ವಿಷಣ್ಣ-ಖಿನ್ನವಾದ. ಶಯನಗೈದು-ಮಲಗುವದು.

*** ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರ ಬರೆಯಿರಿ**.

1. ಪುಟ್ಟರಾಜರ ತಂದೆ ತಾಯಿಯ ಹೆಸರೇನು?

ಉತ್ತರ: ಪುಟ್ಟಯ್ಯನ ತಂದೆ ರೇವಯ್ಯ ತಾಯಿ ಸಿದ್ದಮ್ಮ.

2. ಶ್ರೇಷ್ಟ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

ಉತ್ತರ:ಶ್ರೇಷ್ಟ ಗುರು ಶಿಷ್ಯರ ಮನಸ್ಸನ್ನು ಓದಿ ಅವರ ಅಭಿಲಾಶೆಗೆ ತಕ್ಕಂತೆ ಜ್ಞಾನ ಕೊಡುವ ಶಕ್ತಿ ಇರುತ್ತದೆ.

3. ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಯಲ್ಲಿ ಏನೆಂದು ಬೇಡಿಕೊಂಡಳು?

ಉತ್ತರ: ತಾಯಿ ಸಿದ್ದಮ್ಮ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಪಮಚಾಕ್ಷರಿ ಗವಾಯಿಗಳಲ್ಲಿ ಬೇಡಿಕೊಂಡಳು.

4. ಪುಟ್ಟರಾಜರು ಯಾವ ಯಾವ ಬಾಶೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

ಉತ್ತರ: ಪುಟ್ಟರಜರು ಕನ್ನಡ, ಹಿಂದಿ, ಸಂಸ್ಕ್ರತ ಭಾಶೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು.

5. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?

ಉತ್ತರ:ಪಂಚಾಕ್ಷರಿ ಗವಾಯಿ ಖಾದಿ ಬಟ್ಟೆಯನ್ನು ಧರಿಸಿಕೊಂಡಾಗ ಪುಟ್ಟರಾಜರು ಸಹ ಖಾದಿ ಬಟ್ಟೆ ತೊಡಲು ನಿರ್ಧರಿಸಿದರು.

*** ಈ ಪಶ್ನೆಗಳಿಗೆ 3 -4 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

1. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ?

ಉತ್ತರ: ಬಾಲಕ ಪುಟ್ಟಯ್ಯನಿಗೆ ಕಣ್ಣು ಬೇನೆ ಬಂದು ಕಣ್ಣಿಗೆ ಪರಿ ಬಂದಿತ್ತು. ಕಣ್ಣಿಗೆ ತೊನಸಿ ತೋರಿಸುವಾಗ ತೊನಸಿ ಕಣ್ಣಿನಲ್ಲಿ ಬಿದ್ದುಬಿಟ್ಟವು. ಅರಿ ಹರಿಯುವ ಬದಲು ಗುಡ್ಡಿ ಹರಿದು ಕಣ್ಣು ಹೋದವು.

2. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?



MAJEED SHAKEEL

ಉತ್ತರ; ಪಂಚಾಕ್ಷರಿ ಗವಾಯಿಯ ಸಂಚಾರಿ ಸಂಗೀತ ಶಾಲೆ ಒಮ್ಮೆ ಗವಿಮಠದಲ್ಲಿ ಕ್ಯಾಂಪ ಹಾಕಿತು. ಮಾವನ ಜೊತೆ ಪುಟ್ಟಯ್ಯ ಬಂದು ಶಿಷ್ಯತ್ವ ಸ್ವೀಕರಿಸಿ ಅವರ ಶಷ್ಯರಾದರು.

3. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಯಾವ ಮನಸ್ಥಿತಿ ಹೊಂದಿದ್ದನು?

ಉತ್ತರ: ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಪುಟ್ಟಯ್ಯ ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೆ ನನಗೆ ಮಂತ್ರ. ಅವರ ನಡಯೆ ನನಗೆ ಆಚಾರವಾಗಬೇಕು. ಎಂಬ ಮನ:ಸ್ಥಿತಿ ಹೊಂದಿದ್ದರು.

4. ಪುಟ್ಟರಾಜ ಗವಾಯಿ ಯಾವ ಯಾವ ವಿದ್ಯೆಗಳಲ್ಲಿ ನಿಷ್ಣತರಾದರು?

ಉತ್ತರ: ಪುಟ್ಟರಾಜರಿಗೆ ಅಷ್ಟಧ್ಯಾಯಿ, ಕಾತಂತ್ರ, ಶಬ್ದಮಣಿ ದರ್ಪಣ, ಕೈವಲ್ಯ ಪದ್ದತಿ, ತರ್ಕಶಾಸ್ತ್ರ, ನ್ಯಾಯ ಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ, ಮತ್ತು ಕನ್ನಡ ವ್ಯಾಕರ್ಣ, ಮುಂತಾದ ವಿದ್ಯೆಗಳಲ್ಲಿ ನಿಷ್ಣತರಾದರು.

5. ತಾಯಿ ಸಿದ್ದಮ್ಮ ಪುಟ್ಟರಾಜನ್ನು ಏನೆಂದು ಆಶಿರ್ವಾದಿಸಿದರು?

ಉತ್ತರ: ನಿನ್ನಂಥ ಶ್ರೇಷ್ಠ ಪುತ್ರ ರತ್ನ ಒಂದನ್ನು ಹೆತ್ತ ಭಾಗ್ಯ ನನ್ನದಾಗಲಿ. ಹೆಂಡತಿ ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿತನಾಗುವದು ನಿನಗೆ ಇಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವದು ಬಾಡ. ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆ ಎಂದು ಆಶಿರ್ವಾದಿಸಿದರು.

6. ಪುಟ್ಟರಾಜರ ವೇಷಾಭೂಶಣಗಳು ಹೇಗಿದ್ದವು?

ಉತ್ತರ: ಪುಟ್ಟರಾಜ ಬಿಳಿ ಉದ್ದನೆಯ ಅಂಗಿ ಪಂಚೆ, ತಲೆಯ ಮೇಲೆ ಪಟಗ, ನೊಸಲಲ್ಲಿ ತ್ರಿಪುಂಡ ಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದದಲ್ಲಿ ಕಟ್ಟಿಗೆಯ ಆವುಗೆಗಳು, ಕೈ ಯಲ್ಲಿ ಬೆತ್ತ. ಇವು ಪುಟ್ಟರಾಜರ ವೆಷಾಭೋಷಣಗಳು.

7. ಪುಟ್ಟರಾಜರಿಗೆ ದೊರೆತ ಪ್ರಶಸ್ತಿಗಳಾವುವು?

ಉತ್ತರ:ಪುಟ್ಟರಾಜರಿಗೆ ನಾಡೋಜ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೋಷಣ ಪ್ರಶಸ್ತಿ, ಗೌರವ ಡಾಕ್ಟರೇಟ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

8, ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ನೀವು ಧೈರ್ಯ ತುಂಬುವಿರಿ?

ಉತ್ತರ: ನೀವು ಎಲ್ಲರಂತೆ ಇರದಿದ್ದರು ನಿಮ್ಮಲ್ಲಿರುವ ಸೂಕ್ಷ್ಮಮತಿ, ಬುದ್ಧಿಶಕ್ತಿಯಿಂದ ಏಕಾಗ್ರತೆಯಿಂದ ಕಲಿಕೆಯಲ್ಲಿ ತೊಡಗಿದರೆ ಸಾಧ್ಯವಾದದನ್ನು ಸಾಧಿಸಬಹುದು. ಪಂಚಾಕ್ಷರಿ ಗವಾಯಿ, ಪುಟ್ಟರಾಜಗವಾಯಿ ಗಳಂತೆ ಸಾಧಕರಾಗಬಹುದು. ದೇವರು ಒಂದು ಅಂಗವನ್ನು ಕಡಿಮೆ ಕೊಟ್ಟಿದ್ದರು ಬೇರೆ ಅಂಗಗಳಿಗೆ ಅಪರಿಮಿತವಾದ ಶಕ್ತಿಯನ್ನು ನೀಡಿರುತ್ತಾನೆ ಎಂದು ಅವರಲ್ಲಿ ಉತ್ಸಾಹ ತುಂಬಬಹುದು.

* **ಸುಮಾರು ಹತ್ತು ವಾಕ್ಯಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವದಲ್ಲಿ ನಿಜವಾಗಿದೆ ಹೇಗೆ? ಇದನ್ನು ಸಮರ್ಧಿಸಿ.

ಉತ್ತರ:ಪುಟ್ಟರಾಜರು ಸಂಗೀತದೊಂದಿಗೆ ಸ್ವರಮಂಡಲ, ಸಾರಂಗಿ, ಸರೋದ, ಪಿಟೀಲು, ಹಾರ್ಮೋನಿಯಂ ಮತ್ತು ತಬಲಾ ವಾದನದಲ್ಲಿ ಪ್ರಾವೀಣ್ಯವನ್ನು ಪಡೆದರು. ಹಿಂದೂಸ್ತಾನಿ ಕರ್ನಾಟಕ ಸಂಗೀತವನ್ನು ಸಿದ್ಧಿಗಳಿಸಿಕೊಂಡರು. ಅಂಧರ ಓದಿನ ಬ್ರೈಲ್ ಲಿಪಿಯನ್ನು ಕಲಿತರು. ಕನ್ನಡದಲ್ಲಿ ಅರವತ್ತಕ್ಕೂ ಹೆಚ್ಚಿನ ಸಂಖ್ಯೆಯ ಕೃತಿರಚನೆ ಮಾಡಿದರು. ಬಸವೇಶ್ವರ, ಶ್ರೀ ಶಿವಲಿಂಗೇಶ್ವರ, ಅಡವಿ ಸಿದ್ದೇಶ್ವರ, ಗುಡ್ಡಾಪುರದ ದಾನಮ್ಮ ಮೊದಲಾದ ಹದಿನೆಂಟು ನಾಟಕಗಳನ್ನು ರಚಿಸಿದ್ದಾರೆ. ಪಂಚಾಕ್ಷರಿವಾಣಿ ಎಂಬ ಸಾರ್ವಜನಿಕ ಪತ್ರಿಕೆಗೆ ಮಾರ್ಗದರ್ಶಕರೂ ಆಗಿದ್ದರು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಜವಾಬ್ದಾರಿಯನ್ನು ಹೊತ್ತು ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸುತ್ತಾ ಬಡಮಕ್ಕಳ ಜ್ಞಾನದಾಹವನ್ನು ಹಿಂಗಿಸಿದ್ದರು. ಈ ಎಲ್ಲಾ ಸಾಧನೆಗಳನ್ನು ನೋಡಿದರೆ ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬುದು ಪುಟ್ಟರಾಜರ ವಿಷಯದಲ್ಲಿ ನಿಜವಾಗಿದೆ.

2. ಬಾಲಕ ಪುಟ್ಟಯ್ಯ ಹಾರ್ಮುನಿಯಂ ನುಡಿಸಿದ ಪ್ರಸಂಗ ವಿವರಿಸಿರಿ.

ಉತ್ತರ: ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ನುಡಿಸಲಾರಂಭಿಸಿದ.

MAJEED SHAKEEL

ಹಾರ್ಮೋನಿಯಂ ನಿಂದ ಹೊರಟ ನಾದ ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಮಾವ ಮನೆಯ ಹೊರಗೆ, ಒಳಗೆ ಜನರನ್ನು ಕಂಡು ಆಶ್ಚರ್ಯಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಮ್ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಭಾವಿಸಿ ಒಳಗೆ ಬಂದರು. ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು. ಮಾವನ ಪಾದ ಸಪ್ಪಳದಿಂದ ವಿಚಲಿತನಾದ ಬಾಲಕ ಒಮ್ಮೆಲೇ ಹಾರ್ಮೋನಿಯಂ ನುಡಿಸುವುದನ್ನು ನಿಲ್ಲಿಸಿ, ಮಾವ ತಪ್ಪಾತು ಕ್ಷಮಿಸು, ನೀನು ಮುಟ್ಟು ಎಂದರೂ ನಾನು ಇನ್ನೆಂದೂ ನಿನ್ನ ಹಾರ್ಮೋನಿಯಮ್ ಮುಟ್ಟುವುದಿಲ್ಲ ಎನ್ನುತ್ತ ಮಾವನ ಪಾದಗಳಿಗೆ ತಡವಡಿಸಿದನು. ಆಗ ಮಾವ ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ,ನಿನ್ನದು ಅದು ನಿನ್ನ ಆಸ್ತಿ ಎಂದರು. ಹೀಗೆ ಹಾರ್ಮೋನಿಯಂ ನುಡಿಸಿದನು.

3. ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.

ಉತ್ತರ: ಪಂಚಾಕ್ಷರ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ-ಆಲೂರಿನಲ್ಲಿ ಕ್ಯಾಂಪ್ ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ಧಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿ ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು ಅವನು ಬಂದರೆ ಕರೆದುಕೊಂಡು ಹೋಗು ತಾಯಿ ಎಂದು ಹೇಳಿದರು. ಸಿದ್ಧಮ್ಮನವರು ಪುಟ್ಟಯ್ಯ ಕಡೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನ ನನಗೆ, ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ. ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ ಎಂದು ಸಿದ್ಧಮ್ಮನವರ ಪಾದಕ್ಕೆರಗಿ ಆರ್ತರಾದರು.

4. ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆಗಳೇನು?

ಉತ್ತರ: ವಿಶೇಷ ಚೇತನರನ್ನು ಪ್ರೋತ್ಸಹಿಸಬೇಕು. ಅವರಲ್ಲಿ ಅಡಗಿರುವ ಶಕ್ತಿ ಹೊರಬರುವಂತೆ ಹುರಿದುಂಬಿಸಬೇಕು. ಅವರಿಗೆ ತಕ್ಕ ಸ್ಥಾನವನ್ನು ಕೊಟ್ಟು ಗೌರವಿಸಬೇಕು. ಸಾಮಾಜಿಕ ಸ್ಥಳಗಳಲ್ಲಿ ಅವರಿಗಾಗಿ ಮೀಸಲಾತಿ ಇಡಬೇಕು. ಅವರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಹಾಗು ಪುಟ್ಟರಾಜ ಗವಾಯಿ ಅಂಥ ಗಣ್ಯ ವ್ಯಕ್ತಿಗಳ ಕಥೆಗಳನ್ನು ಹೇಳಿ ಪ್ರೋತ್ಸಹಿಸಬೇಕು. ಅವರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಬೇಕು ಪುರೈಸಬೇಕು. ಈ ರೀತಿಯಾಗಿ ನಾವು ವಿಷೇಶ ಚೇತನರಿಗೆ ಪ್ರೋತ್ಸಹಿಸಬೇಕು.

*** ಸಂದರ್ಭದೊಡನೆ ವಿವರಿಸಿರಿ**

1. ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು.

ಸಂದರ್ಭ; ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಬರೆದಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

ಸ್ವಾರಸ್ಯ: ಈ ಸಾಲನ್ನು ಪುಟ್ಟರಾಜರು ಹೇಳದ ಮಾತುಗಳಲ್ಲೇ ಲೇಖಕರು ಹೇಳಿದ್ದಾರೆ. ಪುಟ್ಟರಾಜರ ಕಣ್ಣಿಗೆ ಪರಿ ಬಂದಾಗ ಕಣ್ಣಿಗೆ ತೋನಸಿ ತೋರಿಸಲು ಹೋಗಿ ತೋನಸಿ ಕಣ್ಣಿನಲ್ಲಿ ಬಿದ್ದು ಅರಿ ಹರಿಯುವ ಬದಲು ಕಣ್ಣಿನ ಗುಡ್ಡಿನ ಹರಿದುಹಾಕಿತು. ಎಂದು ಹೇಳುವಾಗ ಮೇಲಿನ ಮಾತು ಬಂದಿದೆ

2. ''ಮಗು ಇಂದಿನಿಂದ ಈ ಹಾರ್ಮುನಿಯಂ ನನ್ನದಲ್ಲ''

ಸಂದರ್ಭ; ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಬರೆದಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

ಸ್ವಾರಸ್ಯ; ಈ ಮತನ್ನು ಪುಟ್ಟರಾಜರ ಸೋದರಮಾವ ಹೇಳಿದ್ದಾರೆ. ಪುಟ್ಟರಾಜರು ಹಾರ್ಮುನಿಯಂ ಬಾರಿಸಿದಾಗ ಅದರ ಧ್ವನಿ ಕೇಳಿ ಊರಿನ ಜನ ಮನೆಯ ಒಳಹೊರಗೆ ಬಂದು ಕೇಳುತ್ತಾರೆ. ಸೋದರ ಮಾವ ಬಂದದ್ದು

MAJEED SHAKEEL

ನೋಡಿ ಪುಟ್ಟರಾಜ ತಪ್ಪಾಯಿತು ಮಾವ ಇನ್ನು ಮುಂದೆ ಹಾರ್ಮುನಿಯಂ ಮುಟ್ಟುವದಿಲ್ಲ ಎಂದು ಹೇಳಿದಾಗ ಸೋದರಮಾವ ಮೇಲಿನ ಮಾತು ಹೇಳುತ್ತಾರೆ.

3. ''ಅವನು ಬಂದರೆ ಕರೆದುಕೊಂಡು ಹೋಗು ತಾಯಿ''

ಸಂದರ್ಭ; ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಬರೆದಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

ಸ್ವಾರಸ್ಯ: ಈ ಮಾತನ್ನು ಪಂಚಾಕ್ಷರಿ ಗವಾಯಿ ಪುಟ್ಟರಾಜರ ತಾಯಿಗೆ ಹೇಳುತ್ತಾರೆ. ಪಂಚಾಕ್ಷರಿ ಗವಾಯಿಯ ಸಂಚಾರಿ ಶಾಲೆ ಹೊಳೆ ಆಲೋರಿನಲ್ಲಿ ಕ್ಯಾಂಪ ಹಾಕಿದಾಗ ಪುಟ್ಟರಾಜರ ತಾಯಿ ಮಗನನ್ನು ಮನಗೆ ಬರುವದಕ್ಕೆ ಹೇಳಿದಾಗ ಪಂಚಾಕ್ಷರಿ ಮೇಲಿನ ಮಾತು ಹೇಳುತ್ತಾರೆ.

4. ''ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ''

ಸಂದರ್ಭ; ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಬರೆದಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

ಸ್ವಾರಸ್ಯ; ಈ ಮಾತನ್ನು ಪುಟ್ಟರಾಜ ತನ್ನ ತಾಯಿಗೆ ಹೇಳಿದ್ದಾರೆ. ತಾಯಿ ಮಗನನ್ನು ಮನೆಗೆ ಬರುವಂತೆ ಕೇಳಿಕೋಂಡಾಗ ತಾಯಿಯ ಪಾದವನ್ನು ಹಿಡಿದು ಮೇಲಿನ ಮಾತು ಹೇಳುತ್ತಾರೆ

5. "ಅವರ ಬಾಹ್ಯ ಕಣ್ಣು ಅರಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು"

ಸಂದರ್ಭ; ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಬರೆದಿರುವ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

ಸ್ವಾರಸ್ಯ:ಈ ಮಾತು ಲೇಖಕರು ಗುರು ಶಿಷ್ಯರ ಬಗ್ಗೆ ಹೇಳಿದ್ದಾರೆ. ಪುಟ್ಟರಾಜರು ಆಶ್ರಮದ ಎಲ್ಲಾ ಸಹಪಾಠಿ ಗಳಿಕಿಂತ ಬಹಳ ಬೇಗ ಗುರುಗಳು ಹೇಳಿದ್ದನ್ನು ಕಲಿತುಕೊಂಡರು. ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

## ಗದ್ಯ -4. ಹಕ್ಕಿಗೂಡುಗಳ ನಿಗೂಡ ಜಗತ್ತು.

***ಸಾಹಿತಿಯ ಪರಿಚಯ:**

ಸಾಹಿತಿಯ ಹೆಸರು : ಬಿ. ಎಸ್ ಕೃಪಾಕರ. ಕೆ ಸೇನಾನಿ.

ಕೃತಿಗಳು :ಎವಾಕ್ ಆನ್ ದಿ ವೈಲ್ಡ ಸೈಡ್, ವ್ಯಾಲಿ ಆಫ್ ಬ್ಯಾಂಬೂಸ್ ಅಂಡ ಫರ್ಗಟನ್ ವಿಲೇಜಸ್, ಜೀವಜಾಲ.

***ಕಠಿಣ ಪದಗಳ ಅರ್ಥ;**

ಅನಂತ-ಕೊನೆಯಿಲ್ಲದ. ಅಪೂರ್ವ-ಹಿಂದೆ ಎಂದೋ ಕಾಣದ. ಅವಘಢ-ತೊಂದರೆ. ಇಂಬು_ಅವಕಾಶ. ಉರಗ-ಹಾವು, ಉಷ್ಣ-ಬಿಸಿ. ಐಕಮತ್ಯ-ಎಕಾಭಿಪ್ರಾಯ. ಕ್ರೂಢಿಕರಣ-ಒಟ್ಟುಗೂಡಿಸುವಿಕೆ. ತುಪ್ಪಳ-ಉಣ್ಣೆ. ದ್ವೀಪ-ನೀರಿನಿಂದ ಸುತ್ತುವರೆದ ಭಾಗ. ನಿಗೂಢ-ರಹಸ್ಯ. ಪಥ-ದಾರಿ. ಫಲಶೃತಿ- ಪರಿಣಾಮ. ವಾಸ್ತುಶಿಲ್ಪ-ಕಟ್ಟಡಗಳನ್ನು ಕಟ್ಟುವ ಕಲೆ. ವೈಪರಿತ್ಯ-ವಿರೋಧ. ಸಂಜೀವಿನಿ-ಜೀವಕೊಡುವ ಗಿಡಮೋಲಿಕೆ. ಸರೀಸ್ರಪ-ನೆಲದಲ್ಲಿ ಹರಿದಾಡುವ ಪ್ರಾಣಿಗಳು. ಸಾಕಾರ-ಆಕಾರದಿಂದ ಕೋಡಿರುವದು. ಕಡಲು-ಸಮುದ್ರ. ಗಾಥೆ-ಹಾಡು. ದಾರುಣ-ಭಯಂಕರ. ನಭ-ಆಕಾಶ. ನಿಬಿಡ_ದಟ್ಟವಾದ. ಪ್ರವೃತಿ-ಸ್ವಭಾವ. ರಶ್ಮಿ-ಕಿರಣ. ವಿಕಾಸ-ಅರಳುವಿಕೆ. ಸಂಕುಲ_ಸಮೋಹ. ಸಮನ್ವಯ-ಹೊಂದಾಣಿಕೆ. ಸಸ್ತನಿ-ಹಾಲು ಕೊಡುವ ಜೀವಿ. ಸ್ವೋಪಜತೆ-ಸ್ರಜನ ಸಾಮರ್ಥ್ಯ.

***. ಈ ಪ್ರಶ್ನೆಗಳಿಗೆ 1-2 ವಾಕ್ಯಗಳಲ್ಲಿ ಉತ್ತರಿಸಿ.**

1. ಸಸ್ತನಿಗಳ ಆಶ್ರಯದಾಣಗಳು ಯಾವವು?

ಉತ್ತರ:ಸಸ್ತನಿಗಳು ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳಲ್ಲಿ ಆಶ್ರಯಿಸುತ್ತವೆ.

MAJEED SHAKEEL

2. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

ಉತ್ತರ: ಸ್ಪರ್ಶ ಸಂಜೀವಿನಿಯ ಪಾಠ ಹೆಳುತ್ತವೆ.

3. ಹಕ್ಕಿ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

ಉತ್ತರ:ಅನೇಕ ವಸ್ತುಗಳನ್ನು ಸಮನ್ವಯಗೊಳಿಸಿ ಚಾಕಚಕ್ಯತೆಯಿಂದ ಮನೆ ನಿರ್ಮಿಸುವ ಕಲೆ ಇದೆ.

4. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವವು.

ಉತ್ತರ:ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ-ಬೇಟೆ ಮಿತಿಯೊಡ್ಡುವ ಅಂಶಗಳು.

5. ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

ಉತ್ತರ:ಗಾಲ್ಫ್ ಚೆಂಡು, ನೀಲಿ ಶೀಷೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಅಲಂಕರಿಸಿತ್ತು.

*** ಈ ಪಶ್ನೆಗಳಿಗೆ 3 -4 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

1. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?

ಉತ್ತರ:ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ, ಕಾವು ಗುಟುಕು ಪಡೆದು ಜೀವ ಕಣ್ಣು ತರೆಯುವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸ ಗಾಥೆ ಇದೆ.

2. ಹಕ್ಕಿಗೂಡಿನ ವಿಶೇಷತೆಗಳೇನು?

ಉತ್ತರ:ಹಕ್ಕಿಗಳು ಕೆಲವು ಸಸ್ತನಿಗಳಂತೆ ಸುಂದರವಾಗಿ ಗೂಡು ಕಟ್ಟುತ್ತವೆ. ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲು ಭಿನ್ನವಾದ ವಸ್ತುಗಳನ್ನು ಬಳಸಬಲ್ಲವು. ಗೊಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಇವುಗಳಿಗೆ ಸೌಂದರ್ಯಪ್ರಜ್ಞೆ ಇದೆ.

3. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

ಉತ್ತರ:ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶಗಳು ಮುಖ್ಯವಾಗಿ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು, ಹವಮಾನ ವೈಪರೀತ್ಯವನ್ನು ಎದುರಿಸಲು, ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ನಿರ್ಮಿಸಿ ಕೊಳ್ಳುತ್ತವೆ.

4. ಹಕ್ಕಿಗಳು ಗುಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

ಉತ್ತರ:ಹಕ್ಕಿಗಳು ಸಾಗರ, ದ್ವೀಪ ಗಿರಿ, ಶಿಖರವನೆತ್ತಿ ಮನುಷ್ಯ ನುಸಳಲಾರದ ನಿಬೀಢ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವಶ ನಿರಾಕರಿಸುವ ದ್ರುವಕಗ್ಗತ್ತಲ ಕಣಿವೆ, ರೆಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ ಹೀಗೆ ಎಲ್ಲ ಕಡೆ ಕಟ್ಟಬಲ್ಲವು.

5. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದುಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?

ಉತ್ತರ:ಅವು ಗೂಡನ್ನು ಮನುಷ್ಯರಿರುವ ಕೇರೆಗಳಲ್ಲಿ ವಾಹನ ಸಂಚಾರ ಹೆಚ್ಚುತ್ತಿರುವ ಸ್ಥಳಗಳನ್ನೇ ಆಯ್ದುಕೊಳ್ಳುತ್ತವೆ. ಹಕ್ಕಿಗಳು ಹೊಸ ಪರಿಸರಕ್ಕೆ ಥಟ್ಟನೆ ಹೊಂದುಕೊಂಡು ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ, ಅಷ್ಟೇ ಏಕೆ ವಿದ್ಯುತ್ ತಂತಿಗಳಲ್ಲಿಯೂ ತೂಗಾಡುವ ಗೂಡು ಕಾಣುತ್ತೇವೆ.

6. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ?

ಉತ್ತರ:ಹಕ್ಕಿಗಳು ಗೂಡುಗಳನ್ನು ವರ್ಣಮಯ ಹೂದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚುರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತಂದು ಅಲಂಕರಿಸುತ್ತವೆ.

7. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

MAJEED SHAKEEL

ಉತ್ತರ:ನೀಲಿ ಸಾಮ್ರಾಟ ಮತ್ತು ಸಗ್ಗದಕ್ಕಿ ತಮ್ಮ ಗೂಡನ್ನು ಬಹು ಸುಂದರವಾಗಿ ಅಲಂಕರಿಸುತ್ತದೆ. ಎರಡು ಒಣಗಿದ ಕಡ್ಡಿಯನ್ನು ಅಪ್ಪಿ ಹಿಡಿದಂತೆ ಗುರುತ್ವಾಕರ್ಷಣೆಯ ಸಹಾಯದಿಂದ ಬಟ್ಟಲಾಕರದಲ್ಲಿ ಅವು ಗೋಡು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ಧಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಶತ್ರುಗಳ ಕಣ್ಣಿಗೆ ಗೋಡು ಗೋಚರಿಸಬಾರದೆಂಬ ಅವುಗಳ ಉದ್ದೇಶವಿರುತ್ತದೆ.

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡತ್ತವೆ.

ಸಂದರ್ಭ:ಈ ವಾಕ್ಯವನ್ನು ಬಿ.ಎಸ್ ಕೃಪಾಕರ ಮತ್ತು ಕೆ. ಸೇನಾನಿ ಬರೆದಿರುವ ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ;ಕೋಟ್ಯಾಂತರ ವರ್ಷಗಳ ವಿಕಾಸಕ್ರಿಯೆಯಲ್ಲಿ ಬೆನ್ನುಮೂಳೆಯ ಪ್ರಾಣಿಗಳು ಅಂದರೆ ಮೀನು, ಕಪ್ಪೆ ಮತ್ತು ಸರೀಸೃಪಗಳಚಿತ ಬಹುತೇಕ ಸಂಕುಲಗಳು ಅಸಂಖ್ಯಾತ ಮೊಟ್ಟೆಗಳನ್ನಿಟ್ಟು ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತದೆ. ಅದಕ್ಕಾಗಿ ಅವು ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವಿಗೆ ಹೋರಾಡುತ್ತವೆ ಎಂದು ಲೇಖಕರು ಹೇಳುತ್ತಾರೆ.

2. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು

ಸಂದರ್ಭ; ಈ ವಾಕ್ಯವನ್ನು ಬಿ.ಎಸ್ ಕೃಪಾಕರ ಮತ್ತು ಕೆ. ಸೇನಾನಿ ಬರೆದಿರುವ ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ಹೇಳಿದ್ದಾರೆ. ಕಲಾವಿದನ ಸ್ಪೊಪ್ರಜ್ಞತೆ ವಿಜ್ಞಾನಿಯ ತಂತ್ರಜ್ಞಾನವನ್ನು ಅಲ್ಲಿ ಕಾಣಬಹುದು. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು. ತಾಯಿ ಮಕ್ಕಳ ಕೌಟುಂಬಿಕ ಐಕ್ಯತೆ ಕಾಣಬಹುದು. ಮರಿಗಳು ಸಹ ಮುಂದೆ ತಮ್ಮ ಜೀವನ ನಡೆಸಲು ತಯಾರಾಗುತ್ತವೆ ಎಂದು ಲೇಖಕರು ಹೇಳಲುತ್ತಾರೆ.

3. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ.

ಸಂದರ್ಭ;ಈ ವಾಕ್ಯವನ್ನು ಬಿ.ಎಸ್ ಕೃಪಾಕರ ಮತ್ತು ಕೆ. ಸೇನಾನಿ ಬರೆದಿರುವ ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ಹೆಳುತ್ತಾರೆ. ಹಕ್ಕಿಗಳು ಒಳಗೊಡೆಯ ಮೇಲೆ ಪ್ಲಾಸ್ಟರ್ ಮಾಡಬಲ್ಲವು. ಅವು ತನ್ನ ಗೂಡನ್ನು ಸೌಂದರ್ಯ ಗೊಳಿಸುವ ವಾಸ್ತು ಶಿಲ್ಪಿಯ ಕಲ್ಪನೆಗೆ ಮೀರಿ ತನ್ನ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ನೈಸರ್ಗಿಕ ವಿಕೋಪಕ್ಕೆ ಶತ್ರುಗಳಿಂದ ರಕ್ಷಿಸಿಕೊಳ್ಳಲು ಸಂತತಿಯ ನಿರ್ವಹಣೆಗೆ ಅವು ವಾಸ್ತು ಶಿಲ್ಪಿಯಂತೆ ಗೂಡನ್ನು ನಿರ್ಮಿಸಿಕೊಳ್ಳುತ್ತವೆ.

## ಗದ್ಯ -5 ಕಾಫೀ ಕಪ್ಪು.

***ಸಾಹಿತಿಯ ಪರಿಚಯ :**

| | |
|---|---|
| ಸಾಹಿತಿಯ ಹೆಸರು | : **ಡಾ. ಗುರುರಾಜ ಕರಜಗಿ.** |
| ಕಾಲ | : 1952 |
| ಸ್ಥಳ | : ಹಾವೇರಿ ಜಿಲ್ಲೆಯ ಕರ್ಜಗಿ. |
| ಕ್ರತಿಗಳು | : ಇಪ್ಪತ್ತೆರಡಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. |
| ಪ್ರಶಸ್ತಿಗಳು | : |

**ಕಠಿಣ ಪದಗಳ ಅರ್ಥ;**

ಅಸೋಯೆ-ಹೊಟ್ಟೆಕಿಚ್ಚು. ಕೂಡ್ರಿಸಿ-ಕುಳ್ಳಿರಿಸಿ. ದುರ್ದೈವ-ಕೆಟ್ಟ ಆದೃಷ್ಟ. ಮಾತುಎತ್ತಿದರು-ಮಾತನ್ನು ಆರಂಭಿಸಿದರು. ಆಸ್ವಾದಿಸು-ರುಚಿ ನೋಡುವದು. ತಕರಾರು-ಅಡ್ಡಿ. ನಿವೃತಿ-ವೃತಿಯಿಂದ ಬಿಡುಗಡೆ.

* **ಈ ಪ್ರಶ್ನೆಗಳಿಗೆ 1-2 ವಾಕ್ಯಗಳಲ್ಲಿ ಉತ್ತರಿಸಿ.**

1. ಹೆಡ್ ಮಾಸ್ತರರು ಸಂತೋಷಗೊಂಡದ್ದು ಏಕೆ?

ಉತ್ತರ; ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು.

2. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

ಉತ್ತರ; ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

3. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?

ಉತ್ತರ; ಉತ್ತಮ ವಾದುದನ್ನು ಪಡೆಯಬೇಕು ಎನ್ನುವ ಆಸೆ ತೊಂದರೆಗಳಿಗ ಕಾರಣ.

4. ಗುರುಗಳು ಹೇಳಿತಂತೆ ಕಾಫೀ ಮತ್ತು ಕಾಫೀಯ ಕಪ್ಪು ಯಾವುದರ ಪ್ರತೀಕಗಳು?

ಉತ್ತರ; ಕಾಫೀ ಎಂದರೆ ಜೀವನ ಇದ್ದಂತೆ ಮತ್ತು ಕಾಫೀ ಕಪ್ಪು ಹಣ, ಅಂತಸ್ತು ಅಧಿಕಾರದ ಪ್ರತೀಕವಾಗಿದೆ.

**5. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?**

ಉತ್ತರ; ನಾವು ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ. ಇದು ದುರ್ದೈವದ ಸಂಗತಿ.

6. ಗುರು ರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು?

ಉತ್ತರ; ಕರುಣಾಳು ಬಾ ಬೇಳಕೆ ಆಗಿದೆ.

*. **ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಹಿರಿಯ ವಿದ್ಯಾರ್ಥಿಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

ಉತ್ತರ:ಎಲ್ಲಾ ವಿದ್ಯಾರ್ಥಿಗಳು ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದಾಗ ಒಂದಲ್ಲ ಒಂದು ತಕರಾರು. ಎಲ್ಲಾ ಕಡೆ ವ್ಯಾಪಾರ ಕಡಿಮೆ ಆಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತದೆ. ಹಣಕ್ಕೆ ಬೆಲೆ ಇಲ್ಲ. ಮಕ್ಕಳು ಬೆಳೆಯುತ್ತದ್ದಾರೆ ಅವರನ್ನು ಅರ್ಥ ಮಾಡುವದೆ ಕಷ್ಟ. ಎಂದು ಹೇಳಿಕೊಳ್ಳುತ್ತಿದ್ದರು.

2. ಹೆಡ್ ಮಾಸ್ತರ್ ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?

ಉತ್ತರ:ಹೆಡ್ ಮಾಸ್ತರ್ ತಂದಿಟ್ಟ ಟ್ರೇನಲ್ಲಿ 30-35 ಕಪ್ಪುಗಳಿದ್ದವು. ಅದರಲ್ಲಿ ಕೆಲವು ಅತ್ಯಂತ ಬೆಲೆ ಬಾಳುವಂತಹವು, ಚೈನಾ ಪಿಂಗಾಣಿಗಳು, ಸುಂದರ ಗಾಜಿನವು, ಸ್ಟೀಲ್ ಲೋಟಗಳು, ಪ್ಲಾಸ್ಟಿಕ್ ಕಪ್ಪುಗಳು, ಇನ್ನೂ ಕೆಲವು ಬೆಲೆ ಬಾಳದ ಗಾಜಿನ ಕಪ್ಪುಗಳಿದ್ದವು.

3. ಹೆಡ್‌ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು?

ಉತ್ತರ; ಮಕ್ಕಳೆ ಒಂದು ಐದು ನೀಮಿಷ ಇರಿ, ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು ಆದರೆ ನನ್ನ ಕಾಫೀ ಕೂಡಾ ತುಂಬಾ ಚನ್ನಾಗಿರುತ್ತದೆ. ಎಂದು ಜೋರಾಗಿ ನಕ್ಕು ಅಡಿಗೆ ಮನೆಗೆ ಹೊದರು.

4. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?

ಉತ್ತರ; ಭಗವಂತ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವದು ಈ ಕಾಫೀ ಮಾತ್ರ. ಕಪ್ಪುಗಳನ್ನಲ್ಲ. ಅವುಗಳನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಬೇಕು. ಅಲಂಕಾರಗಳ ಬೆನ್ನತ್ತಿ ಓಡಿ ಜೀವನವನ್ನು ಮರೆಯಬಾರದು. ಸಂತೋಷವಾಗಿ ಇರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿರಲಿಕ್ಕಿಲ್ಲ. ಎಂದು ಹೆಡ್‌ಮಾಸ್ತರ ತಿಳಿಸಿದರು.

* **ಕೆಳಗಿನ ಪೂಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಗುರುಗಳು ಸುಖ ಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ಮನವರಿಕೆ ಮಾಡಿಕೊಟ್ಟರು?

ಗುರುಗಳು ಸುಖ ಜೀವನದ ಪಾಠವನ್ನು ಕಾಪೀ ಕಪ್ಪುಗಳಿಗೆ ಹೋಲಿಸಿ ಹೇಳಿದರು. ಮಕ್ಕಳೇ ನೀವೆಲ್ಲರೂ ಬೆಲೆ ಬಾಳುವ ಕಪ್ಪುಗಳನ್ನೇ ಆರಿಕೊಂಡಿದ್ದೀರಿ. ಸಾಧಾರಣ ಕಪ್ಪುಗಳನ್ನು ಅರಿಸಿಲ್ಲ. ಅಂದರೆ ನಿಮಗೆ ಉತ್ತಮವಾದದ್ದನ್ನು ಪಡೆಯಬೇಕು ಎನ್ನುವ ಆಸೆ. ಅದು ನಿಮ್ಮ ತೊಂದರೆಗೆ ಕಾರಣ. ಕಾಫೀ ಎಂದರೆ ಜೀವನ, ಕಪ್ಪು ಹಣ ಅಂದರೆ ಅಂತಸ್ತು ಅಧಿಕಾರ ಇದ್ದಂತೆ. ಅವೆಲ್ಲ ಜೀವನವನ್ನು ಧರಿಸಲು ಬೇಕಾಗುವ

MAJEED SHAKEEL

ಸಾಧನಗಳು. ನೀವು ಹಿಡಿದ ಕಪ್ಪು ಕಾಫೀಯ ರುಚಿಯನ್ನು ಬದಲಿಸಲಾರದು. ಆದರೆ ದುರ್ದೈವ ಎಂದರೆ ನಾವು ಕಾಫೀಗಿಂತ ಕಪ್ಪಿಗೆ ಹೆಚ್ಚು ಮಹತ್ವಕೊಡುತ್ತೇವೆ. ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ. ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಕಪ್ಪುಗಳನ್ನು ಇಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಜೀವನವನ್ನು ಅಸ್ವಾದಿಸಿ ಅಲಂಕಾರಗಳ ಹಿಂದೆ ಓಡಿ ಜೀವನವನ್ನು ಮರೆಯಬೇಡಿರಿ. ಜೀವನವನ್ನು ಆಸ್ವಾದಿಸಿ ಎಂದು ಹೇಳಿದ್ದಾರೆ.

2. ಸುಖ ಜೀವನ ವ್ಯಕ್ತಿಯ ಒಳಗಿದೆಯೇ ಅಥವಾ ಹೊರಗಿದೆಯೇ? ಚರ್ಚಿಸಿ.

ಸುಖ ಜೀವನ ವ್ಯಕ್ತಿಯ ಒಳಗಿದೆ ಏಕೆಂದರೆ ಮನಸ್ಸು ಶುದ್ಧವಾಗಿರಬೇಕು. ನಿರ್ಮಲವಾಗಿರಬೇಕು. ಇವೆರೆಡು ಇರಬೇಕಾದರೆ ಮೊದಲು ದುರಾಸೆ ಬಿಡಬೇಕು. ನಾವು ಕಷ್ಟಪಟ್ಟು ದುಡಿದು ತಿನ್ನಬೇಕು ಹಾಗೂ ಇತರರಿಗೂ ಸಹಾಯ ಮಾಡಬೇಕು. ಕಷ್ಟ ಇದ್ದವರಿಗೆ ಹಣದ ಅಥವ ಮಾರ್ಗದರ್ಶನದ ಮೂಲಕ ಮುಂದೆ ಬರಲು ಸಹಕರೀಸಬೇಕು. ಯಾವುದೇ ಸಹಾಯ ಮಾಡಬೇಕಾದರೆ ಫಲವನ್ನು ಬಯಸಬಾರದು. ನಮ್ಮಲ್ಲಿ ಇರುವುದರ ಬಗ್ಗೆ ಹೆಮ್ಮೆ ಪಡಬೇಕು ಅದನ್ನು ಬಿಟ್ಟು ಇತರರ ವಸ್ತುವಿನ ಮೇಲೆ ಆಸೆ ಪಡಬಾರದು. ಭಗವಂತ ನಮಗೆ ಒಂದು ಜೀವನ ನೀಡಿದ್ದಾನೆ. ಅದನ್ನು ಸೂಂದರಗೊಳಿಸಬೇಕು. ಪ್ರತಿಯೋಂದು ಸನ್ನೀವೇಷವನ್ನು ಆಸ್ವಾದಿಸಬೇಕು. ಇನ್ನೂ ಎತ್ತರ ಶ್ರೇಣೀಯನ್ನು ತಲುಪಬೇಕು. ನಮ್ಮ ಜೀವನದಲ್ಲಿ ಇವುಗಳನ್ನು ಶುದ್ಧ ಮನಸ್ಸಿನಿಂದ ಮಾಡಿದರೆ ನಮ್ಮ ಜೀವನ ಸುಖ ಜೀವನವಾಗುತ್ತದೆ.

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯವಾಗುತ್ತಾರೆ

ಸಂದರ್ಭ; ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ ಕಾಪೀ-ಕಪ್ಪು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ; ಈ ವಾಕ್ಯವನ್ನು ಲೇಖಕರು ಹಳೆಯ ವಿದ್ಯಾರ್ಥಿಗಳನ್ನು ಕಂಡು ಅವರಿಗೆ ತುಂಬ ಸಂತೋಷವಾಗುತ್ತದೆ. ಅವರಿಗೆ ಬದುಕಿನ ಪಾಠ ಕಲಿಸುತ್ತ ವಿದ್ಯಾರ್ಥಿಗ ಯಶಸ್ಸನ್ನು ಬಯಸುತ್ತಾರೆ. ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೆ ಅವರಿಗೆ ಹೆಚ್ಚು ಪ್ರಿಯರಾಗಿರುತ್ತಾರೆತ್ತಾರೆ.

2. ನನ್ನ ಕಾಫೀ ಕೂಡಾ ತುಂಬಾ ಚನ್ನಾಗಿರುತ್ತದೆ

ಸಂದರ್ಭ;ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ ಕಾಪೀ-ಕಪ್ಪು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ;ಈ ವಾಕ್ಯವನ್ನು ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ಟರರನ್ನು ನೋಡಲು ಮನೆಗೆ ಬಂದಾಗ ಹೆಡ್ ಮಾಸ್ಟರ್ ಹೀರಿಯ ವಿದ್ಯಾರ್ಥಿಗಳಿಗೆ ಈ ವಾಕ್ಯವನ್ನು ಹೆಳುತ್ತಾರೆ. ವಿದ್ಯಾರ್ಥಿಗಳನ್ನು ಕಂಡರೆ ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರಿತಿ. ವಿದ್ಯಾರ್ಥಿಗಳಿಗೆ ಕುಡಿಯಲು ಕಾಫಿ ಮಾಡುವಾಗ ಮೇಲಿನ ಮಾತು ಹೇಳುತ್ತಾರೆ.

3. ನೀವೇ ಕಾಫೀ ಹಾಕಿಕೊಳ್ಳಿ ಆ ಮೇಲೆ ಕುಳಿತು ಮಾತನಾಡೋಣ

ಸಂದರ್ಭ;ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ ಕಾಪೀ-ಕಪ್ಪು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ವಾಕ್ಯವನ್ನು ಲೇಖಕರು ಬಿಸಿ ಬಿಸಿ ಕಾಫೀಯನ್ನು ತಂದು ಒಂದು ಪಾತ್ರೆಯಲ್ಲಿಡುತ್ತಾ ಹೇಳುತ್ತಾರೆ. 30-35 ಕಾಫೀ ಕಪ್ಪುಗಳನ್ನು ಇಟ್ಟು ಹೇಳುತ್ತಾರೆ. ಕಾಫೀ ಕಪ್ಪುಗಳು ಉದಾಹರಣೆ ತೆಗೆದುಕೊಳ್ಳುತ್ತಾ ಅವರ ಸಮಸ್ಯೆಗೆ ಕಾರಣ ತಿಳಿಸುತ್ತಾ ನೆಮ್ಮದಿಯ ಜೀವನ ನಡೆಸಲು ಮಾರ್ಗದರ್ಶನ ನೀಡುತ್ತಾ ಮೇಲಿನ ಮಾತು ಹೇಳುತ್ತಾರೆ.

4. ನೀವು ಗಮನಿಸಿದ್ದೀರಾ ? ನೀವೆಲ್ಲ ಎಂಥೆ ಕಪ್ಪು ಆರಿಸಿಕೊಂಡಿದ್ದೀರಿ?

ಸಂದರ್ಭ; ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ ಕಾಪೀ-ಕಪ್ಪು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

MAJEED SHAKEEL

ಸ್ವಾರಸ್ಯ; ಈ ವಾಕ್ಯವನ್ನು ಕಾಫೀಯನ್ನು ತಂದಿಟ್ಟು ಕಪ್ಪುಗಳಿಗೆ ಕಾಫೀ ಹಾಕಿಕೊಳ್ಳಲು ಹೇಳುತ್ತಾ ಮೇಲಿನ ಮಾತು ಹೇಳುತ್ತಾರೆ. ಆಸೆಯೇ ತೊಂದರೆಗೆ ಕಾರಣ ಕಾಪೀ ಜೀವನವನ್ನು ಕಪ್ಪು ಹಣ, ಆಸೆ, ಅಧಿಕಾರಕ್ಕೆ ಹೋಲಿಸಿ ಜೀವನ ಮಾರ್ಗವನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಕೊಡುತ್ತಾ ಮೇಲಿನ ಮಾತು ಹೇಳುತ್ತಾರೆ.

5. ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಂಡಿದ್ದಾನೆ.

ಸಂದರ್ಭ;ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ ಕಾಪೀ-ಕಪ್ಪು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ; ಈ ವಾಕ್ಯವನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ನಾವು ಕಾಫಿಗಿಂತ ಕಪ್ಪಿಗೆ ಹೆಚ್ಚು ಮಹತ್ವ ಕೊಡುತ್ತೇವೆ. ಮತ್ತು ಬೇರೆಯವರ ಕಪ್ಪನ್ನು ನೋಡಿ ಅಸೋಯೆ ಪಡುತ್ತೇವೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾ ಮಾರ್ಗದರ್ಶನ ಮಾಡುತ್ತಾರೆ.

## ಗದ್ಯ 6ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ.

***ಸಾಹಿತಿಯ ಪರಿಚಯ:**

| | |
|---|---|
| ಸಾಹಿತಿಯ ಹೆಸರು | : ಡಾ. ಬಸವಪ್ರಭು ಪಾಟಿಲ |
| ಕಾಲ | : 1942 |
| ಸ್ಥಳ | : ರಾಯಚೊರ ಜಿಲ್ಲೆಯ ಮಾನ್ವಿ ತಾಲ್ಲೊಕಿನ ಬೆಟ್ಟದೊರು. |
| ಸಾಹಿತಿಯ ಹೆಸರು | : ಕೆ.ಸಿದ್ದಯ್ಯ ಸ್ವಾಮಿ |
| ಕಾಲ | : 1945 |
| ಸ್ಥಳ | : ರಾಯಚೊರಿನ ಮಾನಿ |
| ಕ್ರತಿಗಳು | : ಮಾತನಾಡಿ ಹೆಣಗಳೆ, ಇದೇನುಕತೆ,ಬೆಳಗು,ಬಸವನಾಡಿನಿಂದ ಮಂಡೇಲನಾಡಿಗೆ. |

ಡಾ. ಬಸವಪ್ರಭು ಪಾಟಿಲ 1942 ರಲ್ಲಿ ರಾಯಚೊರ ಜಿಲ್ಲೆಯ ಮಾನ್ವಿ ತಾಲ್ಲೊಕಿನ ಬೆಟ್ಟದೊರು ನಲ್ಲಿ ಜನಿಸಿದರು. ಕೃತಿಗಳು ಮಾತನಾಡಿ ಹೆಣಗಳೆ, ಇದೇನುಕತೆ, ಬೆಳಗು, ಬಸವನಾಡಿನಿಂದ ಮಂಡೇಲನಾಡಿಗೆ.

***ಕೆ.ಸಿದ್ದಯ್ಯ ಸ್ವಾಮಿ** 1945 ರಾಯಚೊರಿನ ಮಾನ್ವಿಯಲಿ ಜನಿಸಿದರು.

**ಕಠಿಣ ಪದಗಳ ಅರ್ಥ:** ಕೋಚ್-ನಾಲ್ಕು ಚಕ್ರದ ಬಂಡಿ. ಡ್ಯಾಗರ್-ಕಠಾರಿ. ತರಾತುರಿ-ಅವಸರ. ದುಬಾರಿ-ಹೆಚ್ಚುಬೆಲೆ. ಪಾರ್ಲಿಮೆಂಟ-ಸಂಸತ್ತು. ಮ್ಯೂಸಿಯಂ-ವಸ್ತು ಸಂಗ್ರಹಾಲಯ. ಸಮುಚ್ಚಯ- ಗುಂಪು. ಹಾರರ್-ಭಯ. ಗೈಡ್-ಮಾರ್ಗದರ್ಶಿ. ತದ್ರೋಪ-ಅದೆ ತರಹ. ತಾಸು-ಗಂಟೆ. ನಿಗೊಢ- ರಹಸ್ಯ. ಬ್ರಿಜ್-ಸೇತುವೆ. ವ್ಯಾಕ್ಸ-ಮೇಣ. ಸಬರ್ಬ-ಉಪನಗರ.

*** ಈ ಪ್ರಶ್ನೆಗಳಿಗೆ ಒಂದು ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು?

ಉತ್ತರ:ಮೇಡಂ ಟುಸ್ಸೋಡ್ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದ್ದರಿಂದ.

2. ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಯಗಳಾವುವು?

ಉತ್ತರ:ಕೇಂಬ್ರಿಡ್ಜ್ ಹಾಗೂ ಆಕ್ಸ್‌ಫರ್ಡ್.

3. ಲಂಡನ್ ವಿಶ್ವವಿದ್ಯಾನಿಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಯಿತು?

ಉತ್ತರ:ಗಾಂಧೀಜಿ ಅಲ್ಲಿ ಓದಿದ್ದರಿಂದ.

4. ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?

ಉತ್ತರ:ಮುಂಬೈಯ ಸಮುದ್ರ ದಂಡೆ ಸಮೀಪ ಇರುವ ಮೆರೀನ್ ಡ್ರೈವ್‌ಗೆ ಹೊಲಿಸಿದ್ದಾರೆ.

5. ಲಂಡನ್‌ನ ಭೂ ವಿಸ್ತೀರ್ಣ ಎಷ್ಟು?

ಉತ್ತರ:1572 ಕಿ.ಮೀ.

***. ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?

ಉತ್ತರ: 1666ರಲ್ಲಿ ಲಂಡನ್ ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿತು. 2 ದಿನ ಲಂಡನ್ ಹೊತ್ತಿ ಉರಿಯುತ್ತಿತ್ತು. 13000 ಮನೆಗಳು, 80 ಚರ್ಚಗಳು ಸುಟ್ಟು ಹೋಗಿದ್ದವು. ಈ ದುರಂತದ ನೆನಪಿಗಾಗಿ 200 ಅಡಿ ಎತ್ತರದಕಂಬ ನಿಲ್ಲಿಸಿದ್ದಾರೆ. ಅದಕ್ಕಿಂತ ಒಂದೆರೆಡು ವರ್ಷದ ಹಿಂದೆ ಒಂದು ಪ್ಲೇಗ್ ರೋಗಕ್ಕೆ ಹನ್ನೆರಡು ಹದಿಮೂರು ಸಾವಿರ ಜನರು ಸತ್ತು ಹೋಗಿದ್ದಂತೆ ಎಂದು ಗೈಡ್ ತಿಳಿಸಿದರು.

2. ಥೇಮ್ಸ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನ ವಾಸಿಸುತ್ತಾರೆ?

ಉತ್ತರ: ಥೇಮ್ಸ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು, ರಾಜಕಾರಣಿಗಳು ಇರುತ್ತಾರೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ.

3. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು?

ಉತ್ತರ: ಲಂಡನ್ನಲ್ಲಿ 13 ಬ್ರೀಜ್‌ಗಳಿವೆ. ಅದರಲ್ಲಿ ಟವರ್ ಬ್ರೀಜ್ ಪ್ರಮುಖವಾದದ್ದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದುವರೆ ಎರಡು ನೀಮಿಷ ಮೇಲಕ್ಕೆ ಎದ್ದು ಹಡುಗುಗಳು ಹೊಗಲು ದಾರಿಮಾಡಿಕೊಡುತ್ತದೆ. ಇದು ಟಾವರ್ ಬ್ರಿಜ್‌ನ ವೈಶಿಷ್ಟ್ಯ.

4. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೇಗಳಾವವು?

ಉತ್ತರ: ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೇಗಳು ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ.

5. ಟಾವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರಿಯುತ್ತಾರೆ?

ಉತ್ತರ: ಟಾವರ್ ಆಫ್ ಲಂಡನ್ 3-4 ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದಮೇಲೆ ಟವರ್‌ಗಳಿವೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ರಾಜಮನೆತನ ಗಳಲ್ಲಿನ ವೈಷಮ್ಯ, ಅಸುಯೆ, ಕೊಲೆ, ಸುಲಿಗೆಗಳ ಸ್ಥಾನ ಆಗಿತ್ತು. ಮತ್ತು ರಾಬರ್ಟ್ ಕ್ಲೈವ್ 1757ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಸ್ತ್ರಗಳು ಇಲ್ಲಿ ಇಡಲಾಗಿದೆ.

*** ಕೆಳಗಿನ ಪೂಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆ ಏನು?

ಉತ್ತರ: ಮೇಡಂ ಟುಸ್ಸೋಡ್ ಈ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದವರು. ಈ ಮೇಣದ ಗೊಂಬೆಗಳು ತದ್ರೂಪ ಒಬ್ಬ ವ್ಯಕ್ತಿಯನ್ನೇ ಹೋಲುತ್ತವೆ. ಯಾವ ವ್ಯಕ್ತಿಯನ್ನು ಮೇಣದಲ್ಲಿ ಮಾಡಿರುತ್ತಾರೆ ಅದು ಶಾರುಖ್ ಖಾನ್, ಅಮಿರ್ ಖಾನ್, ಅಮಿತಾಭ್ ಬಚ್ಚನ್, ಮರ್ಲಿನ್ ಮನ್ರೋ, ಟೆನಿಸ್ ತಾರೆ ಬೆಕರ್ ಬೋರ್ಗ್ ಹೀಗೆ ಪ್ರಸಿದ್ಧರ ವ್ಯಾಕ್ಸ್ ಗೊಂಬೆ ಮಾಡಿದ್ದಾರೆ. ಆ ಮೂರ್ತಿಗಳ ಪಕ್ಕದಲ್ಲಿ ನಿಂತು ನಾವು ಫೋಟೋ ತೆಗೆಸಿಕೊಂಡರೆ ನಿಜವಾದ ವ್ಯಕ್ತಿಯೊಂದಿಗೆ ಇದ್ದೇವೇನೋ ಅನಿಸುತ್ತದೆ. ಈ ಸಹಜತೆಯೇ ಆ ಮೇಣದ ಬೊಂಬೆಗಳ ವೈಶಿಷ್ಟ.

2. ಛೇಂಬರ್ ಆಫ್ ಹಾರರ್ಸ್ ಒಳಗೆ ಹೋದಾಗ ಲೇಖಕರಿಗಾದ ಅನುಭವವೇನು?

ಉತ್ತರ: ಛೇಂಬರ್ ಆಫ್ ಹಾರರ್ಸ್ ಅಲ್ಲಿ ಚೀರುವ ಭಯಾನಕವಾದ ಕಿರುಚುವ ಶಬ್ದ ಕೇಳಬರುತ್ತದೆ. ಅದು ರಾಜರು ತಮ್ಮ ವಿರೋಧಿಳನ್ನು ಕೊಲ್ಲಿಸುತ್ತಿದ್ದ ಸಮಯದಲ್ಲಿ ಹೊರಡಿಸುತ್ತಿದ್ದ ಚೀತ್ಕಾರ. ಲೇಖಕರು ಒಳಗೆ ಹೋದಾಗ ಅವರ ಮೇಲೆ ಆಕ್ರಮಣ ಮಾಡಲು ಕತ್ತಿ ಹಿಡಿದು ಒಬ್ಬವ ಬಂದ. ಒಬ್ಬ ಕತ್ತು ಹಿಚುಕಲು ಬಂದ. ಒಬ್ಬ ಏಕಾ ಏಕಿವಾಗಿ ಕಿರುಚುತ್ತ ಹೊಟ್ಟೆಗೆ ಡ್ಯಗರ್ ತಿಮಿಯಲು ಬಂದಂತೆ ಮಾಡಿದ. ಇವು ಲೇಖಕರಿಗಾದ ಅನುಭವಗಳು.

3. ಥೇಮ್ಸ್ ನದಿಯ ಸುತ್ತಮುತ್ತ ಲೇಖಕರು ಕಂಡ ದೃಶ್ಯಗಳಾವುವು?

MAJEED SHAKEEL

ಉತ್ತರ: ಥೇಮ್ಸ್ ನದಿಯ ಮೇಲೆ ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ ಪ್ರಸಿದ್ಧವಾಗಿವೆ. ಲಂಡನ್ ಬ್ರಿಜ್‌ಗೆ ಹತ್ತಿರದಲ್ಲೇ ಟವರ್ ಆಫ್ ಲಂಡನ್ ಇದೆ. 3-4 ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದ ಮೇಲೆ ಟವರ್‌ಗಳಿವೆ ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ಇವುಗಳೆನ್ನೇಲ್ಲಾ ಲೇಖಕರು ಕಂಡಿರುವ ದೃಶ್ಯಗಳು

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ಅಲ್ಲಿನ ಒಳ ಥೇಟರ್ ನಲ್ಲಿ 3ಡಿ ಕನ್ನಡಕ ಹಾಕಿಕೊಂಡು ತಾರಾಲಯ ನೋಡಿದೆವು

ಸಂದರ್ಭ: ಈ ವಾಕ್ಯವನ್ನು ಡಾ. ಬಸವ ಪ್ರಭು ಪಾಟೀಲ ರವರು ಬರೆದಿರುವ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಗದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ತಾರಾಲಯಕ್ಕೆ ಹೋಗುವಾಗ ಹೇಳಿದ್ದಾರೆ. ತಮ್ಮ ಸ್ನೇಹಿತನಾದ ಸತೀಶನ ಜೊತೆ ತಾರಾಲಯಕ್ಕೆ ಹೋಗಿದ್ದರು. ತಾರಾಲಯದಲ್ಲಿ 3ಡಿ ಕನ್ನಡಕವನ್ನು ಹಾಕಿದಾಗ ನಕ್ಷತ್ರಗಳು ಸಮೀಪ ಇದ್ದಂತೆ ಕಾಣುತ್ತವೆ ಎಂದು ಹೇಳುವಗಾಗ ಮೇಲಿನ ಮಾತು ಹೇಳಿದ್ದಾರೆ.

2. ಇವರೆಲ್ಲ ಬಸ್ಸೋ ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು

ಸಂದರ್ಭ: ಈ ವಾಕ್ಯವನ್ನು ಡಾ. ಬಸವ ಪ್ರಭು ಪಾಟೀಲ ರವರು ಬರೆದಿರುವ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಗದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ಲಂಡನ್‌ನ್ನಿನ ಜನರ ಬದುಕಿನ ಬಗ್ಗೆ ಹೇಳುವಾಗ ಹೇಳಿದ್ದಾರೆ. ಲಂಡನ್ ಬದುಕಲು ತುಂಬಾ ದುಬಾರಿ ಊರು ಎಂದು ಹೇಳುತ್ತಾರೆ. ಇಲ್ಲಿ ಬದುಕುವ ಜನರ ಕಷ್ಟ ಕಂಡು ಬರುತ್ತದೆ. ಆವರು ತಮ್ಮ ಮನೆಗೆ ಮರಳಲು ನಿಂತದನ್ನು ನೋಡಿ ಆ ಸಂದರ್ಭದಲ್ಲಿ ಲೇಖಕರು ಮೇಲಿನ ಮಾತು ಹೇಳುತ್ತಾರೆ.

3. ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ

ಸಂದರ್ಭ: ಈ ವಾಕ್ಯವನ್ನು ಡಾ. ಬಸವ ಪ್ರಭು ಪಾಟೀಲ ರವರು ಬರೆದಿರುವ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಗದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಲೇಖಕರು ಹೇಳುತ್ತಾರೆ. ಲಂಡನ್ ಮದ್ಯದಿಂದ ನೋಡುವಾಗ ಕಾಣಬರುವ ದೃಶ್ಯವಾಗಿದೆ. ಲಂಡನ್ ನಲ್ಲಿ ಇರುವ ಜನರು ಯಾವುದೇ ಕೆಲಸ ಇಲ್ಲದಿರುವಾಗ ಹೊರಗೆ ಬರುವದಿಲ್ಲ. ಅವರು ಶಾಂತತೆಯಿಂದ ಇರುವುದನ್ನು ಕಂಡು ಲೇಖಕರು ಮೇಲಿನ ಮಾತು ಹೇಳಿದ್ದಾರೆ.

## ಗದ್ಯ -7 ನನ್ನ ಗೋಪಾಲ

***ನಾಟಕಕಾರರ ಪರಿಚಯ:**

ಸಾಹಿತಿಯ ಹೆಸರು : ಕುಪ್ಪಳಿ ವೆಂಕಟಪ್ಪ ಪುಟ್ಟಪ

ಕಾಲ : 29-12-1904

ಸ್ಥಳ : ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳ್ಳಿ.

ಕ್ರತಿಗಳು : ನವಿಲು, ಪಕ್ಷಿಕಾಶಿ, ಜಲಗಾರ, ವಿಭೂತಿ ಪೂಜೆ, ನನ್ನ ದೇವರು.

ಪ್ರಶಸ್ತಿಗಳು : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಸ್ತಿ.

***ಕಠಿಣ ಪದಗಳಅರ್ಥ ಬರೆಯಿರಿ .**

ಇಂಪು-ಮಧುರ. ಕರಡಿ-ಭರಣಿ. ಚರಕ-ರಾಟೆ. ತೊಳಗು-ಪ್ರಕಾಶಿಸು. ನೋಟ-ನಾಟಕದ ದ್ರಶ್ಯ. ಬವಣೆ-ಕಷ್ಟ. ಬಿತ್ತರ-ವಿಸ್ತಾರ. ಮಳೆಬಿಲ್ಲು-ಕಾಮನಬಿಲ್ಲು. ಯೋಗಿ-ಯೋಗದಲ್ಲಿ ತೊಡಗಿದ. ಓಲೆ- ತಾಳೆಮರದ ಗರಿಯ ಹಾಳೆ.

MAJEED SHAKEEL

ಕಾದರೆ-ಹಾದಿನೋಡು. ತಿಲಕ-ಹಣೆಯ ಬೊಟ್ಟು, ನೋತು-ನೋಲುತಗೆದು. ಪವಡಿಸು-ಮಲಗು. ಬಳಲು-ಆಯಾಸ. ಬೈಗೆ-ಸಂಜೆ. ಮಿರುಗು_ಪ್ರಕಾಶಿಸು. ಸಿಲುಕೇ-ಸಿಗಲಾರೆನು.

*** ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?

ಉತ್ತರ: ಬೆಳಗ್ಗಿ ಎದ್ದು ಸ್ನಾನ ಮಾಡಿ ಕಾಡಿನಿಂದ ಪೂಜೆಗೆ ಹೂಗಳನ್ನು ಕೊಯ್ದು ತರುವುದು ಗೋಪಾಲನ ಬೆಳಗಿನ ಮುಖ್ಯ ಕೆಲಸವಾಗಿತ್ತು.

2. ಗೊಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿ ಸುತ್ತಿತ್ತು?

ಉತ್ತರ: ಸಾವಿರಾರು ಮಳೆಬಿಲ್ಲು ಸೇರಿ ಕುಣಿದಂತೆ ಬಣ್ಣಬಣ್ಣದ ಹೂಗಳು ಗೊಪಲನಿಗೆ ಕಾಣಿಸುತ್ತಿದ್ದವು.

3. ಗೋಪಾಲನ ಗೆಳೆಯರ ಹೆಸರೇನು?

ಉತ್ತರ: ಗೋಪಾಲನ ಗೆಳೆಯರ ಹೆಸರು ರಾಮು, ಕಿಟ್ಟಿ, ನಾಣಿ, ಮಾಧು.

4. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯ ಪಡುತ್ತಿದ್ದನು?

ಉತ್ತರ: ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ಕಾಡುದಾಟಿ ಬರಬೇಕಾದ್ದರಿಂದ ಅವನು ಭಯ ಪಡುತ್ತಿದ್ದನು.

5. ಗೋಪಾಲನು ಹೊಸ ಪಂಚೆ ಬಯಸಿದ್ದೇಕೆ?

ಉತ್ತರ: ಗೋಪಾಲನ ಗೆಳೆಯರು ಬೆಲೆಬಾಳುವ ಬಟ್ಟೆ ಹಾಕಿಕೊಂಡು ಹಾಸ್ಯ ಮಾಡುತ್ತಿದ್ದರು. ಅದಕ್ಕಾಗಿ ಹೊಸ ಪಂಚೆಯನ್ನು ಗೋಪಾಲನು ಬಯಸಿದನು.

6. ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?

ಉತ್ತರ: ಶ್ರೀಕೃಷ್ಣ ಬನದ ಗೋಪಾಲ. ಕಾಡಿನಲ್ಲಿ ದನಗಳನ್ನು ಕಾಯುವದು ಅವನ ಕೆಲಸ.

*** ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಮಲಗಿದ್ದ ಗೋಪಾಲನ್ನು ತಾಯಿ ಯಾವ ಮಾತುಗಳಿಂದ ಎಳಿಸಿದಳು?

ಉತ್ತರ: ಗೊಪಾಲ ಬೆಳಗಾಯ್ತು ಮೇಲೇಳು. ಸೂರ್ಯ ತನ್ನ ಕಿರಣಗಳಿಂದ ಬಾವಿಯ ಬಳಿ ಇದ್ದ ತೆಂಗಿನ ಮರದ ತುದಿಯಲ್ಲಿ ಬಂದಿದ್ದಾನೆ. ಹಕ್ಕಿಗಳು ಹಾರಾಡಿ ನಿನ್ನನ್ನು ಕರೆಯುತ್ತಿವೆ. ಬನದಲ್ಲಿ ಹೊಗಳು ಅರಳಿ ನಿನಗಾಗಿ ಕಾಯುತ್ತಿವೆ. ಶಾಲೆಗೆ ತಡವಾಗುತ್ತಿದೆ. ಏಳು ಕಂದಾ ಎಂದು ತಾಯಿ ಗೋಪಾಲನ್ನು ಎಳಿಸುತ್ತಾಳೆ.

2. ಗೋಪಾಲನು ಹೂ ಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?

ಉತ್ತರ: ಎಷ್ಟು ಸುಂದವಾಗಿದೆ ಬನ. ಮಲ್ಲಿಗೆ, ಕೇದಗೆ, ಸಂಪಿಗೆ, ಪರ್ವತಬಾಳೆ ಗೋರಂಟಿಯ ಹೂಗಳು ಅರಳಿ ಪರಿಮಳವನ್ನು ಬೀರುತ್ತವೆ. ಅಲ್ಲಿ ಸಾವಿರಾರು ಕಾಮನಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತವೆ. ಹಕ್ಕಿಗಳ ಇಂಪಾದ ಗಾನ, ಸೂರ್ಯನ ಹೊಂಬೆಳಕು, ಹಸುರಾದ ಬನ. ಈ ರೀತಿ ವರ್ಣಿಸಿದ್ದಾನೆ.

3. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?

ಉತ್ತರ: ಗೋಪಾಲನ ತಾಯಿ ನೋಲು ಮಾರಿ ಅದರಿಂದ ಬರುವ ಮೂರು ಕಾಸಿನಲ್ಲಿ ತಮ್ಮ ಸಂಸಾರ ನಡೆಸುತ್ತಿದ್ದಳು. ಮಗುವಿಗೆ ಕಾಡು ದಾಟಿ ಬರಲು ಹೆದರಿಕೆ ಆಗುತ್ತದೆ. ಒಬ್ಬ ಆಳು ಬೇಕು ಎಂದು ಕೇಳುತ್ತಾನೆ. ಮತ್ತು ಮಗು ಹೊಸ ಪಂಚೆ ಬೇಕೆಂದು ಕೇಳುತ್ತಾನೆ. ಇವು ಎಲ್ಲವುಗಳನ್ನು ಪುರೈಸಲು ಆಗುತ್ತರಲಿಲ್ಲ. ಈರೀತಿ ಗೋಪಾಲನ ತಾಯಿ ಬಡತನದಲ್ಲಿ ಜೀವನ ನಡೆಸುತ್ತಿದ್ದಳು.

4. ಬನದ ಗೋಪಾಲನ ವೇಶಭೋಷಣಗಳು ಹೇಗಿದ್ದವು?

ಉತ್ತರ: ಬನದ ಗೋಪಾಲನ ತಲೆಯ ಮೇಲೆ ಒಂದು ಸಣ್ಣಕಿರಿಟ. ನವಿಲುಗರಿ. ಕೈಯಲ್ಲಿ ಒಂದು ಕೊಳಲು. ಇವು ಬನದ ಗೋಪಾಲನ ವೇಶಾಭೂಷಣಗಳು.

*** ಸುಮಾರು ಹತ್ತು ವಾಕ್ಯದಲ್ಲಿ ಉತ್ತರಿಸಿ.**

1. ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಶಣೆ ಏನು?



MAJEED SHAKEEL

ಉತ್ತರ:ಗೋಪಾಲನ ತಾಯಿ ಹೇಳಿದ ಪ್ರಕಾರ ಗೊಪಾಲ ಮನೆಗೆ ಬರುವಾಗ ಹೆದರಿಕೆ ಆಗುತ್ತದೆ. ಆಗ ಬನದ ಗೋಪಾಲನಿಗೆ ಕರೆಯುತ್ತಾನೆ. ಬನದ ಗೋಪಾಲ ಏನೋ, ಗೋಪಾಲ? ಎಂದು ಕೇಳುತ್ತಾನೆ. ಆಗ ಮಗು ಗೋಪಾಲ ಹೇಳುತ್ತಾನೆ. ಎಲ್ಲಿದ್ದೀಯಾ? ಹೆದರಿಕೆಆಗುತ್ತಿದೆ ನನಗೆ. ಅಮ್ಮ ಹೇಳಿದ್ದಳು, ಹೆದರಿಕೆಯಾದರೆ ನಿನ್ನನ್ನು ಕರೆ ಅಂತ. ಆಗ ಬನದ ಗೋಪಾಲ ಹೇಳತ್ತಾನೆ. ದರಬೇಡ ನಾನಿಲ್ಲಿಯೇ ಇದ್ದೇನೆ. ಧೈರ್ಯವಾಗಿ ಹೋಗು ಮನೆಗೆ. ಎಂದಾಗ ಮಗು ಎಲ್ಲಿದ್ದೀಯೆ, ಬಾ ಅಣ್ಣಾ ಎಂದಾಗ ಬನದ ಗೋಪಾಲ ಹೆಳುತ್ತನೆ. ಇಲ್ಲೇ ಇದ್ದೇನೆ ಕಣೋ ಈಗ ತುಂಬಾ ಕೆಲಸವಿದೆ. ಬರುವದಕ್ಕೆ ಆಗುವದಿಲ್ಲ. ನೀನು ಮನೆಗೆ ಹೋಗು. ಎಂದಾಗ ಮಗು ನೀನು ಮನೆಗೆ ಅಮ್ಮನನ್ನು ನೋಡಲು ಬರುವದಿಲ್ಲವೆ? ಕತ್ತಲಲ್ಲಿ ಕಾಡಿನ ನಡುವೆ ಏಕಿರುವೆ ಎಂದು ಕೇಳುತ್ತಾನೆ. ಆಗ ಬನದ ಗೋಪಾಲ ನಾನು ಹಿಂದಿನಿಂದ ಬರುತ್ತೇನೆ ಅಮ್ಮನನ್ನು ಹೇಳು. ಅಮ್ಮ ನಿನಗಾಗಿ ಕಾದಿದ್ದಾಳೆ ಬೇಗ ಹೋಗು. ಹೋಹಪ್ಪ ಎಂದು ಹೇಳುತ್ತಾನೆ. ಇದು ಗೋಪಾಲ ಹಾಗು ಬನದ ಗೋಪಾಲನ ಮಧ್ಯದ ಸಂಭಾಷಣೆ.

2. ಗೋಪಾಲನು ತನ್ನ ತಾಯಿಯೊಂದಿಗೆ ನಡಿಸಿದ ಸಂಭಾಷಣೆಯ ಸಾರವೇನು?

ಉತ್ತರ: ಗೋಪಾಲನ ತಾಯಿಯು ಮುಂಜಾನೆ ಗೋಪಾಲನನ್ನು ಎಬ್ಬಿಸುತ್ತಾಳೆ. ಗೋಪಾಲ ಬೆಳಗಾಯ್ತು ಏಳು. ಎಂದಾಗ ಗೋಪಾಲ ಅಲ್ಲಿ ಇರುವದಿಲ್ಲ. ಅವನು ಬನಕ್ಕೆ ಹೋಗಿ ಹೂ ಕೊಯ್ದು ತರಲು ಹೋಗಿದ್ದನು. ಅಲ್ಲಿಂದ ಬಂದಾಗ ತಾಯಿ ಶಾಲೆಗೆ ಹೋಗಲು ಹೇಳುತ್ತಾಳೆ. ಅವಳು ಬಹಳ ಬಡವಳಾಗಿದ್ದಳು. ಜೀವನ ನಿರ್ವಹಣೆ ಮಾಡಿ ಕೊಂಡು ಒಚಿದು ಸಣ್ಣ ಗುಡಿಸಲಲ್ಲಿ ವಾಸವಾಗಿದ್ದಳು. ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು ಅವಳು ಚರಕದಿಂದ ನೂಲು ತೆಗೆದು ಮಗನ ಓದಿಗೆ ಸಂಸಾರದ ಖರ್ಚನ್ನು ಬಹಳ ಕಷ್ಟದಿಂದಲೇ ನಿಭಾಯಿಸುತ್ತಿದ್ದಳು. ಮಗನು ಹೊಸ ಪಂಚೆ ಕೇಳಿದಾಗ ಹಗಲಿರುಳೂ ನೂತು ಸಂಪಾದಿಸಿ ಅದನ್ನು ಕೊಡಿಸಿದಳು. ಸಂಜೆಯ ವೇಳೆ ಶಾಲೆಯಿಂದ ಬರುವಾಗ ಕಾಡು ದಾಟುವ ಸಮಯ ಭಯವೆಂದಾಗ ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು. ದೇವರು ನಿನ್ನ ರಕ್ಷಣೆಯನ್ನು ಮಾಡುವನೆಂದು ಹೇಳಿ ಅವನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ಕಳುಹಿಸಿದಳು. ನಿನ್ನ ಅಣ್ಣ ಗೋಪಾಲನು ನಿನ್ನನ್ನು ಕಾಡು ದಾಟಿಸುವನು ಎಂದು ಹೇಳಿ ಶಾಲೆಗೆ ಕಳುಹಿಸಿ, ಅವನಲ್ಲಿ ಧೈರ್ಯ ತುಂಬುತ್ತಿದ್ದಳು.

3. ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ.

ಉತ್ತರ:ಬೆಳಗಿನಲ್ಲಿ ಸೂರ್ಯನು ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದಲ್ಲಿ ಮಿರುಗುತ್ತಿದ್ದಾನೆ .ಕಾಡಿನಲ್ಲಿ ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತ ಬಾಳೆಯ ಹೂವು, ಗೋರಂಟಿಯ ಹೂವುಗಳು ಅರಳಿ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು. ಅದರ ಸುಗಂಧ ಸುತ್ತಲೂ ಹರಡಿ ಹೊಸ ಸಂತೋಷವನ್ನು ಕೊಡುತ್ತಿತ್ತು. ಹಕ್ಕಿಗಳ ಇಂಪಾದ ಗಾನ, ತಂಗಾಳಿ, ಸೂರ್ಯದೇವನ ಹೊಂಬೆಳಕು ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ ಬಹಳ ಸೊಗಸಾಗಿತ್ತು. ಹೀಗೆ ಪ್ರಕೃತಿಯು ನಯನ ಮನೋಹರವಾಗಿ ಕಾಣುತ್ತಿತ್ತು.

4. ಬನದ ಗೋಪಾಲನ ಹಾಡಿನ ಸಾರವನ್ನು ಬರೆಯಿರಿ.

ಉತ್ತರ:ಗೋಪಾಲನು ತಪಸ್ಸನ್ನು ಮಾಡಿದ ಮನುಷ್ಯರ ಒಲುಮೆಗೆ ಸೆರೆಯಾಗುವನು ಎನ್ನುತ್ತಾನೆ. ತಪಸ್ವಿಗಳು ಯುಗಯುಗಗಳು ತಪಸ್ಸನ್ನು ಮಾಡಿ ಯೋಗಿಗಳಾಗಲು ಸಾಧನೆಯನ್ನು ಮಾಡುವರು. ವಿಶಾಲವಾದ ಕಡಲಿಗಿಂತ ಭಕ್ತರ ಕಣ್ಣೀರು ಅವನ ಇರುವಿಕೆಯ ಸ್ಥಾನವಾಗಿದೆ. ಪರ್ವತದ ಎತ್ತರಕ್ಕಿಂತ ಭಕ್ತರ ಹೃದಯ ಮಂದಿರವನ್ನು ಆತನು ಬಯಸುತ್ತಾನೆ. ಬೃಂದಾವನದಲ್ಲಿ ಗೋಪಿಕೆಯರು ಆಡುವ ಮಾತಿನಲ್ಲಿ ವೇದಗಳಲ್ಲಿ ಇರುವ ಸಾರವು ಸತ್ಯವು ಅಡಗಿದೆ. ಹಾಲನ್ನು ಮಾರುವ ಹೆಣ್ಣುಗಳ ಪ್ರೀತಿಯು ಯೋಗಿಯ ಸಾಧನೆಯನ್ನು ಕೂಡಾ ಮೀರಿದ್ದು ಎಂದು ಗೋಪಾಲನು ಕೊಳಲನ್ನು ಊದುತ್ತಾ ಹಾಡುತ್ತಾನೆ.

5. ಗೋಪಾಲನಿಗೆ ಇದ್ದ ಕಷ್ಟವೇನು?ಅದು ಹೇಗೆ ಪರಿಹಾರವಾಯಿತು?


MAJEED SHAKEEL

ಉತ್ತರ:ಗೋಪಾಲನ ಗೆಳೆಯರು ಅವನ ಹಳೆಯ ಬಟ್ಟೆಯನ್ನು ನೋಡಿ ಹಾಸ್ಯ ಮಾಡುತ್ತಿದ್ದರು . ಮತ್ತು ಸಂಜೆಯ ವೇಳೆ ಶಾಲೆಯಿಂದ ಬರುವಾಗ ಕಾಡು ದಾಟಿ ಬರುವಾಗ ಭಯವಾಗುತಿತ್ತು. ಇದು ಗೋಪಾಲನ ಕಷ್ಟಗಳು. ಗೋಪಾಲನ ತಾಯಿ ಹಗಲಿರುಳು ನೂತು ಸಂಪಾದಿಸಿದ ಹಣದಿಂದ ಪಂಚೆ ಕೊಡಿಸಿದಳು. ಶಲೆಯಿಂದ ಬರುವಾಗ ಹೆದರಿಕೆ ಆದರೆ ಬನದ ಗೋಪಾಲನ್ನು ಕರೆಯಲು ಹೇಳಿದಳು. ಮತ್ತು ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು. ದೇವರು ನಿನ್ನ ರಕ್ಷಣೆಯನ್ನು ಮಾಡುವನು ಎಂದು ಹೇಳಿ ಅವನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ ಕಳುಹಿಸಿದಳು. ನಿನ್ನ ಅಣ್ಣ ಗೋಪಾಲನು ನಿನ್ನನ್ನು ಕಾಡು ದಾಟಿಸುವನು ಎಂದು ಹೇಳಿ ಶಾಲೆಗೆ ಕಳುಹಿಸಿ ಅವನಲ್ಲಿ ಧೈರ್ಯ ತುಂಬಿಳು. ಈ ರೀತಿಯಾಗಿ ಗೋಪಾಲನ ಕಷ್ಟ ಪರಿಹಾರವಾಯಿತು.

* **ಸಂದರ್ಭದೊಂದಿಗೆ ಅರ್ಥವಿಶೇಷವನ್ನು ಬರೆಯಿರಿ.**

1. ಸಾವಿರಾರು ಮಳೆಬಿಲ್ಲುಗಳು ಸೇರಿಕುಣಿದಂತೆ ತೋರುತ್ತಿತ್ತು

ಸಂದರ್ಭ;ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ಗೋಪಾಲನು ತನ್ನ ಅಮ್ಮನಿಗೆ ಹೇಳಿದನು. ಬನದಲ್ಲಿ ಕಂಡುಬರುವ ಪ್ರಕೃತಿಯನ್ನು ವರ್ಣಿಸುತ್ತಾ ಮಲ್ಲಿಗೆ ಹೂ, ಕೇದಿಗೆ ಹೂ, ಸಂಪಿಗೆಹೂ, ಪರ್ವತ ಬಾಳೆಯ ಹೂ ಗೋರಂಟಿಯ ಹೂ ಅರಳಿ ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ತೋರುತ್ತಿತು ಎಂದು ವರ್ಣಿಸುತ್ತಾ ಈ ಮಾತನ್ನು ಹೇಳಿದನು.

2. ಆಗೋಪಾಲ ಕೊಡ ಬೇಕು ನಾವು ಉಣಬೇಕು

ಸಂದರ್ಭ;ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ಗೋಪಾಲನ ತಾಯಿ ಮಗನಿಗೆ ಹೇಳಿದಳು. ಗೋಪಾಲ ತಾನು ಒಂಟಿಯಾಗಿ ಕಾಡು ದಾಟಿಬರುವಾಗ ಭಯವಾಗುತ್ತದೆ. ನನ್ನ ಗೆಳೆಯರ ಜೊತೆ ಆಳು ಇರುತ್ತಾರೆ. ನನ್ನ ಜೊತೆ ಮಾತ್ರ ಯಾರೂ ಇಲ್ಲ ಎಂದಾಗ ತಾಯಿ ಅವರೆಲ್ಲ ಶ್ರಿಮಂತರು ಎಂದು ಹೇಳುತ್ತಾ ಹೀಗೆ ಹೇಳಿದಳು.

3. ಆಮಗುವಿಗೆ ಬಡತನದ ಬವಣೆಯೇಕೆ?

ಸಂದರ್ಭ;ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ. .

ಸ್ವಾರಸ್ಯ: ಈ ಮಾತನ್ನು ಗೋಪಾಲನ ತಾಯಿ ತನ್ನ ಮನಸ್ಸಿನಲ್ಲೇ ಹೇಳಿಕೊಂಡಳು. ಇಲ್ಲಿಯವರೆಗೆ ತನ್ನ ಮಗನಿಗೆ ಬಡತನದ ಬಗ್ಗೆ ತಿಳಿಯದಂತೆ ಬೆಳೆಸಿದೆ. ಆದರೆ ಈಗ ನನಗೆ ಇನ್ನು ಮುಂದೆ ತಮ್ಮ ಬಡತನವನ್ನು ತಿಳಿಸದೇ ಬೇರೆ ದಾರಿ ಇಲ್ಲ. ಎಂದು ದುಃಖಿಸುತ್ತಾ ದೇವರಿಗೆ ಹೀಗೆ ಬೇಡುತ್ತಾ ಮೇಲಿನ ಮಾತು ಹೇಳುತ್ತಾಳೆ.

4. ಅಮ್ಮನ ಮಾತು ಸುಳ್ಳಾಗ ಲಾರದು?

ಸಂದರ್ಭ; ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ಮಾತನ್ನು ಗೋಪಾಲನು ತನ್ನಲ್ಲೆ ಹೇಳಿಕೊಂಡನು. ಕಾಡಿನಲ್ಲಿ ಗೋಪಾಲನು ಭಯಗೊಂಡು ತಾಯಿ ಹೇಳಿದಂತೆ ಅಣ್ಣನನ್ನು ಕರೆಯುತ್ತಾನೆ. ಆಗ ಅಣ್ಣ ಬರಲಿಲ್ಲ, ಅವನು ಅನುಮಾನದಿಂದ ಹೀಗೆ ಮೇಲಿನ ಮಾತು ಹೇಳಿದ್ದಾನೆ.

## ಪದ್ಯ 1 ಏಣಿ

***ಕವಿ|ಸಾಹಿತಿಯ ಪರಿಚಯ :**

ಸಾಹಿತಿಯ ಹೆಸರು : ಸುಕನ್ಯಾ ಮಾರುತಿ

ಕಾಲ : ಬಳ್ಳಾರಿ ಜಿಲ್ಲೆಯ ಕೊಟ್ಟೂರ.



MAJEED SHAKEEL

ಸ್ಥಳ : 1956

ಕ್ರತಿಗಳು : ನಾನೆಂಬ ಮಾಯೆ, ನಾನು ನನ್ನವರು, ತಾಜ್ ಮಹಲಿನ ಹಾಡು

**ಕಠಿಣ ಪದಗಳ ಅರ್ಥ;**

ಆಸರೆ- ಆಶ್ರಯ. ಕರಗು-ಸ್ಪಂದಿಸು. ತ್ರಿಶಂಕು-ಇಕ್ಕಟ್ಟಿನಲ್ಲಿ ಸಿಲುಕಿದವರು. ಪಾಡು-ಅವಸ್ಥೆ. ಶಿಖಂಡಿ_ನಪುಂಸಕ. ಏಣಿ-ಮೇಲೆ ಏರಲು ಬಳಸುವ ಸಾಧನ. ಕಾಳಜಿ-ಜಾಗಾರುಕತೆ. ನಮ್ರತೆ-ವಿನಯ. ಬುನಾದಿ-ಅಡಿಪಾಯ. ಹಮ್ಮು-ಸೊಕ್ಕು.

* **ಈ ಪ್ರಶ್ನೆಗಳಿಗೆ 1-2 ವಾಕ್ಯಗಳಲ್ಲಿ ಉತ್ತರಿಸಿ.**

1. ಏಣಿ ಜನರಿಗೆ ಮಾಡಿದ ಉಪಕಾರವೇನು?

ಉತ್ತರ; ಜನರನ್ನು ಮೇಲಕ್ಕೆ ಎತ್ತಿ ಹಿಡಿಯುವುದರ ಮೂಲಕ ಉಪಕಾರ ಮಾಡಿತ್ತದೆ.

2. ಏಣಿಯನ್ನು ಬಳಸಿ ಮೇಲೆ ಏರಿದವರಿಗೆ ಏಣಿ ಹಾಕುವ ಸವಾಲು ಏನು?

ಉತ್ತರ; ಏಣಿ ಅವರು ಹೇಗೆ ಇಳಿಯುತ್ತಾರೆಂದು ಸವಾಲು ಹಾಕುತ್ತದೆ.

3. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕೆದಿದ್ದಾರೆ?

ಉತ್ತರ; ಮೇಲಂತಸ್ತಿನ ಮಾನವನನ್ನು .

4. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?

ಉತ್ತರ: ಸಹಾಯ ಮಾಡಿದವರನ್ನು ಮರೆತಾಗ.

5. ಏಣಿಗೆ ಬೀಳುವ ಭಯವಿಲ್ಲ ಏಕೆ?

ಉತ್ತರ; ಆನೆ ಭಾರ ಹೊತ್ತು ಗಟ್ಟಿ ನೆಲೆದ ಮೇಲೆ ಕಾಲೂರಿದರಿಂದ ಏಣಿಗೆ ಬೀಳುವ ಭಯ ವಿಲ್ಲ.

* **ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?

ಉತ್ತರ; ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ ಅದು ಸುರಕ್ಷಿತವೂ ಅಲ್ಲ. ಆಕಾಶದಲ್ಲಿ ಎಷ್ಟೆಹೊತ್ತು ಹಾರಾಡಿದರೂ ಮತ್ತೆ ಅವರು ಕೆಳಗೆ ಇಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದು. ಮರೆತರೆ ಅದು ಒಳ್ಳೆಯದಲ್ಲ ಎಂದು ಏಣಿ ಉಪದೇಶಿಸಿದೆ.

2. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

ಉತ್ತರ; ಜನ ಸಾಮಾನ್ಯರು ಅದರ ಮೇಲೆ ಭಾರವನ್ನು ಹಾಕಿ ಮೇಲಕ್ಕೆ ಏರಿದಾಗ ಅದು ಭಾರವನ್ನು ಕಷ್ಟಪಟ್ಟು ಹೊತ್ತಿಕೊಳ್ಳುತ್ತದೆ. ಮತ್ತು ಅವರು ಕೆಳಗೆ ಬೀಳದಂತೆ ಎತ್ತಿ ಹಿಡಿಯತ್ತದೆ. ಆದರೆ ಮೇಲೆ ಏರಿದವರು ಏಣಿಯನ್ನು ಮರೆಯುತ್ತಾರೆ ಎಂದು ಏಣಿ ಹೇಳಿಕೊಳ್ಳುತ್ತದೆ.

3. ಮೇಲೆರಿದವರಿಗೆ ಏಣಿಯ ಮಹತ್ವ ಯಾವಗ ಅರಿವಾಗುತ್ತೆದೆ?

ಉತ್ತರ; ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಹಾರಾಡಿ ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿಯ ಮಹತ್ವ ಅರಿವಾಗುತ್ತದೆ.

4. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

ಉತ್ತರ; ಜನಸಾಮಾನ್ಯರಲ್ಲಿ ವಿನಯ ವಿಧೇಯ ಇರುತ್ತದೆ ಅಂಥಹ ಜನಸಾಮಾನ್ಯರ ನಮ್ರತೆಗೆ ಕರಗುತ್ತೇನೆ ಅವರನ್ನು ಕೆಳಗೆಬೀಳದಂತೆ ಎತ್ತಿ ಹಿಡಿಯುತ್ತೇನೆಂದು ಏಣಿ ಹೇಳುತ್ತದೆ.

* **ಕೆಳಗಿನ ಪ್ರೂಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

MAJEED SHAKEEL

1. ಏಣಿ ಕವಿತೆ ನೀಡುವ ಸಂದೇಶವೇನು?

ಉತ್ತರ; ಏಣಿ ಈ ಪ್ರಸ್ತುತ ಪದ್ಯದ ಮೂಲಕ ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೆರುತ್ತಾನೆ. ಹೀಗೆ ಮೇಲೆರಿದವನಿಗೆ ಅಹಂ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ, ತಿರಸ್ಕರಿಸುತ್ತಾನೆ. ಹಣ, ಅಧಿಕಾರ ಅಂತಸ್ತುಗಳು ಎಂದಿಗೂ ಶಾಶ್ವತವಲ್ಲ. ಅದನ್ನು ಅರಿತು ತನ್ನ ಏಳಿಗೆಗೆ ಕಾರಣರಾದವರನ್ನು ಗೌರವಿಸದಿದ್ದರೆ ತಮ್ಮ ವಿಪತ್ತಿಗೆ ತಾವೇ ಕಾರಣರಾಗುತ್ತಾರೆ. ಎಂಬುದನ್ನು ತಿಳಿಸುತ್ತದೆ. ಹಾಗೆಯೇ ಅದು ಸಹಾಯ ಮಾಡಿದವರನ್ನು ಮರೆಯದಿದ್ದರೆ ಅವರ ಜೀವನದಲ್ಲಿ ಕೆಳಗೆ ಬೀಳು ಭಯವಿಲ್ಲದೆ ಬದುಕಬಹುದು ಎಂದು ಏಣಿ ಸಂದೇಶವನ್ನು ನೀಡುತ್ತದೆ.

2. ಏಣಿ ಹೇಳುಕೊಳ್ಳುವ ಸಂಕಟ ಹಾಗೂ ಹಾಕುವ ಸವಾಲುಗಳೇನು?

ಉತ್ತರ: ಏಣಿ ಆನೆ ಸಾಮಾನ್ಯರನ್ನು ಎತ್ತಿ ಹಿಡಿದು ಅವರನ್ನು ಮೇಲಕ್ಕೇರಿಸುತ್ತದೆ. ಆದರೆ ಜನರು ಅದರ ಸಹಾಯವನ್ನು ಮರೆತು ಹೋಗುತ್ತಾರೆ. ಅಂತಹ ಜನರನ್ನು ಏಣಿ ಅವರು ಹೇಗೆ ತನ್ನ ಸಹಾಯವಿಲ್ಲದೆ ಕೆಳಗೆ ಇಳಿಯುತ್ತಾರೆಂದು ನೋಡುವೆ ಎಂದು ಸವಾಲು ಹಾಕುತ್ತದೆ. ಏಣಿಯು ಒಂದೊಂದು ಜನರ ಹೆಜ್ಜೆಯ ಭಾರ ಹೊರುವಾಗ ತಾನು ಪಟ್ಟಕಷ್ಟ ಹೇಳಿಕೊಳ್ಳಲು ಸಾಧ್ಯವಿಲ್ಲ. ಎಂದು ಹೇಳುತ್ತದೆ. ಅದು ಆನೆ ಭಾರ ಹೊತ್ತ ಗ್ಬಟ್ಟಿ ನೆಲದಲ್ಲಿ ಕಾಲೂರಿ ನಿಂತಿರುವುದರಿಂದ ಕೆಳಗೆ ಬೀಳುವ ಭಯವಿಲ್ಲ ಎಂದು ಹೇಳುತ್ತದೆ. ಈ ಜನಸಾಮಾನ್ಯರು ಕಾಲೂರಿದ ನೆಲವನ್ನು ಮರೆತು ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಅವರು ಏಣಿಯ ಸಹಾಯವಿಲ್ಲದೆ ಕೇಳಗೆ ಬರಲು ಸಾಧ್ಯವಿಲ್ಲ. ಅವರು ತಮ್ಮ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿ ಅವರ ಸಹಾಯಕ್ಕೆ ಬರುವುದಿಲ್ಲ ಎಂದು ಹೇಳುತ್ತದೆ.

**ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ನಾನು ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು

ಸಂದರ್ಭ; ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ರಚಿಸಿರುವ ಏಣಿ ಕವನದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ; ಈ ವಾಕ್ಯವನ್ನು ಏಣಿಯು ತನ್ನ ಸಹಾಯವನ್ನು ಮರೆಯುವ ಸಂದರ್ಭದಲ್ಲಿ ಹೇಳಿದೆ. ಜನ ಸಾಮಾನ್ಯರು ಏಣಿಯ ಸಹಾಯದಿಂದ ಮೇಲಕ್ಕೆ ಹತ್ತಿ ಹೋಗಿ ಅದಕ್ಕೆ ಕೈ ಬಿಸಿದಾಗ ಅವರು ಅದರ ಸಹಾವಿಲ್ಲದೆ ಹೇಗೆ ಕೆಳಗೆ ಇಳಿಯುತ್ತಾರೆಂದು ನೋಡುತ್ತೇನೆ. ಎಂದು ಸವಾಲು ಹಾಕುತ್ತದೆ.

2. ಇವರಿಗೆ ಭಾರ ಹೊತ್ತುವರ ಕಾಳಜಿಯೇ ಇಲ್ಲ

ಸಂದರ್ಭ; ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ರಚಿಸಿರುವ ಏಣಿ ಕವನದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಏಣಿಯು ಜನ ಸಾಮಾನ್ಯರ ಭಾರ ಹೊರುವಾಗ ಈ ವಾಕ್ಯವನ್ನು ಹೇಳಿತ್ತದೆ. ಜನರ ಹೆಜ್ಜೆಯ ಭಾರವನ್ನು ಹೊರುವಾಗ ಅದು ಪಡುವ ಕಷ್ಟ ಯಾರಿಗೂ ಅರಿವಾಗುವುದಿಲ್ಲ. ಅವರು ಯಾವುದೇ ಕಷ್ಟ ಪಡದೆ ಮೇಲಕ್ಕೇರಿ ಮೇಲಕ್ಕೇರಿಸಿದವರ ಸಹಾಯವನ್ನು ಮರೆಯುವರು ಎಂದು ಹೇಳಿಕೊಳ್ಳುತ್ತದೆ.

3. ನಾನು ತಿರಸ್ಕರಿಸಿದರೆ ಏನು ಮಾಡುತ್ತಾರೆ ಈ ಶಿಖಂಡಿಗಳು?

ಸಂದರ್ಭ; ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ರಚಿಸಿರುವ ಏಣಿ ಕವನದಿಂದ ಆರಿಸಿಕೊಳ್ಳಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಏಣಿಯ ಸಹಾಯದಿಂದ ಮೇಲಕ್ಕೇರಿದವರು ಕೆಳಗೆ ಇಳಿಯುವ ಸಂದರ್ಭದಲ್ಲಿ ಹೇಳುತ್ತದೆ. ಜನರು ಆಕಾಶದಲ್ಲಿ ಎಷ್ಟೆ ಹೊತ್ತು ಹಾರಾಡಿದರೂ ಅವರು ಏಣಿಯ ಸಹಾದಿಂದಲೇ ಮತ್ತೆ ಕೆಳಗೆ ಇಳಿಯಬೇಕು. ಆ ಸಂದರ್ಭದಲ್ಲಿ ಏಣಿ ಅವರನ್ನು ತಿರಸ್ಕರಿಸುತ್ತದೆ ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

4. ನಮ್ರತೆಗೆ ನಾ ಕರಗುತ್ತೇನೆ.

ಸಂದರ್ಭ:ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ರಚಿಸಿರುವ ಏಣಿ ಕವನದಿಂದ ಆರಿಸಿಕೊಳ್ಳಲಾಗಿದೆ.



MAJEED SHAKEEL

ಸ್ವಾರಸ್ಯ:ಏಣಿಯ ಜನರುವಿನಯಕ್ಕೆ ಕರಗುವ ಸಂದರ್ಭದಲ್ಲಿ ಈ ಮಾತು ಹೇಳುತ್ತದೆ. ಏಣಿಯು ಮೇಲಕ್ಕೇರಿದ ಜನರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಅವರಿಗೆ ಅದು ನಿಲುಕುವುದಿಲ್ಲ ಎಂದು ಹೇಳುತ್ತದೆ. ಅದು ನಮ್ರತೆಗೆ ಕರಗಿ ಬೆಳೆಯ ಬಲ್ಲವರನ್ನು ಮಾತ್ರ ಎತ್ತಿ ಹಿಡಿಯುತ್ತೇನೆ ಎಂದು ಹೇಳುತ್ತದೆ.

## ಪದ್ಯ -2 ಬೋಧಿವೃಕ್ಷದ ಹಾಡು.

***ಕವಿ\ಸಾಹಿತಿಯ ಪರಿಚಯ :**

| | |
|---|---|
| ಸಾಹಿತಿಯ ಹೆಸರು | : ಡಾ॥ ಬಸವರಾಜ ಸಬರದ |
| ಕಾಲ | : 1954 |
| ಸ್ಥಳ | : ಕೊಪ್ಪಳ ಜಿಲ್ಲೆಯ ಕುಕನೂರ. |
| ಕ್ರತಿಗಳು | : ನನ್ನವರ ಹಾಡು, ಹೋರಾಟ, ನೂರು ಹನಿಗಳು. |
| ಪ್ರಶಸ್ತಿಗಳು | : ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ ,ಕಾವ್ಯಾನಂದ ಪ್ರಶಸ್ತಿ. |

***ಕಂಠಪಾಠ ಪದ್ಯಗಳು.**

ಕಾಡು ಕಾಡು ಅಲೆದವನಿಗೆ ನಾಡಿನಾರ್ಥ ಹೊಳೆಯಿತು
ಕೋಗಿಲೆಯ ಹಾಡೊಂದು ದೊರದಿಮದ ಕೇಳಿತು
ಬೆಳ್ಳಿಚುಕ್ಕೆ ಬಾನಿನಲ್ಲಿ ಆಗತಾನೆ ಬೆಲಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.

ಏಕಾಂಗಿಯಾಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದವನು ಅಡವಿ ದಾರಿ ಹಿಡಿದನು!
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

**ಕಠಿಣ ಪದಗಳ ಅರ್ಥ;**

ಅಡವಿ- ಕಾಡು. ಕೋಡಿ- ಕೆರೆತುಂಬಿ ಹರಿಯುವದು. ಗೋಡಾರ್ಥ-ಒಳರ್ಥ. ಪರಿ-ರೀತಿ. ಬೋಧಿವೃಕ್ಷ-ಅರಳಿಮರ. ಮಡದಿ-ಪತ್ನಿ. ಹಿಂಡು- ಗುಂಪು. ಏಕಾಂಗಿ-ಒಬ್ಬಂಟಿ. ಗುಟುಕು-ಒಂದು ಸಲ ಕುಡಿಯುವಷ್ಟು ನೀರು. ತೊರೆದು- ಬಿಟ್ಟುಬಿಡು. ಬೆಳ್ಳಿಚುಕ್ಕೆ-ಬೆಳಗ್ಗೆ ಆಕಾಶದಲ್ಲಿ ಕಾಣುವ ಶುಕ್ರ ಗ್ರಹ. ಮಕರಂದ-ಹೊವಿನ ರಸ. ಮೋಹ-ಆಸೆ. ಹುತ್ತು- ಹಾವಿನ ಗೂಡು.

***. ಈ ಪ್ರಶ್ನೆಗಳಿಗೆ 1-2 ವಾಕ್ಯಗಳಲ್ಲಿ ಉತ್ತರಿಸಿ.**

1. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?

ಉತ್ತರ; ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.

2. ಸಿದ್ದಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?

ಉತ್ತರ; ಪತ್ನಿ, ಮಗ, ಅರಮನೆ, ಮೋಹವನ್ನು ತೊರೆದನು.

3. ಕಾಡನ್ನು ಅಲೆದ ಸಿದ್ದಾರ್ಥನಿಗೆ ಹೊಳೆದುದ್ದೇನು?

ಉತ್ತರ: ಸಿದ್ದಾರ್ಥನಿಗೆ ನಾಡಿನಾರ್ಥ ಹೊಳೆಯಿತು.

4. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?

ಉತ್ತರ: ಜನರ ಪ್ರೀತಿಯನ್ನು ಹುಡುಕುತ್ತ ನಾಡಿನತ್ತ ಹೊರಟನು.

5. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು?

ಉತ್ತರ: ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದೆಂದು ಬದುಕಿನ ಗೂಡಾರ್ಥವನ್ನು ಕಂಡು ಕೊಂಡನು.



MAJEED SHAKEEL

6. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?

ಉತ್ತರ: ಬುದ್ಧನ ಜೀವನವನ್ನು ಕುರಿತು ತಿಳಿಸುತ್ತದೆ.

7. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

ಉತ್ತರ: ಪ್ರೀತಿ ದೊಡ್ಡದೆಂಬ ಬದುಕಿನ ಸತ್ಯವನ್ನು ಅರಿತುಕೊಂಡನು.

*** ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

**1. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?**

ಉತ್ತರ: ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿಯು ಕಾಡು ಕಾಡು ಅಲೆದ ನಂತರ ಬೆಳಿಗ್ಗೆ ಆಕಾಶದಲ್ಲಿ ಬೆಳ್ಳಿಚುಕ್ಕೆ ಬೆಳಗಿ ಬೋಧಿವೃಕ್ಷದಲ್ಲಿ ಮಹಾ ಬೆಳಕು ಕಾಣಿಸಿತು ಎಂದು ಬಣ್ಣಿಸಿದ್ದಾರೆ.

**2. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?**

ಉತ್ತರ:ಕಾಡಿನ ತುಂಬ ಪ್ರೀತಿಯ ಹೊಳೆಯು ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ಹೂವಿನ ಮಕರಂದವನ್ನು ಸವಿಯಲು ದುಂಬಿ ಹೂವಿನಿಂದ ಹೂವಿಗೆ ಹಾರಾಡುತ್ತಿತ್ತು. ಎಲ್ಲ ಗಿಡವು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

*** ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ?

ಉತ್ತರ:ಸಿದ್ಧಾರ್ಥ ಜಗತ್ತಿನಲ್ಲಿ ಆಗುವ ಘಟನೆಗಳನ್ನು ನೋಡಿ ದುಃಖಪಡುತ್ತಾನೆ. ಅದರಿಂದ ನೊಂದ ಅವನು ಏಕಾಂಗಿಯಾಗಿ ಮಧ್ಯರಾತ್ರಯಲ್ಲಿ ವೀರನಂತೆ ಎದ್ದು ತನ್ನ ಪತ್ನಿ ಮಗನನ್ನು ಬಿಟ್ಟು ಸಿಂಹಾಸನದ ಮೋಹವನ್ನು ಕಾಡಿನ ಕಡೆ ಹೋಗುತ್ತಾನೆ. ಯಾವುದೇ ಗೊತ್ತು ಗುರಿ ಇಲ್ಲದೆ ಕತ್ತಲಿನಲ್ಲಿ ಹೊರಟನು. ಅವನು ಕಾಡಿನಿಂದ ಕಾಡಿಗೆ ಅಲೆದ ನಂತರ ಅವನಿಗೆ ನಾಡಿನ ಅರ್ಥ ಹೊಳೆಯಿತು. ಅವನು ಬೋಧಿವೃಕ್ಷದ ಅಡಿಯಲ್ಲಿ ತಪಸ್ಸಿಗೆ ಕುಳಿತನು. ತಪಸ್ಸನ್ನು ಮಾಡುವಾಗ ಅವನಿಗೆ ದೂರದಿಂದ ಬೆಳಕು ಕಂಡಿತು. ಅವನು ಕಾಡಿನಲ್ಲಿ ಹಕ್ಕಿಯೊಂದು ತನ್ನಮರಿಗೆ ಗುಟುಕು ಕೊಟ್ಟು ಹಾರಿ ಹೋಗುವುದನ್ನು ಕಂಡನು. ಹುತ್ತದಿಂದ ಇರುವೆ ಗುಂಪು ಸಾಲಾಗಿ ಹೋಗುತ್ತಿತ್ತು. ಅವನು ಕಾಡು ತುಂಬ ಪ್ರೀತಿಯ ಹೊಳೆಯು ಹರಿಯುತ್ತಿತ್ತು. ಅದನ್ನೇಲ್ಲಾ ನೋಡಿಸ ಸಿದ್ಧಾರ್ಥನ ಮನಸು ಕರುಗಿತು. ಕಾಡನ್ನು ಬಿಟ್ಟು ನಾಡಿಗೆ ಹೋರಟನು. ಪ್ರೀತಿಯನ್ನು ಹುಡಿಕಿಕೊಂಡು ಜನರ ಬಳಿ ಹೋದನು. ಅವನಿಗೆ ತಪಸ್ಸಿಗಿಂತ ಜೀವ ಪ್ರೀತಿಯೇ ದೊಡ್ಡದು ಎಂದು ಅರಿವಾಯಿತು. ಹೀಗೆ ಸಿದ್ಧಾರ್ಥನು ಬುದ್ದನಾದನು.

2. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡು ಬಂದಿತು?

ಮರವು ಬಳ್ಳಿಯ ಹೂವನ್ನು ಮುಡಿದು ಅಪ್ಪಿಕೊಂಡಂತೆ ನಗುತ್ತಿತ್ತು. ಹಕ್ಕಿಯು ಸುಂದರವಾಗಿ ಹಾರಾಡುತ್ತಿತ್ತು. ಇರುವೆಗಳು ಹುತ್ತದಿಂದ ಹೊರಗೆ ಬಂದು ಗುಂಪಾಗಿ ಸಾಲುಗಟ್ಟಿ ನಡೆಯುತ್ತಿತ್ತು. ಬೆಳಕ್ಕಿಯು ಗುಂಪಾಗಿ ಬಾನಿಗೆ ಏಣಿಯನ್ನು ಹಾಕುವಂತೆ ಕಂಡವು. ಕಾಡು ತುಂಬ ಪ್ರೀತಿಯ ಹೊಳೆಯು ತುಂಬಿ ಹರಿಯುವಂತೆ ಕಾಣುತ್ತಿತು. ಗೂಡಿನಲ್ಲಿ ಹೊಸರಾಗ ಕೇಳಿಬಂದತು. ದುಂಬಿಯ ಮಕರಂದವನ್ನು ಸವಿಯಲೆಂದೆ ಹೂವಿನಿಂದ ಹೂವಿಗೆ ಹಾರುತ್ತಿತ್ತು. ಎಲ್ಲ ಗಿಡವೂ ಒಂದನೊಂದು ಅಪ್ಪಿಕೊಂಡು ಕುಣಿಯುವಂತೆ ಕಂಡಿತು.

***. ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು

ಸಂದರ್ಭ: ಈ ವಾಕ್ಯವನ್ನ ಡಾ॥ ಬಸವರಾಜ ಸಬರದ ರಚಿಸಿರುವ ಭೋಧಿವೃಕ್ಷದ ಹಾಡು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಸಿದ್ಧಾರ್ಥನು ತನ್ನ ಪತ್ನಿ, ಮಗ ಅರಮನೆಯನ್ನು ತೊರೆಯುವ ಸಂದರ್ಭದಲ್ಲಿ ಕವಿ ಈ ವಾಕ್ಯವನ್ನು ಹೇಳಿದ್ದಾರೆ. ಯುದ್ಧ ಬಿಟ್ಟು ಪ್ರೀತಿಯ ಮಾರ್ಗವನ್ನು ಹುಡುಕುವ ಸಲವಾಗಿ ತನ್ನ ಪತ್ನಿ, ಮಗ,



MAJEED SHAKEEL

ಅರಮನೆಯ ಮೋಹವನ್ನು ತೊರೆದು ಯಾವ ಗೊತ್ತು ಗುರಿ ಇಲ್ಲದೆ ಏಕಾಂಗಿಯಾಗಿ ಮಧ್ಯರಾತ್ರಿ ವೀರನಂತೆ ಕಾಡಿಗೆ ಹೊಗುತ್ತಾನೆ ಎಂದು ಕವಿ ಹೇಳುತ್ತಾರೆ.

2. ಕಾಡ ತುಂಬಾ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು.

ಸಂದರ್ಭ:ಈ ವಾಕ್ಯವನ್ನ ಡಾ॥ ಬಸವರಾಜ ಸಬರದ ರಚಿಸಿರುವ ಬೋಧಿವೃಕ್ಷದ ಹಾಡು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ವಾಕ್ಯವನ್ನು ಸಿದ್ಧಾರ್ಥನು ಬೋಧಿವೃಕ್ಷದ ಕೆಳಗೆ ತಪಸ್ಸು ಮಾಡುವಾಗ ಪ್ರಕೃತಿಯ ಸೌಂದರ್ಯವನ್ನು ಕಾಣುವ ಸಂದರ್ಭದಲ್ಲಿ ಹೇಳಿದ್ದಾರೆ. ಕಾಡಿನಲ್ಲಿರುವ ಪ್ರಕೃತಿಯ ಸೌಂದರ್ಯಗಳು ಅವನ ಮನಸ್ಸನ್ನು ಸೆಳೆಯಿತು. ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟ ಸಂತೋಷದಿಂದ ಆಕಾಶದ ಎತ್ತರಕ್ಕೆ ಹಾರಿ ಹೋಯಿತು. ಇದನ್ನು ಕಂಡ ಸಿದ್ಧಾರ್ಥ ಕಾಡು ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯಿತು ಎಂದು ಕವಿ ಹೇಳಿದರು.

3. ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.

ಸಂದರ್ಭ:ಈ ವಾಕ್ಯವನ್ನ ಡಾ॥ ಬಸವರಾಜ ಸಬರದ ರಚಿಸಿರುವ ಬೋಧಿವೃಕ್ಷದ ಹಾಡು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತು ಬುದ್ಧನು ಜ್ಞಾನೋದಯ ಆದ ನಂತರ ಹೇಳಿದ್ದಾರೆ. ಅವನು ಕಾಡಿನಿಂದ ಎದ್ದು ನಾಡಿನ ಕಡೆಗೆ ಬಂದನು. ತಪಸ್ಯ ಮಾಡುವಕ್ಕಿಂತ ಜೀವನದ ಪ್ರೀತಿ ದೊಡ್ಡದು ಎಂದು ತಿಳಿದು ಬದುಕಿನ ಗೊಡಾರ್ಥವನು ಅರಿದು ಬುದ್ಧನಾಗಿ ಬಂದನು.

## ಪದ್ಯ 3 - ಸವಿಚೈತ್ರ

***ಕವಿ|ಸಾಹಿತಿಯ ಪರಿಚಯ :**

| | |
|---|---|
| ಸಾಹಿತಿಯ ಹೆಸರು | : ಬಸವರಾಜ ಸಾದರ |
| ಕಾಲ | : 1955 |
| ಸ್ಥಳ | : ಧಾರವಾಡ ಜಿಲ್ಲೆಯ ಕುಂದಗೋಳ. |
| ಕ್ರತಿಗಳು | : ಸಿಸಿಫಸರ ಸುತ್ತು, ತಪ್ಪಂಡ, ಹೊಸ ಆಲೋಚನೆ, ಮೃದುವಾಗಿ ಮುಟ್ಟು. |
| ಪ್ರಶಸ್ತಿಗಳು | : ಆಕಾಶವಾಣಿ ಸ್ಪರ್ಧೆ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

***ಕಂಠಪಾಠ ಪದ್ಯಗಳು.**

ಕೊರಡ ಕೊನರಿಸಿ ತುದಿಗೆ ಮುಗಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವಿನ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

***ಕಠಿಣಪದಗಳ ಅರ್ಥ ಬರೆಯಿರಿ :**



MAJEED SHAKEEL

ಆದಿ-ಮೊದಲು. ಕೊರಡು-ಒಣ ಮರದ ತುಂಡು. ಖಗ-ಹಕ್ಕಿ. ಚೈತನ್ಯ-ಚಟುವಟಿಕೆ. ದಗದ-ಕೆಲಸ. ಮತ್ತು-ಮಾದಕತೆ ಮುಗುಳು-ಮೊಗ್ಗು. ವಾಲಗ-ವಾದ್ಯ. ಕಲರವ-ಮೋಹಕ ಧ್ವನಿ. ಕೊನರು-ಚಿಗುರು. ಚಿಗಿತ-ಚಿಗುರಿದ. ತಾರಕ-ಎತ್ತರದ ಸ್ವರ. ನೆಲದವ್ವ-ಭೂಮಿತಾಯಿ. ಮುಕ್ತ-ಬಿಡುಗಡೆ ಹೊಂದಿದ. ವಧು-ಮಧುಮಗಳು.

*** ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವದು ಯಾವಾಗ?

ಉತ್ತರ:ಯುಗದ ಆದಿಯಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

2. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?

ಉತ್ತರ:ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳೂತ್ತಾಳೆ.

3. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?

ಉತ್ತರ:ಚೈತ್ರದಲ್ಲಿ ನೆಲಮುಗಿಲಿನ ವಾಲಗ ನಡೆದಿರುತ್ತದೆ.

4. ಚೈತ್ರವು ಮಾಡುವ ಕೆಲಸವೇನು?

ಉತ್ತರ:ಯುಗದ ಹಿಂದಿನ ಕೊಳೆಯನ್ನು ತಿಕ್ಕಿ ಮೈತೊಳೆದೊತೆ ಮಾಡುವದು ಚೈತ್ರದ ಕೆಲಸ.

5. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

ಉತ್ತರ:ಯುಗಾದಿಯಲ್ಲಿ ಬೆಲ್ಲ ಬೇವು ತಿನಿಸನ್ನು ಹಂಚುವ ಸಂಪ್ರದಾಯವಿದೆ.

*** ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಯುಗದ ಆದಿ ತಂದ ಸಂಭ್ರಮವೇನು?

ಉತ್ತರ:ಯುಗಾದಿ ಬಂದಾಗ ಮರಗಿಡಗಳು ಹಸಿರಿನಿಂದ ಕಂಗೊಳಿಸುತ್ತವೆ. ಫಲಪುಷ್ಪಗಳಿಂದ ಸಮೃದ್ಧವಾಗಿರುತ್ತವೆ. ಬಣ್ಣಬಣ್ಣದ ಚಿತ್ರಗಳ ಹಾಗೆ ಕಳೆಯು ತುಂಬಿ ಭೂತಾಯಿ ನವವಧುವಿನಂತೆ ಶೋಭಿಸುತ್ತಾಳೆ.

2. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತರೆಂದು ಕವಿ ವರ್ಣಿಸಿದ್ದಾರೆ?

ಉತ್ತರ:ಚೈತ್ರವೆಂದರೆ ವಸಂತಋುತು. ವಸಂತವೆಂದರೆ ಋುತುಗಳ ರಾಜ ಈ ಕಾಲದಲ್ಲಿ ಗಿಡಮರಗಳು ಚಿಗುರುತ್ತವೆ ಬಣ್ಣಬಣ್ಣದ ಹೂಗಳು ಅರಳುತ್ತವೆ. ಕೋಗಿಲೆಯ ಗಾನವು ಇಂಪಾಗಿ ಕೇಳಿಸುತ್ತದೆ. ಎಲ್ಲೆಡೆ ಪ್ರಕೃತಿಯಲ್ಲಿ ಹೊಸತನ ಕಾಣುತ್ತದೆ.

3. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?

ಉತ್ತರ:ಚೈತ್ರದಲ್ಲಿ ಪ್ರಕ್ರತಿಯ ಬದಲಾವಣೆ ಆದಾಗ ಅದರ ಸೊಬಗನ್ನು ಕಂಡು ಪ್ರಾಣಿ ಪಕ್ಷಿಗಳು ಬೇಗ ಬೇಗ ಕೆಲಸಕ್ಕೆ ಹೋಗುವಂತೆ ಅವರ ಚಟುವಟಿಕೆ ಕವಿಗೆ ಗೋಚರಿಸಿತು.

4. ಚೈತ್ರದಲ್ಲಿ ನೆಲಮುಗಿಲು ವಾಲಗ ನಡೆದಂತೆ ಭಾಸವಾಗುತ್ತದೆ?

ಉತ್ತರ: ಚೈತ್ರದಲ್ಲಿ ಆದ ಪ್ರಕೃತಿಯ ಬದಲಾವಣೆಯ ವಿಶೇಷತೆ ಹೇಳುತ್ತ ಕವಿ ಕಾಡಿನ ಪ್ರಾಣಿ ಪಕ್ಷಿಗಳು ಕೆಲಸಕ್ಕೆ ಹೋಗುವಂತಿದೆ. ಜೀವನದಲ್ಲಿ ಒಂದು ಉಲ್ಲಾಸ ತುಂಬಿದಂತಾಗಿದೆ. ಇದರ ಸೊಬಗನ್ನು ನೋಡಿ ನೆಲ ಮತ್ತು ಮುಗಿಲು ಕೂಡಿ ವಾಲಗ ನಡೆದಂತೆ ಭಾಸವಗುತ್ತದೆ ಎಂದು ಹೇಳಿದ್ದಾರೆ.

***. ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಚೈತ್ರದಲ್ಲಾಗುವ ಪ್ರಕ್ರತಿಯ ಬದಲಾವಣೆಗಳಾವುವು?**

ಉತ್ತರ: ವಸಂತ ಋುತುವಿನಲ್ಲಿ ಮರಗಿಡಗಳು ಹೊಸ ಚಿಗುರುಗಳಿಂದ ತುಂಬುತ್ತವೆ. ಬಗೆಬಗೆಯ ಬಣ್ಣದ ಹೂಗಳು ಅರಳಿ ಕಂಪನ್ನು ಬೀರುತ್ತವೆ. ಮಾವು ಬೇವು ಮುಂತಾದ ಮರಗಳಲ್ಲಿ ಫಲಪುಷ್ಪಗಳುತುಂಬುತ್ತವೆ. ಮಾವಿನ ಚಿಗುರನ್ನು ಸವಿದು ಕೋಗಿಲೆಯು ಇಂಪಾಗಿ ಹಾಡುವ ಗಾನವು ಭೂಮಿಯ ಎಲ್ಲಾ ಕಡೆ ಕೇಳಿಸುತ್ತದೆ. ಜೊತೆಗೆ ಪಕ್ಷಿಗಳ ಕಲರವವು ಸೊಬಗನ್ನು ಹೆಚ್ಚಿಸಿ ಈ ಭೂಮಿತಾಯಿಯು ನವವಧುವಿನಂತೆ ಕೂಡಿರುತ್ತಾಳೆ. ಹೀಗೆ ಚೈತ್ರಮಾಸದಲ್ಲಿ ಪ್ರಕ್ರತಿ ಬದಲಾವಣೆ ಆಗುತ್ತದೆ.

MAJEED SHAKEEL

**2. ಕವಿ ಯುಗದ ಆದಿಯನ್ನು ಸವಿಚೈತ್ರವೆಂದು ಏಕೆ ಬಣ್ಣಿಸಿದ್ದಾರೆ?**

ಉತ್ತರ: ಚೈತ್ರವೆಂದರೆ ವಸಂತ ಋತುವಿನ ಕಾಲ ಈ ಋತುವಿನಲ್ಲಿ ಯುಗಾದಿ ಹಬ್ಬವು ಬರುತ್ತದೆ ಅಂದರೆ ಹೊಸ ವರುಷದ ಪ್ರಾರಂಭದ ಕಾಲ, ವಸಂತನೆಂದರೆ ಋತುಗಳ ರಾಜ. ಈ ಋತುವಿನಲ್ಲಿ ಮರಗಿಡಗಳೆಲ್ಲಾ ಚಿಗಿತು, ಫಲಪುಷ್ಪಗಳಿಂದ ಸಮೃದ್ಧವಾಗಿರುವುದು. ಚೈತ್ರಮಾಸದಲ್ಲಿ ಬಗೆಬಗೆಯ ಬಣ್ಣಗಳ ಹೂಗಳು ಅರಳುತ್ತವೆ. ಎಲ್ಲಾ ಕಡೆ ಹೊಸ ಕಳೆಯಿಂದ ಬರೆದ ಚಿತ್ರದ ಹಾಗೆ ಈ ಭೂಮಿ ತಾಯಿಯು ನವವಧುವಿನಂತೆ ಕಂಗೊಳಿಸುತಾ್ತಳೆ. ಚೈತ್ರಮಾಸ ಎಂದರೆ ಕವಿಗಳ ಮೆಚ್ಚಿನ ಕಾಲವೂ ಹೌದು ಚೈತ್ರದ ಸೊಬಗನ್ನು ಬಣ್ಣಿಸದ ಕವಿಯೇ ಇಲ್ಲ. ಹೀಗೆ ಚೈತ್ರವೇ ಯುಗದ ಆದಿಯ ಕಾಲ ಎಂಬುದನ್ನು ವರ್ಣಿಸಿದ್ದಾರೆ.ಸ್ವರ್ಗದ ಸಂತೋಷವನ್ನು ಸುಗ್ಗಿಯನ್ನು ಈ ಕಾಲವು ತರುತ್ತದೆ ಎಂಬುದು ಕವಿಯ ಆಶಯವಾಗಿದೆ.

***. ಸಂದರ್ಭದೊಡನೆ ವಿವರಿಸಿರಿ.**

1. ನೆಲದಮ್ಮ ನವವಧುವೆ ಆದಳೀಂತು!

ಸಂದರ್ಭ:ಈ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ ಸಿಸಿಫಸರಸುತ್ತು ಎಂಬ ಕೃತಿಯಿಂದ ಆಯ್ದು ಸವಿಚೈತ್ರ ಯೆಂಬ ಪದ್ಯದಿಂದ ಆರಿಸಲಾಗಿದೆ

ಸ್ವಾರಸ್ಯ: ಈ ವಾಕ್ಯವನ್ನು ಕವಿ ಯುಗಾದಿ ಬಂದಾಗ ಮರಗಿಡಗಳು ಹಸಿರಿನಿಂದ ಕಂಗೊಳಿಸುತ್ತವೆ. ಫಲಪುಷ್ಪಗಳಿಂದ ಸಮೃದ್ಧವಾಗಿರುತ್ತವೆ. ಬಣ್ಣಬಣ್ಣದ ಚಿತ್ರಗಳ ಹಾಗೆ ಕಳೆಯು ತುಂಬಿ ಭೂತಾಯಿ ನವವಧುವಿನಂತೆ ಶೋಭಿಸುತ್ತಾಳೆ ಎಂದು ಹೇಳೂವಾಗ ಮೇಲಿನ ಮಾತು ಬಂದಿದೆ.

2. ನೆಲಮುಗಿಲು ವಾಲಗವೆ ನಡೆದಂತಿದೆ.

ಸ್ವಾರಸ್ಯ: ಈ ಮಾತನ್ನು ಕವಿ ಹೇಳಿದ್ದಾರೆ.ಚೈತ್ರವೆಂದರೆ ವಸಂತಋತು ವಸಂತವೆಂದರೆ ಋತುಗಳ ರಾಜ ಈ ಕಾಲದಲ್ಲಿ ಗಿಡಮರಗಳು ಚಿಗುರುತ್ತವೆ. ಎಲ್ಲೆಡೆ ಪ್ರಕೃತಿಯಲ್ಲಿ ಹೊಸತನ ಕಾಣುತ್ತದೆ. ಜಗದ ಎಲ್ಲಾ ಪ್ರಾಣಿ ಪಕ್ಷಿಗಳು ಕೆಲಸಕ್ಕೆ ಹೋಗುತ್ತವೆ. ಜೀವನದಲ್ಲಿ ಉಲ್ಲಾಸ ಮೂಡಿ ನಲಮುಗಿಲು ಓಲಗ ಊದಿದಂತೆ ಕಾಣುತ್ತದೆ ಎಂದು ಕವಿ ಹೇಳಿದ್ದಾರೆ.

3. ಎಲ್ಲರೆದೆಗಳ ತುಂಬ ಸವಿಚೈತವು.

ಸ್ವಾರಸ್ಯ:ಈ ಮಾತು ಕವಿ ಹೇಳಿದ್ದಾರೆ. ಯುಗಾದಿ ಹಿಂದಿನ ಕೊಳೆಯನ್ನು ತಿಕ್ಕಿ ಮೈತೊಳೆದಂತೆ ಹಿಂದಿನ ದುಃಖ, ಸಂಕಟ ಮಾಯವಾಗಿ, ನಗುನಗುವ ಮುಖಗಳೇ ಎಲ್ಲೆಲ್ಲೂ ಕಂಡುಬರುತ್ತವೆ. ಬೆಲ್ಲ ಬೇವಿಗೆ ಸೇರಿ ಸವಿಯಾದಂತೆ ಜೀವನದ ಕಹಿ ಕಳೆದು ಸಿಹಿ ಹೆಚ್ಚಾಗಿ ದೇಹ ಮನಸ್ಸು ಆನಂದದಿಂದ ಕೂಡಿ ಎಲ್ಲರೆದೆಗಳು ಸವಿಚೈತ್ರ ಆಗುತ್ತವೆ ಎಂದು ಕವಿಗಳು ಆಶಿಸಿದ್ದಾರೆ.

## ಪದ್ಯ -4 ಸದ್ದು ಮಾಡದಿರು.

*** ಕವಿ/ಲೇಖಕರ ಪರಿಚಯ:**

| | |
|---|---|
| ಸಾಹಿತಿಯ ಹೆಸರು | : ಡಾ ॥ ಚಿಕ್ಕನಾಯಕನ ಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ |
| ಕಾಲ | : 1939 |
| ಸ್ಥಳ | : ಕೃಷ್ಣರಾಜನಗರ ತಾಲೂಕಿನ ಚಿಕ್ಕನಾಯಕನ ಹಳ್ಳಿ. |
| ಕ್ರತಿಗಳು | : ತಾರಸುಖ, ಅನಂತಪೃಥ್ವಿ, ಬೊಗಸೆ, ಕನ್ನಡ ಚತುರ್ಮುಖ. |
| ಪ್ರಶಸ್ತಿಗಳು | : ಹನಿಗವನ ಹನಿಕಾರ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |

***. ಕಠಿಣ ಪದಗಳ ಅರ್ಥ**

ಇಬ್ಬನಿ-ಮಂಜಿನಹನಿ. ಅಲ್ತೆ-ಅಲ್ಲವೆ. ಒಲು-ಅಂತೆ. ತಿಮಿರ-ಕತ್ತಲೆ, ತೊರೆ-ಬಿಡು. ಧ್ವನಿ-ದನಿ. ಬಿರುದು-ಪ್ರಶಸ್ತಿ. ಮದ್ದು-ಸಿಡಿಯುವ ವಸ್ತು. ಮಿಡುಕು-ನಡಗು. ರವಿಕರ-ಸೊರ್ಯಕಿರಣ. ರೇವು-ಹಡಗು ನಿಲ್ಲುವ ಸ್ಥಳ. ಸೊಂಕು-ತಾಗು.

*** ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ತಿಮಿರಕ್ಕೆ ವೈರಿ ಯಾವುದು?

ಉತ್ತರ:ತಿಮಿರಕ್ಕೆ ವೈರಿ ದೀಪ.

2. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾನೆ?

ಉತ್ತರ: ಇಬ್ಬನಿ ರವಿಕಿರಣಕ್ಕೆ ಕರಗಿ ಮಾಯವಾಗುತ್ತದೆ ಹಾಗೆ ಮಾನವನು ಶಾಂತಿಯಿಂದ ಬದುಕಬೇಕು ಎಂದು ಕವಿ ಇಬ್ಬನಿಎ ಹೋಲಿಸಿದ್ದಾರೆ.

3. ನಮ್ಮ ಕರ್ತವ್ಯವನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

ಉತ್ತರ:ನಮ್ಮ ಕರ್ತವ್ಯವನ್ನು ಶಾಂತಿಯಿಂದ ಮುಗಿಸಬೇಕೆಂದು ಕವಿ ಹೇಳೀದ್ದಾರೆ .

*** ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಸದ್ದು ಮಾಡದೆ ಬಾಳಬೇಕು ಎಂಬುವದಕ್ಕೆ ಕವಿ ನೀಡುವ ಹೋಲಿಕೆಗಳಾವುವು?

ಉತ್ತರ:ಪ್ರಕೃತಿಯು ಯಾವುದೇ ಕೆಲಸ ಸದ್ದು ಗದ್ದಲವಿಲ್ಲದೆ ತನ್ನ ಕಾರ್ಯವನ್ನು ಮಾಡುತ್ತದೆ. ಮನುಷ್ಯರಾದ ನಾವು ಶಾಂತಿಂಯಿದ ಬದುಕಿ ನಮ್ಮ ಕರ್ತವ್ಯವನ್ನು ಮುಗಿಸಬೇಕು. ಕರ್ಪೂರ ಉರಿದು ಬೆಳಕನ್ನು ನೀಡುವಚಿತೆ. ದೀಪದ ಎದುರಿಗೆ ಕತ್ತಲೆ ಮಾಯವಾಗುವ ಹಾಗೆ ನಾವು ನಮ್ಮ ಪಾಲಿನ ಕೆಲಸ ಮಾಡಬೇಕು.

2. ಕೊಗಾಟದ ಬದುಕು ನಿಷ್ಪ್ರಯೋಜಕ ಎಂಬುವದಕ್ಕೆ ಕವಿ ನೀಡುವ ನಿದರ್ಶನಗಳಾವುವು?

ಉತ್ತರ:ಕರ್ಪೂರ ಮತು ್ತ ದೀಪದ ಹಾಗೆ ಮೌನವಾಗಿ ಶಾಂತಿ ಸಹನೆ ಪ್ರೀತಿಗಳಿಂದ ನಮ್ಮ ಕರ್ತವ್ಯ ಮಾಡಿ ಮುಗಿಸಬೇಕು. ಕೂಗಾಡಿ ಹಾರಾಡಿದರೆ ಯಾವ ಪಲ ಸಿಗುವುದಿಲ್ಲ ಆದ್ದರಿಂದ ಸಿಡುಕನ್ನು ಬಿಟ್ಟು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಮಾಡಬೇಕು ಎಂದು ಕವಿ ಹೇಳುತ್ತಾರೆ.

3. ಕರ್ಪುರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪುರೈಸುತ್ತದೆ?

ಉತ್ತರ:ಕರ್ಪುರದ ಕೆಲಸ ಉರಿಯುವದು. ಅದು ಶಾಂತರೀತಿಯಿಂದ ಉರಿದು ಕರಗಿ ತನ್ನ ಪಾಡಿನ ಕೆಲಸವನ್ನು ಪುರೈಸುತ್ತದೆ. ಸದ್ದು ಗದ್ದಲ ಮಾಡುವದಿಲ್ಲ . ಎಂದು ಕವಿ ಹೇಳಿದ್ದಾರೆ.

4. ಮಾನವನ ಬದುಕು ಕರ್ಪುರದಂತೆ ಇರಬೇಕು ಏಕೆ?

ಉತ್ತರ:ಮಾನವನ ಬದುಕು ಶಾಂತರೀತಿಯಿಂದ ಸದ್ದು ಗದ್ದಲವಿಲ್ಲದೆ ಮುಗಿಸಬೇಕು. ಅದರಲ್ಲಿ ತನ್ನ ಕರ್ತವ್ಯವನ್ನು ಮುಗಿಯಬೇಕು. ಕೂಗಾಡಿದರೆ, ಹಾರಾಡಿದರೆ ಏನು ಸಿಗುವದಿಲ್ಲ. ಕಾರಣ ಮಾನವನ ಬದುಕು ಕರ್ಪುರದಂತೆ ಇರಬೇಕೆಂದು ಕವಿ ಹೇಳಿದ್ದಾರೆ.

*** ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ**

1. ಸದ್ದು ಮಾಡದಿರು ಕವಿತೆ ನೀಡುವ ಸಂದೇಶವೇನು?

ಉತ್ತರ:ಜೀವನದಲ್ಲಿ ಆಡಂಬರ ಕೀರ್ತಿ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ. ಇವುಗಳನ್ನು ಪಡೆಯುವುದು ಜೀವನದ ಸಾರ್ಥಕ್ಯಂದು ಬಹಳ ಜನ ತಿಳಿದಿದ್ದಾರೆ. ಆದರೆ ನಮ್ಮ ಬಾಳಿಗೆ ಆದಾರವಾಗಿರುವದು ಪ್ರಕೃತಿ. ಇದು ಯಾವುದೇ ಸದ್ದು ಗದ್ದಲವಿಲ್ಲದೆ ತನ್ನೆ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತದೆ ನಾವು ಕೂಡ ನಮ್ಮ ಜೀವನದ ಕಲಸವನ್ನು ಸದ್ದು ಮಾಡದೆ ಮಾಡಬೇಕು. ಕರ್ಪೂರ, ದೀಪದಂತೆ ಬೆಳಗಬೇಕು. ಹಸಿಸೌದೆ ಸಿಡಿಮದ್ದು ಗದ್ದಲ ಮಾಡುವಂತೆ ಮಾಡದೆ ಇಬ್ಬನಿಯಂತೆ ಮೌನಿಯಾಗಿ ಕೋಪವನ್ನು ಬಿಟ್ಟು ಬಾಳಬೇಕು. ಶಾಂತಿಯಿಂದ ಜೀವನವನ್ನು ನಡೆಸಬೇಕು ಎಂಬುದೇ ಈ ಪದ್ಯದ ಸಾರವಾಗಿದೆ.

MAJEED SHAKEEL

2. ಸದ್ದು ಮಾಡದೇ ಬಾಳಬೇಕು ಎಂಬುದನ್ನು ಕವಿ ಯಾವ ಯಾವ ನಿರ್ದೇಶನಗಳ ಮೂಲಕ ತಿಳಿಹೇಳೀದ್ದಾರೆ?

ಉತ್ತರ:ಮನುಷ್ಯನು ಬದುಕಿನಲ್ಲಿ ತನ್ನ ಕರ್ತವ್ಯವನ್ನು ಮೌನವಾಗಿ ನಡೆಸಬೇಕು. ಯಾವ ರೀತಿ ತಟ್ಟೆಯಲ್ಲಿನ ಕರ್ಪೂರವು ಮೌನವಾಗಿ ಉರಿದು ಕರಗುತ್ತದೆ ಹಾಗೆ ದೀಪದ ಎದುರಿಗೆ ಕತ್ತಲೆಯು ಸರಿಯುವ ಹಾಗೆ ಬಾಳಬೇಕು. ಕೂಗಾಡಿ ಹಾರಾಡಿ ಫಲವೇನು. ಹಸಿಸೌದೆಯು ಬುಸುಗುಡುತ್ತದೆ. ಸಿಡಿ ಮದ್ದು ಬರೆ ಸದ್ದು ಮಾಡುತ್ತದೆ. ಹಾಗೆ ಬಾಳದೆ ಸೂರ್ಯನ ಕಿರಣಕೆ ಇಬ್ಬನಿಯು ಮೌನವಾಗಿ ಕರಗುವಂತೆ ಕೋಪ ತಾಪಗಳನ್ನು ತೊರೆದು ಮೌನಿಯಾಗಿ ಕರ್ತವ್ಯವನ್ನು ಮುಗಿಸು ಎಂದು ಸಿ.ಪಿ.ಕೆ ಯವರು ಸದ್ದು ಮಾಡದಿರು ಪದ್ಯದಲ್ಲಿ ತಮ್ಮ ಧೋರಣೆಯನ್ನು ತಿಳಿಸಿದ್ದಾರೆ.

3. ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ? ಏಕೆ?

ಉತ್ತರ:ಬದುಕಿನಲ್ಲಿ ಶಾಂತಿ ಹಿಚ್ಚಾಗಿ ಸುಖ ನೀಡುತ್ತದೆ. ಹೇಗೆ ಎಂದರೆ ಶಾಂತಿಯಿಂದ ಮಾಡಿದ ಕೆಲಸ ಸರಿಯಾಗಿ ಆಗುತ್ತದೆ. ಮತ್ತು ಸುಖ ನೀಡುತ್ತದೆ. ಅದೆ ಸದ್ದಿನಿಂದ ಬಾಳಿದರೆ ನಮಗೆ ಶಾಂತಿ ಸಿಗುವದಿಲ್ಲಾ. ಕೂಗಾಡಿ ಹಾರಾಡಿ ಫಲವೇನು. ಹಸಿಸೌದೆಯು ಬುಸುಗುಡುತ್ತದೆ ಆದರೆ ಸ್ವಲ್ಪ ಮದ್ದು ಸಿಡಿದು ಅಬ್ಬರಿಸುತ್ತದೆ. ಹಾಗೆ ಬಾಳದೆ ಸೂರ್ಯನ ಕಿರಣಕೆ ಇಬ್ಬನಿಯು ಮೌನವಾಗಿ ಕರಗುವಂತೆ ಕೋಪ ತಾಪಗಳನ್ನು ತೊರೆದು ಮೌನಿಯಾಗಿ ಕರ್ತವ್ಯವನ್ನು ಮುಗಿಸು ಎಂದು ಸಿ.ಪಿ.ಕೆ ಯವರು ಬಹಳ ಮಾರ್ಮಿಕವಾಗಿ ಕರೆದಿದ್ದಾರೆ.

***. ಸಂದರ್ಭದೊಡನೆ ವಿವರಿಸಿರಿ**

1. ಶಾಂತಿಯಲಿ ಬದುಕಿನ ಕರ್ತವ್ಯವನು ಮುಗಿಸು.

ಸಂದರ್ಭ:ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ ಬೊಗಸೆ ಕವನ ಸಂಕಲನದಿಂದ ಆಯ್ದ ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ಕವಿಯು ಹೇಳಿದ್ದಾರೆ. ನಾವು ಪ್ರಕೃತಿಯನ್ನು ಆದರ್ಶವಾಗಿಟ್ಟು ಕೊಂಡು ಬಾಳಬೇಕು. ಹಾಗೆ ಮೌನವಾಗಿ ನಮ್ಮ ಕಾರ್ಯವನ್ನು ಮಾಡಿ ಮುಗಿಸಬೇಕು. ದೀಪದ ಎದುರಿಗೆ ಕತ್ತಲೆ ಹರಿಯುವಂತೆ, ತಟ್ಟೆಯಲ್ಲಿ ಕರ್ಪೂರವು ಉರಿಯುವಂತೆ ಶಾಂತಿಯಲ್ಲಿ ಬದುಕಬೇಕು ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**2. ಸಿಡುಕು ಮಿಡುಕನ್ನು ತೊರೆದು ಮೌನಿಯಾಗು**

ಸಂದರ್ಭ:ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ ಬೊಗಸೆ ಕವನ ಸಂಕಲನದಿಂದ ಆಯ್ದ ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ಮಾತನ್ನು ಕವಿಯು ಹೇಳಿದ್ದಾರೆ. ಮನುಷ್ಯನ ಜೀವನದಲ್ಲಿ ಹಸಿ ಸೌದೆಯಂತೆ ಬುಸುಗುಡದೆ ಬರೇ ಸದ್ದು ಮಾಡುವಂತೆ ಬದುಕದೆ ರವಿಕಿರಣಕ್ಕೆ ಮೌನವಾಗಿ ಇಬ್ಬನಿಯು ಕರಗುವಂತೆ ಮೌನವಾಗಿ ಬಾಳುವುದನ್ನು ಕಲಿಯಬೇಕೆಂದು ಕವಿಗಳು ಹೇಳಿದ್ದಾರೆ.

## ಪದ್ಯ -5 ಗುರಿ.

***ಕವಿ|ಸಾಹಿತಿಯ ಪರಿಚಯ :**

| | |
|---|---|
| ಸಾಹಿತಿಯ ಹೆಸರು | : ಎಂ. ಗೋಪಾಲಕೃಷ್ಣ ಅಡಿಗ |
| ಕಾಲ | : 1918 |
| ಸ್ಥಳ | : ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ. |
| ಕ್ರತಿಗಳು | : ಭಾವತರಂಗ, ಭೂಮಿ ಗೀತೆ, ಅನಾಥೆ, ಆಕಾಶ ದೀಪ. |
| ಪ್ರಶಸ್ತಿಗಳು | : |

***ಕಂಠಪಾಠ ಪದ್ಯಗಳು.**



MAJEED SHAKEEL

ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗು ವಂಬುಜದಂತೆ ಧೈಯದಾಳ್ವಿಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

ಒಂದು ಬಾಣಕ್ಕೆ ಗುರಿಯುಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು

*ಕಠಿಣ ಪದಗಳ ಅರ್ಥ :**

ಅಂಬುಜ-ತಾವರೆ. ಅಳಿಯಾಸೆ-ಕೀಳಾಸೆ. ಆಳ್ವಿಸ-ಆಳೀನ ಕೆಲಸ. ಬೇಸಲ-ಕೆಲಸ. ಒಳ್ದಾರಿ-ಒಳ್ಳೆಯದಾರಿ. ಗೈಮೆ-ದುಡಿಮೆ. ತಿರೆ-ಭೂಮಿ. ನೆನೆ ಕೊನೆ-ಅರಳಲಿರುವ ಮೊಗ್ಗೆ. ಪೆರತು-ಬೇರೆ. ಬಸ-ವಷ. ಬಾಂದಳ-ಆಕಾಷ. ಮಸಗು-ವಿಜೃಂಬಿಸು. ಮಿಸುಪು-ಹೊಳೆಯುವ. ಲಾಂಛನ-ಗುರ್ತು. ಸುರಪುರ-ದೇವಲೋಕ. ಹೊನಲು- ಹರಿಯುವ ಹೊಳೆ.

***. ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಮನಸ್ಸು ಅಳಿಯಾಸೆಗಳ ಸುಳಿಗೆಸಿಲುಕಬಾರದು ಏಕೆ?

ಉತ್ತರ:ನಮ್ಮ ಮನಸ್ಸು ನೆಲೆ ಇರದೆ ತೊಳಲುತ್ತ ಇರುತ್ತದೆ. ಅದಕ್ಕೆ ಅಳಿಯಾಸೆಗಳ ಸುಳಿವಿಗೆ ಸಿಲುಕಬಾರದು.

2. ನಮ್ಮ ದುಡಿಮೆಗೆ ಹೊವು ಫಲಿಸುವದು ಯಾವಾಗ?

ಉತ್ತರ:ಮನುಷ್ಯನ ಜೀವನಕ್ಕೆ ನೆನೆ ಕೊನೆ ಇದ್ದಾಗ ದಿನದ ದುಡಿಮೆಗೆಹುವು ಫಲಿಸುವದು..

3. ಅಡಿಗರ ಪ್ರಕಾರ ಪೌರುಷದಬಾಳ್ವೆ ಯಾವುದು?

ಉತ್ತರ:ಹಿಡಿದ ಕೆಲಸವನ್ನು ಕೊನೆಯವರೆಗೆ ಮುಟ್ಟಿಸಬೇಕು ಇದು ಅಡಿಗರ ಪ್ರಕಾರ ಪೌರುಷದ ಬಾಳ್ವೆ.

4. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಕವಿ ಹೇಳಿದ್ದಾರೆ?

ಉತ್ತರ:ಜೀವನದಲ್ಲಿ ಒಂದುಗುರಿ ಇರಬೇಕು ಅದಕ್ಕೆ ಹೋರಾಡಬೇಕು ಎಂದು ಕವಿ ಹೇಳಿದ್ದಾರೆ.

*** ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ?

ಉತ್ತರ:ಕೆಸರಿನಲ್ಲಿ ಇದ್ದು ಕಮಲದ ಹೂ ಆಕಾಶವನ್ನು ನೋಡಿ ಸೂರ್ಯನ ಕಿಣನಗಳನ್ನು ನೋಡಿ ಮರೆಯುತ್ತದೆ. ಹಾಗೆ ನಮ್ಮ ಬದುಕಿನಲ್ಲಿ ನಮಗೆ ಇದ್ದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡಬೇಕು. ಆಗ ನಮ್ಮ ಜೀವನ ಸಾರ್ಥಕಗೊಳ್ಳುತ್ತದೆ.

2. ಅಡಿಗರು ಯಾವುದು ಹೇಡಿತನ ಹಾಗು ಹೆಣ್ತನ ಎಂದು ಕವಿ ಹೇಳಿದ್ದಾರೆ?

ಉತ್ತರ:ಗಾಳಿ ಬಂದ ಕಡೆ ತಿರುಗುವದು ಹೇಡಿತನ. ದಾಳಿ ಬಂದಕೂಡಲೆ ಶರಣಾಗುವದು ಹೆಣ್ತನ. ಹೇಳಿದಹಾಗೆ ಅಂಜಿ ಕೇಳುವದು ಹೇಡಿತನ ಅಂಜಿಸಿದರೆ ಅಂಜುವದು ಹೆಣ್ತನ ಎಂದು ಕವಿ ಹೇಳಿದ್ದಾರೆ.

3. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು? ಏಕೆ?

ಉತ್ತರ:ಜೀವನದಲ್ಲಿ ಎದುರಾಗುವ ತೊಂದರೆಗಳನ್ನು ಅತಂಕಗಳನ್ನು ನಿವಾರಿಸಿಕೊಳ್ಳಬೇಕು. ಬದುಕಿನಲ್ಲಿ ಮುಂದೆ ಸಾಗಲು ಒಂದೇ ಹೆಗ್ಗುರಿ ಇರಿಸಿಕೊಳ್ಳ ಬೇಕು. ಅದಕ್ಕಾಗಿ ದುಡಿಯಬೇಕು. ಆಗ ಮಾತ್ರ ಗುರಿಯನ್ನು ತಲುಪಲು ಸಾಧ್ಯ.

4. ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಅಡಿಗರು ನೀಡಿರುವ ನಿದರ್ಶನಗಳಾವುವು?

MAJEED SHAKEEL

ಉತ್ತರ:ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆಯೇ ಹೊರತು ಹಲವು ಗುರಿಗಳು ಇರುವುದಿಲ್ಲ. ದೇಹದಲ್ಲಿ ಒಚಿದೇ ಆತ್ಮವಿರುತ್ತದೆ ಹೊರತು ಎರಡು ಆತ್ಮಗಳು ಇರುವುದಿಲ್ಲ. ಅಂತೆಯೇ ಒಂದು ಜೀವನಕ್ಕೆ ಹಲವು ಸಾಧ್ಯಗಳು ಏಕೆ? ಬದಲಾಗಿ ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡ ಬೇಕು. ಎಂದು ಕವಿ ನಿದರ್ಶನಗಳು ನೀಡಿದ್ದಾರೆ.

*** ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ**

1. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ?

ಉತ್ತರ:ಮಾನವನ ಜೀವನವು ಸಾರ್ಥಕಆಗಗಬೇಕಾದರೆ ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು. ಯಾವ ರೀತಿ ಕೆಸರಿನಲ್ಲಿ ಇದ್ದರೂ ಕಮಲದ ಹೂ ಸೂರ್ಯನ ಕಿರಣಕೆ ಅರಳುವಂತೆ ಕೆಟ್ಟಗುಣಗಳನ್ನು ಅಂಟಿಸಿ ಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವಾ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿಯಾದ ದಾರಿಯಲ್ಲಿ ಸಾಗಬೇಕು. ಒಂದು ಬಾಣಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೆ ಸಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಪರಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು. ಸ್ವಾರ್ಥವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು ಎಂದು ಕವಿ ತಿಳಿಸಿದ್ದಾರೆ.

2. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ?

ಉತ್ತರ:ಮಾನವನ ಜೀವನ ಸಾರ್ಥಕವಾಗಬೇಕಾದರೆ ಪರಹಿತಕ್ಕಾಗಿ ದುಡಿಯಬೇಕು. ಸ್ವಾರ್ಥವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು. ಮಾನವನ ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು. ಯಾವ ರೀತಿ ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಗಳಿಗೆ ಅರಳುವಂತೆ ಕೆಟ್ಟ ಗುಣಗಳನ್ನು ಅಂಟಿಸಿ ಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವಾ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗುಬೇಕು. ಒಂದು ಬಾಣಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೆ ಸಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಎಂದು ಕವಿ ತಿಳಿಸಿದ್ದಾರೆ.

3. ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ.

ಉತ್ತರ:ಬದುಕಿಗೊಂದು ಗುರಿ ಇಲ್ಲದಿದ್ದರೆ ಅದು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಿನಲ್ಲಿ ಚುಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತೆ ಆಗುತ್ತದೆ. ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು. ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕೆ ಅರಳುವಂತೆ ಕೆಟ್ಟಗುಣಗಳನ್ನು ಅಂಟಿಸಿ ಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವವದು ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗುಬೇಕು. ಒಂದು ಬಾಣಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೆ ಸಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಪರಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು. ಸಾ ್ವರ್ಥವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು ಎಂದು ಕವಿ ತಿಳಿಸಿದ್ದಾರೆ.

*** ಸಂದರ್ಭದೊಡನೆ ವಿವರಿಸಿರಿ.**

**1. ದಾಳಿ ಬಂದೊಡನೆ ಶರಣೆಂಬ ಹೆಣ್ತನವು.**

ಸಂದರ್ಭ:ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ ಸಮಗ್ರ ಕಾವ್ಯ ಕವನಸಂಕಲನ ದಿಂದ ಆಯ್ದ ಗುರಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ಕವಿಯು ಹೇಳಿದ್ದಾರೆ. ಮನುಷ್ಯನು ಜೀವನದಲ್ಲಿ ಒಂದೇ ಗುರಿ ಹೊಂದಿರಬೇಕು ಗಾಳಿ ಬಂದ ಕಡೆ ತಿರುಗುವಂತ ಹೇಡಿತನವು ಬೇಡವೆಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ. ದಾಳಿ

ಬಂದೊಡನೆ ಶರಣೆಂಬ ಹೆಣ್ತನವು ಬೇಡ ಎಂದು ತಿಳಿಸಿದ್ದಾರೆ. ಹೇಡಿತನ ವಿದ್ದರೆ ಏನನ್ನು ಸಾಧಿಸಲು ಸಾಧ್ಯ ಆಗುವುದಿಲ್ಲ ಎಂದು ತಿಳಿಸುವಾಗ ಈ ಮಾತು ಬಂದಿದೆ.

**2. ಒಂದು ಜೀವನಕೇಕೆ ಹಲವು ಸಾಧ್ಯಗಳು.**

ಸಂದರ್ಭ:ಈ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದಿರುವ ಸಮಗ್ರ ಕಾವ್ಯ ಕವನಸಂಕಲನದಿಂದ ಆಯ್ದ ಗುರಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ಮಾತನ್ನು ಕವಿಯು ಹೇಳಿದ್ದಾರೆ. ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ ಒಂದು ದೇಹದೊಳಗೆ ಒಂದೇ ಆತ್ಮವು ಇರುವ ಹಾಗೆ ಈ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಎಂದು ತಿಳಿಸುತ್ತಾ, ಈ ಮಾತನ್ನು ಹೇಳಿದ್ದಾರೆ. ಒಂದೇ ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕೆಂದು ಕವಿಗಳು ತಿಳಿಸಿದ್ದಾರೆ.

**3. ಪರಹಿತಕೆ ಬಳಲುತಿರಲದುವೆ ಜೀವನವು.**

ಸಂದರ್ಭ;ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ ಸಮಗ್ರ ಕಾವ್ಯ ಕವನ ಸಂಕಲನದಿಂದ ಆಯ್ದ ಗುರಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ಕವಿಯು ಹೇಳಿದ್ದಾರೆ. ಮನುಷ್ಯನು ಜೀವನದಲ್ಲಿ ಖಚಿತವಾದ ಗುರಿಯನ್ನು ಹೊಂದಿರಬೇಕು. ಅದನ್ನು ಸಾಧಿಸುವಾಗ ಅಡ್ಡಿ ಆತಂಕಗಳು ಎದುರಾದರೆ ಹೆದರದೆ ಅದನ್ನು ನಿವಾರಿಸಿಕೊಳ್ಳಬೇಕು. ಅಡ್ಡ ದಾರಿ ಹಿಡಿಯದೆ ಸರಿಯಾದ ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು .

ಮಾನವನಲ್ಲಿ ಭಗವಂತನ ರೂಪ ಕಂಡು ಸುರಪುರದ ವಾತಾವಣ ನಿರ್ಮಾಣ ಮಾಡಬೇಕು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

## ಪದ್ಯ -6 ಮೂಡಲ್ ಕುಣಗಲ್ ಕೆರೆ

***ಕಠಿಣ ಪದಗಳ ಅರ್ಥ:** ಊರುಗೋಲು-ಹುಟ್ಟು. ಕಪ್ಪಕ್ಕಿ-ಜಲಚರಗಳನ್ನು ತಿನ್ನುವ ಪಕ್ಷಿ. ತಂತ್ರಿ-ಕೆರೆ ಕಟ್ಟುವ ಕಲೆಯಲ್ಲಿ ನಿಷ್ಣತರಾದವರು. ಸಾರಂಗ-ಜಿಂಕೆ. ಐಭೋಗ- ವೈಭೋಗ. ಚಂದಿರಾಮ- ಚಂದಿರ. ಬಿಡದಿಗಪ್ಪಾಗ- ಬಿಡದೇ ತಿನ್ನುವಾಗ. ಮೊಡಲು-ಪೂರ್ವದಿಕ್ಕು.

***. ಈ ಪ್ರಶ್ನೆಗಳಿಗೆ 1-2 ವಾಕ್ಯಗಳಲ್ಲಿ ಉತ್ತರಿಸಿ.**

1. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?

ಉತ್ತರ:ಮೂಡಲ ದಿಕ್ಕಿನಲ್ಲಿದೆ.

2. ಕುಣಿಗಲ್ ಕೆರೆ ಹೇಗೆ ಬಾಗಿದೆ?

ಉತ್ತರ:ಬಾಳೆಹಣ್ಣಿನಂತೆ ಬಾಗಿದೆ.

3. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

ಉತ್ತರ:ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.

4. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?

ಉತ್ತರ:ಶಿವನು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ.

5. ಕೆರೆಯಲ್ಲಿ ಯಾವ ಮೀನುಗಳಿದ್ದವು?

ಉತ್ತರ:ಕೆರೆಯಲ್ಲಿ ಬಾಳೆಮೀನುಗಳಿದ್ದವು.

***. ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ.**

1. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು?

ಉತ್ತರ:ಕುಣಿಗಲ್ ಕೆರೆ ನೋಡುವವರಿಗೆ ಸುಂದರವಾಗಿ ಕಾಣುತ್ತಿತ್ತು. ಅದನ್ನು ನೋಡಲು ಚಂದ್ರನು ಮೂಡಿಬರುತ್ತಾನೆ, ಇಷ್ಟು ಸೌಂದರ್ಯದಿಂದ ಕೂಡಿರುತ್ತದೆ ನೋಡುವವರು ಅಬ್ಬಾ ಎಂದು ಆಶ್ಚರ್ಯಗೊಳ್ಳುತ್ತಾರೆ.

2. ಕಬ್ಬಕ್ಕಿ ಯಾವಾಗ ಬಾಯಿ ಬಿಡುತಾವೆ?

ಉತ್ತರ:ಕುಣಿಗಲ್ ಕೆರೆಯಲ್ಲಿ ಇರುವ ಮೀನುಗಳನ್ನು, ಜಲಚರಗಳನ್ನು ನೋಡಿ ಕಬ್ಬಕ್ಕಿಗಳು ಬಾಯಿ ಬಿಡುತ್ತವೆ.

3. ಕುಣಿಗಲ್ ಕೆರೆಯ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

ಉತ್ತರ: ಕುಣಿಗಲ್ ಕರೆಯ ಅಕ್ಕಪಕ್ಕದ ಜನರು ಕೃಷಿ ಕಲಸದ ಜೊತೆ ಮೀನುಗಾರಿಕೆ ಮಾಡುತ್ತಾರೆ. ಮೀನು ಹಿಡಿಯಲು ಕರೆಯಲ್ಲಿ ಬಲೆ ಹಾಕುತ್ತಾರೆ. ಮೀನು ಬಲೆಗೆ ಸಿಕ್ಕಿದಾಗ ಬೊಬ್ಬೆ ಹೊಡೆಯುತ್ತವೆ.

* **ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಕುಣಿಗಲ್ ಕೆರೆಯ ಜೀವಸಂಕುಲಕ್ಕೆ ಆಶ್ರಯವಾಗಿರುವುದನ್ನು ಗೀತೆಯಲ್ಲಿ ಯಾವ ರಿತಿ ವರ್ಣಿಸಲಾಗಿದೆ.

ಉತ್ತರ: ಕೆರೆಯಲ್ಲಿ ದೋಣಿ ನಡೆಸಲು ಒಂದು ಕೋಲು ಬೇಕು. ಅದನ್ನು ಹಾರಕ್ಕೊಂದು ಉರುಗೋಲು ಎಂದಿದ್ದಾರೆ. ದೋಣಿಯನ್ನು ನೂಕಲು ಬಳಸುವ ಕೋಲು ಅದನ್ನು ನೂಕಕೋಲು ಎಂದ್ದಾರೆ. ಬಾಳೆಹಣ್ಣಿನ ಗಾತ್ರದ ಮೀನುಗಳು ಬೊಬ್ಬೆ ಹಾಕುತ್ತಿವೆ ಅಂದರೆ ಕುಣಿಗಲ್ ಕರೆಯ ಅಕ್ಕಪಕ್ಕದ ಜನರು ಕೃಷಿ ಕಲಸದ ಜೊತೆ ಮೀನುಗಾರಿಕೆ ಮಾಡುತ್ತಾರೆ. ಮೀನು ಹಿಡಿಯಲು ಕರೆಯಲ್ಲಿ ಬಲೆ ಹಾಕುತ್ತಾರೆ. ಮೀನು ಬಲೆಗೆ ಸಿಕ್ಕಿದಾಗ ಬೊಬ್ಬೆ ಹೊಡೆಯುತ್ತವೆ. ಇದಲ್ಲದೆ ಪ್ರಾಣಿ ಪಕ್ಷಿಗಳು ಸಂತೋಷದಿಂದ ನಗುತ್ತಿವೆ ಕಾರಣ ಕೆರೆ ತುಂಬಿ ತುಳುಕುತ್ತಿವೆ. ಗುಬ್ಬಿಗಳು, ಸಾರಂಗಗಳು ಸಂತೋಷದಿಂದ ನಗುತ್ತಿವೆ ಎಂದು ಹೋಲಿಸಿದ್ದಾರೆ. ಹಾಗೇಯೆ ಕುಣಿಗಲ್ ಕೆರೆಯ ಅಂದವನ್ನು , ನೋಡಲು ಶಿವನಿ ಬಂದು ಯೋಗಿಯಂತಾಗಿದ್ದಾನೆ. ಅಂದರೆ ಅದರ ಸೊಬಗು ಎಷ್ಟಿರಬಹುದು ಅಲ್ಲದೇ ಕಪ್ಪಗಿರುವ ಹಕ್ಕಿಗಳು ಬಾಯಿ ಯನ್ನು ಬಿಟ್ಟು ನೋಡುತ್ತವೆ, ಕೊನೆಯದಾಗಿ ಕುಣಿಗಲ್ ಕೆರೆ ಜೀವನ ಸಂಕುಲಕ್ಕೆ ಈ ಮೇಲಿನ ಸಾಲಿನಿಂದ ಆಶ್ರಯವಾಗುತ್ತದೆ ಎಂದು ವಿವರಿಸಲಾಗಿದೆ.

2. ಮೂಡಲ್ ಕುಣಿಗಲ್ ಕೆರೆ ಗೀತೆಯ ಭಾವಾರ್ಥವನ್ನು ಬರೆಯಿರಿ?

ಉತ್ತರ: ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗ ಅದೃಷ್ಟ ಮಾಡಿರುವ ನಾ ಕುಣಿಗಲ್ ಕೆರೆಗೆ ಚಂದಿರನು ಮೂಡಿಬರುತ್ತಾನೆ, ಎಷ್ಟು ಸೌಂದರ್ಯದಿಂದ ಕೂಡಿರುತ್ತದೆ ಎಂದರೆ ಅಬ್ಬಾ ಎಂದು ಆಶ್ಚರ್ಯವಾಗಿ ವರ್ಣನೆ ಮಾಡಲು ಅಸಾಧ್ಯ ಎಂದು ವರ್ಣಿಸಿದ್ದಾರೆ. ಕುಣಿಗಲ್ ಕೆರೆ ಸೊಬಗು ಸೌಂದರ್ಯವನ್ನು ಬಾಳೆಹಣ್ಣಿಗೆ ಹೋಲಿಸಲಾಗಿದೆ. ಹೇಗೆ ಬಾಳೆಹಣ್ಣು ಬಾಗಿದ ಹಾಗೆ ಕೆರೆಯು ಸಹ ಬಾಗಿರುವ ರೀತಿ ಕಾಣಿಸುತ್ತದೆ. ಮತ್ತು ಸಂಬಂಧದಲ್ಲಿ ಭಾವ ಎಂದರೆ ಹೆಣ್ಣುಮಗಳಿಗೆ ಎಲ್ಲಿಲ್ಲದ ಅಕ್ಕರೆ. ಆಗಿನ ಕಾಲದಲ್ಲಿ ಮದುವೆ ಆಗುವ ಹುಡುಗ ಅಥವಾ ಮಾವನ ಮಗನನ್ನು ತುಂಬಾ ಅಕ್ಕರೆಯಿಂದ ಕಾಣುವಂತ ಸಂಬಂಧ. ಅದಲ್ಲದೇ ಅವನು ತಂದುಕೊಟ್ಟಂತಹ ಸೀರೆಯ ಬಣ್ಣವು ಎಷ್ಟು ಚನ್ನಾಗಿದೆಯೋ ಅಷ್ಟೆ ಕೆರೆಯು ತುಂಬಾ ಸುಂದರವಾಗಿದೆ. ಕೆರೆಯಲ್ಲಿ, ಹಾರಕ್ಕೊಂದು ಹಾರುಕೋಲು, ಹಾರುವುದಕ್ಕೆ , ಹಾಯಿಸುವುದಕ್ಕ, ದೋಣಿ ನಡೆಸಲು ಬಳಸುವ ಕೋಲು ಅದನ್ನು ನೂಕಲು ನೂಕುವುದಕ್ಕೆ ಇನ್ನೊಂದು ಕೋಲು ಮತ್ತು ಬಾಳೆಹಣ್ಣಿನ ಗಾತ್ರದ ಮೀನುಗಳು ಬೊಬ್ಬೆ ಹಾಕುತ್ತಿವೆ ಅಂದರೆ ಬಲೆಗೆ ಸಿಕ್ಕಿ ಬೊಬ್ಬೆ ಹೊಡೆಯುತ್ತಿವೆ. ಸಾರಂಗಗಳು ಗುಬ್ಬಿಗಳು ಸಂತೋಷಕ್ಕೆ ಕೂಗಿಕೊಳ್ಳುತ್ತಿವೆ. ಇದು ಕುಣಿಗಲ್ ಕೆರೆ ಗೀತೆಯ ಭಾವಾರ್ಥವಾಗಿದೆ.

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ಭಾವಾ ತಂದಾನೋ ಬಣ್ಣದ ಸೀರೆ.

ಸಂದರ್ಭ;ಈ ವಾಕ್ಯವನ್ನು ಜನಪದ ಗೀತೆಯಿಂದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ;ಈ ವಾಕ್ಯವನ್ನು ಕುಣಿಗಲ್ ಕೆರೆಯ ಸೊಬಗು ಸೌಂದರ್ಯವನ್ನು ಬಾಳೆಯ ಹಣ್ಣಿಗೆ ಹೋಲಿಸಲಾಗಿದೆ. ಹೇಗೆ ಬಾಳೆಯ ಹಣ್ಣು ಬಾಗಿದೆ ಹಾಗೆ ಕೆರೆಯು ಸಹ ಬಾಗಿರುವ ರೀತಿ ಕಾಣಿಸುತ್ತದೆ. ಭಾವ ಎಂದರೆ ಹೆಣ್ಣುಮಗಳಿಗೆ ಎಲ್ಲಿಲ್ಲದ ಅಕ್ಕರೆ. ಆಗಿನ ಕಾಲದಲ್ಲಿ ಮದುವೆ ಆಗುವ ಹುಡುಗ ಅಥವಾ ಮಾವನ ಮಗನನ್ನು ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು.

MAJEED SHAKEEL

2. ಕಪ್ಪಕ್ಕಿ ಬಾಯ ಬಿಡುತಾವೆ.

ಸಂದರ್ಭ;ಈ ವಾಕ್ಯವನ್ನು ಜನಪದ ಗೀತೆಯಿಂದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಕೆರೆಯ ಸೌಂದರ್ಯದಿಂದ ಹಕ್ಕಿಗಳು ಹೇಗೆ ಕಾಣುತ್ತವೆ. ಎಂದು ಹೇಳುವಾಗ ಹೇಳಿದ್ದಾರೆ. ಕೆರೆಯ ಅಂದವನ್ನೆ ನೋಡಲು ಶಿವನು ಬಂದು ಯೋಗಿಯಂತಾಗಿದ್ದಾನೆ. ಕಪ್ಪಗಿರುವ ಹಕ್ಕಿಗಳು ಬಾಯನ್ನು ಬಿಟ್ಟು ನಿಲ್ಲುತ್ತವೆ. ಮೀನುಗಳನ್ನು ತಿನ್ನಲು ಎಂದು ಹೇಳುವಾಗ ಮೇಲಿನ ಮಾತು ಹೇಳಿದ್ದಾರೆ.

3. ಬೊಬ್ಬೆ ಹೊಡೆದಾಬೆ ಬಾಳ ಮೀನು.

ಸಂದರ್ಭ:ಈ ವಾಕ್ಯವನ್ನು ಜನಪದ ಗೀತೆಯಿಂದ ಮೂಡಲ್ ಕುಣಿಗಲ್ ಕೆರೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ವಾಕ್ಯವನ್ನು ಕವಿ ಹೇಳಿದ್ದಾರೆ. ಕೆರೆಯಲ್ಲಿ ಹಾರಕ್ಕೊಂದು ಹಾರುಕೋಲು, ಹಾರುವುದಕ್ಕೆ ಹಾಯಿಸುವುದಕ್ಕೆ ಬಳಸುವ ಕೋಲು ಅದನ್ನು ನೂಕಲು ನೂಕುವುದಕ್ಕೆ ಇನ್ನೊಂದು ಕೋಲು ಎಂದಿದ್ದಾರೆ. ಬಾಳೆ ಹಣ್ಣಿನ ಗಾತ್ರದ ಮೀನುಗಳು ಬಲೆಗೆ ಸಿಕ್ಕಿ ಬೊಬ್ಬೆ ಹಾಕುತ್ತಿವೆ ಎಂದು ಹೇಳಿದ್ದಾರೆ.

## ಪದ್ಯ -7 ವಚನಗಳು.

***. ವಚನಕಾರರ ಪರಿಚಯ :**

ವಚನಕಾರರ ಹೆಸರು : **ಬಸವಣ್ಣ**
ಕಾಲ : ಹನ್ನೆರಡನೆಯ ಶತಮಾನ.
ಸ್ಥಳ : ವಿಜಯಪುರ ಜಿಲ್ಲೆಯ ಬಾಗೇವಾಡಿ.
ವಚನ ಅಂಕಿತನಾಮ : ಕೂಡಲಸಂಗಮದೇವ.

ವಚನಕಾರರ ಹೆಸರು : ಸೊನ್ನಲಿಗೆಯ ಸಿದ್ಧರಾಮ
ಕಾಲ : ಹನ್ನೆರಡನೆಯ ಶತಮಾನ.
ಸ್ಥಳ : ಸೊನ್ನಲಿಗೆ
ವಚನ ಅಂಕಿತನಾಮ : ಕಪಿಲಸಿಸಿದ್ಧಮಲ್ಲಿಕಾರ್ಜುನ.

ವಚನಕಾರರ ಹೆಸರು : ಅಕ್ಕಮಹಾದೇವಿ
ಕಾಲ : ಹನ್ನೆರಡನೆಯ ಶತಮಾನ.
ಸ್ಥಳ : ಶಿವಮೊಗ್ಗ ಜಿಲ್ಲೆಯ ಉಡುತಡಿ.
ವಚನ ಅಂಕಿತನಾಮ : ಚನ್ನಮಲ್ಲಿಕಾರ್ಜುನ.

***ಕಂಠಪಾಠ ಪದ್ಯಗಳು.**

ನೀರು ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.

ಮರವಿದ್ದಯ ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ ಅಕ್ಕಮಹಾದೇವಿ.

**ಪದಗಳ ಅರ್ಥ:-** ಅಗಲು-ಊಟದ ತಟ್ಟೆ, ಅನ್ನಕ-ತನಕ. ಬಾನ- ಅನ್ನ. ಹಯನ-ಅನ್ನ, ಹಾಲಿಗೆ ಸಂಬಂಧಿಸಿದ್ದು.

***. ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಸವಣ್ಣನವರು ಜನರ ಯಾವ ನಂಬಿಕೆಯನ್ನು ಖಂಡಿಸಿದ್ದಾರೆ?

ಉತ್ತರ:ಬಸವಣ್ಣನವರು ಜನರ ನೀರುಕಂಡಲ್ಲಿ ಮುಳುಗುವದು ಮರವನ್ನು ಕಂಡಲ್ಲಿ ಸುತ್ತುವ ನಂಬಿಕೆಯನ್ನು ಖಂಡಿಸಿದ್ದಾರೆ.

2. ವೇಷ ಮತ್ತು ಆಚರಣೆಯ ಸಂಬಂಧ ಹೇಗಿರಬೇಕು?

ಉತ್ತರ:ವೇಷ ಧರಿಸಿದ ಮೇಲೆ ವೇಷಕ್ಕೆ ತಕ್ಕ ಆಚರಣೆ ಇರಬೇಕು.

3. ವೇದಾಂತವನ್ನು ಓದಿವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾನೆ?

ಉತ್ತರ:ವೇದಾಂತವನು ಓದಿದವನು ಬ್ರಹ್ಮನ್ನು ಒಲಿಸಿಕೊಳ್ಳು ವನು ಆಗಬೇಕೆಂದು ಸಿಧ್ಧರಾಮ ಹೇಳೂತ್ತಾನೆ.

4. ಕೆರೆಗಳು ನಿಷ್ಪ್ರಯೋಜಕ ಆಗುವದು ಯಾವಾಗ?

ಉತ್ತರ:ಪುಣ್ಯ ತೀರ್ಥಗಳು ಬರದಿದ್ದಾಗ ಕೆರೆ ತೋಡಿದ್ದು ನಿಷ್ಪ್ರಯೋಜಕ ಆಗುವದು.

5. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

ಉತ್ತರ:ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.

6. ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆ ಎಂದು ಹೇಳುತ್ತಾಳೆ?

ಉತ್ತರ:ಚನ್ನಮಲ್ಲಿಕಾರ್ಜುನ ಜ್ಞಾನ ಇದ್ದಾಗ ತನ್ನ ಬದುಕು ಫಲದಾಯಕ ಆಗುತ್ತದೆ ಎಂದು ಅಕ್ಕಮಹಾದೇವಿ ಹೇಳುತ್ತಾರೆ.

***. ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಯನ್ನು ಏಕೆ ಖಂಡಿಸಿದ್ದಾರೆ?

ಉತ್ತರ: ಜನರು ನೀರು ಕಂಡಲ್ಲಿ ಮುಳುಗುತ್ತಾರೆ. ಮರವನ್ನು ಕಂಡರೆ ಸುತ್ತುತ್ತಾರೆ. ಬತ್ತುವ ಜಲ ಒಣಗುವ ಮರವನ್ನು ಮೆಚ್ಚುವ ಜನ ಕೂಡಲ ಸಂಗಮನನ್ನು ತಿಳಿಯಲು ಸಾಧ್ಯವಿಲ್ಲ ಎಂದು ಕುರುಡು ಸಂಪ್ರದಾಯವನ್ನು ಸವಣ್ಣನವರು ಲೇವಡಿ ಮಾಡಿದ್ದಾರೆ.

2. ರೂಪಿದ್ದು ಫಲವೇನು ಗುಣವಿಲ್ಲದನಕ ಈ ಮಾತಿನ ಅರ್ಥವೈಶಿಷ್ಟ್ಯವೇನು?

ಉತ್ತರ:ನೆರಳನ್ನು ಕೊಡದಿರುವ ಮರದಿಂದ ಯಾವ ಫಲವೂ ಇಲ್ಲ. ದವಿಲ್ಲದವನಿಗೆ ಧನವಿದ್ದರೂ ಪ್ರಯೋಜನವಿಲ್ಲ. ಹಾಲು ಕೊಡದ ಹಸುವಿದ್ದರೂ ಫಲವಿಲ್ಲ. ಹಾಗೆಯೇ ಗುಣವಿಲ್ಲದ ರೂಪವೂ ಕೂಡ ವ್ಯರ್ಥ. ಮನುಷ್ಯನಿಗೆ ಗುಣ ಮುಖ್ಯವೇ ಹೊರತು ಸುಂದರವಾದ ರೂಪವಲ್ಲ ಎಂಬುದನ್ನು ಈ ವಾಕ್ಯ ತಿಳಿಸುತ್ತದೆ.

***. ಈ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಸವಣ್ಣವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ?

ಉತ್ತರ:ಬಸವಣ್ಣನವರು ಜನರ ಮೌಢ್ಯತೆಯ ಬಗ್ಗೆ ಬಹಳ ಮಾರ್ಮಿಕವಾಗಿ ಹೇಳಿದ್ದಾರೆ. ಜನರು ನೀರು ಕಂಡರೆ ಮುಳುಗುತ್ತಾರೆ. ಮರವನ್ನು ಕಂಡರೆ ಸುತ್ತುತ್ತಾರೆ. ಬತ್ತುವ ಜಲ ಒಣಗುವ ಮರವನ್ನು ಮೆಚ್ಚುವ ಜನ ಕೂಡಲ ಸಂಗಮನನ್ನು ತಿಳಿಯಲು ಸಾಧ್ಯವಿಲ್ಲ. ಮೊಡನಂಬಿಕೆಯನ್ನು ನಂಬಿ ಜನರು ಮಾಡುವ ಕಾರ್ಯ


MAJEED SHAKEEL

ನಮ್ಮನ್ನು ಶಾಂತಿ ಕೊಡುವದಿಲ್ಲ. ಇದರಿಂದ ಏನು ಲಾಭ ಆಗುವದಿಲ್ಲ. ಭಗವಂತ ನಮ್ಮಿಂದ ಸಂತೋಷ ಪಡುವದಿಲ್ಲ ಎಂದು ಬಸವಣ್ಣ ಹೇಳಿದ್ದಾರೆ.

2. ಬಾಹ್ಯ ಹಾಗು ಆಂತರಿಕ ನಡುವಳಿಕೆಯಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನದಲ್ಲಿ ಹೇಗೆ ಪ್ರತಿಪಾದಿಸಿದ್ದಾರೆ?

ಉತ್ತರ:ಸಿದ್ಧರಾಮ ಮನುಷ್ಯ ಬಾಹ್ಯ ಹಾಗು ಆಂತರಿಕ ನಡುವಳಿಕೆಯಲ್ಲಿ ಒಂದೇ ರೀತಿ ಇರಬೇಕೆಂದು ಹೇಳಿದ್ದಾರೆ. ಕಾವಿ ತೊಟ್ಟು ಅವರಲ್ಲಿ ಒಳ್ಳೆಯ ಜ್ಞಾನ ಇಲ್ಲದಿದ್ದರೆ ಅದು ತೋಡಿದ್ದು ವ್ಯಾರ್ಥವಾಗುತ್ತದೆ. ವೇದವನ್ನು ಓದಿಯೂ ಫಲವಿಲ್ಲ. ಓದಿದ ಹಾಗೆ ನಡುವಳಿಕೆ ಇಲ್ಲದಿದ್ದರೆ. ದೇವರು ನಮಗೆ ಒಲಿಯದಿದ್ದರೆ ಕೆರೆಗಳನ್ನು ತೋಡಿದರೆ ನೀರು ಬರಬೇಕು, ಇಲ್ಲದಿದ್ದರೆ ಅವು ವ್ಯರ್ಥ ವಾಗುತ್ತವೆ. ಎಂದು ಸಿದ್ಧರಾಮ ತನ್ನ ವಚನಗಳಲ್ಲಿ ಬಹಳ ಮಾರ್ಮಿಕವಾಗಿ ಹೇಳುತ್ತಾರೆ.

3. ಅಕ್ಕಮಹಾದೇವಿ ತನ್ನ ಬದುಕು ಫಲದಾಯಕ ಆಗುವದನ್ನು ಯಾವ ನಿದರ್ಶನಗಳೊಂದಿಗೆ ಸಮರ್ಥಿಸುತ್ತಾಳೆ?

ಉತ್ತರ:ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ಅಂದರೆ ಭಕ್ತಿ ಇಲ್ಲದೆ ಬದುಕಲು ಬಯಸುವುದಿಲ್ಲ. ಯಾವ ರೀತಿ ಮರ ಇದ್ದು ನೆರಳು ನೀಡದಿದ್ದರೆ ಮರಇದ್ದು ಫಲವಿಲ್ಲ ಧನವಿದ್ದರೂ ದಯೆ ಇರದಿದ್ದರೆ ಫಲವಿಲ್ಲ, ಹಾಲು ನೀಡದ ಹಸು ಇದ್ದು ಫಲವಿಲ್ಲ. ರೋಪ ಇದ್ದು ಗುಣ ಇರದಿದ್ದರೆ ರೂಪವ್ಯಾರ್ಥ. ಹಾಗೆಯೆ ಅನ್ನವಿಲ್ಲದ ತಟ್ಟೆ ಇದ್ದರೆ ಅದರಿಂದ ಪ್ರಯೋಜನವಿಲ್ಲ ಅದು ವ್ಯರ್ಥ ಎಂದಿದ್ದಾರೆ. ಮನುಷ್ಯನ ಜೀವನದಲ್ಲಿ ಭಗವಂತನ ಜ್ಞಾನ ಇದ್ದಾಗ ಮಾತ್ರ ಜೀವನ ಫಲದಾಯಕ ಆಗುತ್ತದೆ ಎಂದು ಅಕ್ಕಮಹಾದೇವಿ ಹೇಳಿದ್ದಾರೆ.

***. ಸಂದರ್ಭದೊಡನೆ ವಿವರಿಸಿರಿ.**

1. ನೀರ ಕಂಡಲ್ಲಿ ಮುಳುಗುವರಯ್ಯಾ

ಸಂದರ್ಭ;ಈ ವಾಕ್ಯವನ್ನು ಬಸವಣ್ಣನವರು ಬರೆದಿರುವ ವಚನಗಳು ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ;ಈ ಮಾತನ್ನು ಬಸವಣ್ಣನವರು ಹೇಳಿದ್ದಾರೆ. ಜನರು ನಿಜವಾಗಿ ಹೊಂದಿರಬೇಕದ ಭಕ್ತಿಯನ್ನು ವಿವರಿಸುತ್ತಾ ಜನರು ನೀರನ್ನು ಕಂಡಲ್ಲಿ ಮುಳುಗುವರು ಮರ ಕಂಡಲ್ಲಿ ಸುತ್ತುವರು ಬತ್ತುವ ಜಲವ ಒಣಗುವ ಮರವ ಮೆಚ್ಚಿದವರು ದೇವರ ಜ್ಞಾನವನ್ನು ತಿಳಿಯುತ್ತಾರೆಯೆ? ಎಂದು ಪ್ರಶ್ನಿಸುತ್ತ ಮೂಢನಂಬಿಕೆಯನ್ನು ಖಂಡಿಸುತ್ತ ಅರ್ಥವಿಲ್ಲದ ಆಚರಣೆ ಬಿಡಬೇಕೆಂದು ತಿಳಿಸುವಾಗ ಈ ಮಾತು ಬಂದಿದೆ.

2. ವೇದಾಂತವನೋದಿ ಫಲವೇನಯ್ಯ.

ಸಂದರ್ಭ: ಈ ವಾಕ್ಯವನ್ನು ಸೊನ್ನಲಿಗೆ ಸಿದ್ಧರಾಮ ಬರೆದಿರುವ "ವಚನಗಳು "ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ: ಈ ಮಾತನ್ನು ಸಿದ್ಧರಾಮ ಹೇಳಿದ್ದಾರೆ. ಮನುಷ್ಯ ವೇಶಕ್ಕೆ ತಕ್ಕಂತೆ ನಡೆಯದಿದ್ದರೆ ವೇಶ ಧಿರಿಸಿ ಫಲವಿಲ್ಲ. ನುಡಿದ ಹಾಗೆ ನಡೆಯಬೇಕು. ಮನುಷ್ಯ ವೇದಗಳನ್ನು ಓದಿ ಅದನ್ನು ಪಾಲಿಸಬೇಕು. ಭಗವಂತನ್ನು ಒಲಿಸಿಕೊಳ್ಳಬೇಕು. ಆಗ ಲಾಭಆಗುತ್ತದೆ ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

3. ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ.

ಸಂದರ್ಭ:-ಈ ವಾಕ್ಯವನ್ನು ವಚನಗಳು ಎಂಬ ಪದ್ಯದಿಂದ ಆರಿಸಲಾಗಿದೆ. ಈ ಮಾತನ್ನು ಅಕ್ಕಮಹಾದೇವಿ ಹೇಳಿದ್ದಾರೆ.

ಸ್ವಾರಸ್ಯ:-ನಿಜವಾದ ಜ್ಞಾನವಿರಬೇಕು ಎಂದು ವಿವರಿಸುತ್ತಾ ನೆರಳು ನೀಡದ ಮರ, ಹಾಲು ಕೊಡದ ಹಸು, ಗುಣವಿಲ್ಲದ ರೂಪದಿಂದ ಯಾವ ಪಲವಿಲ್ಲವೋ ಹಾಗೆ ಅನ್ನವಿಲ್ಲದ ತಟ್ಟೆಯಿಂದ ಏನು ಪ್ರಯೋಜನವಿಲ್ಲ ಎಂದು ತಿಳಿಸುವಾಗ ಅಕ್ಕಮಹಾದೇವಿ ಈ ಮಾತನ್ನು ಹೇಳಿದ್ದಾರೆ.

## ಪದ್ಯ -8 ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ.

***ಕವಿ|ಸಾಹಿತಿಯ ಪರಿಚಯ :**

ಸಾಹಿತಿಯ ಹೆಸರು : ಕುಮಾರವ್ಯಾಸ (ನಾರಣಪ್ಪ)



MAJEED SHAKEEL

ಕಾಲ : 1430.

ಸ್ಥಳ : ಗದುಗಿನ ಕೋಳಿವಾಡ.

ಕೃತಿಗಳು : ಮಹಾಭಾರತ ವನ್ನು ನಾರಣಪ್ಪನು ಕನ್ನಡದಲ್ಲಿ ಬರೆದವನು.

***ಕಂಠಪಾಠ ಪದ್ಯಗಳು.**

ಕಡೆಗೆ ಹಾಯುವ ಕಂಗಳೀ ಬಲ
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**ಪದಗಳ ಅರ್ಥ :** ಕಡೆ_ಕೊನೆ. ಹಾಯವು-ದಾಟವು. ಬಲ-ಸೈನ್ಯ.ಕಡಲು-ಸಮುದ್ರ. ಮನವೀಸಾಡಲಾರದು-ಮನಈಸಾಡಲಾರದು. ಒಡಲುವಿಡಿದಿರಲೇನ-ದೇಹವನ್ನುಹೊಂದಿರುವಾಗ.ಪೊಡವಿ-ಪೃಥ್ವಿ.ಇದೊದೊ- ಹೆತ್ತಿದೆಯೋ. ಮೋಹರ-ಸೈನ್ಯ ಮೃಡ-ಶಿವ. ಕಾದಿ ಗೆಲಿದೆವು- ಯುದ್ಧಮಾಡಿ ಗೆದ್ದಂತೆ. ಸಂವರಿಸು-ಒಟ್ಟುಗೂಡಿಸು. ಬಿಟ್ಟಮಂಡೆ-ಕೂದಲು ಕೆದರಿದ ತೆಲೆ. ಒಡಲು-ದೇಹ. ಗಜರು-ಗದರಿಸು. ವನಜ-ಕಮಲ. ವನಜಮುಖಿ- ಕಮಲದ ಮುಖ ಉಳ್ಳವಳು. ಸೊಹರು- ಬಾಯಿಗೆ ಬಂದಂತೆ ಹೇಳು. ಅನುವರ-ಯುದ್ಧ. ಎಫು-ಶತ್ರು. ವಾಹಿನಿ-ಸೈನ್ಯ. ನಾಡನರಿ-ಅಂಜಬುರುಕ. ಧುರ-ಯುದ್ಧ. ಪಾತಕ-ಪಾಪ. ಧರಣಿ-ಭೂಮಿ. ಭೂಸುರ-ಬ್ರಹ್ಮಣರು.ಸುರರ ಸತಿ-ಅಪ್ಸರೆ.

1. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

ಉತ್ತರ: ಕೌರವನ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಂಡಿತು.

2. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?

ಉತ್ತರ: ವಿಸ್ತಾರವಾದ ಸಮುದ್ರದಂತೆ ಕಾಣುವ ಸೈನ್ಯವನ್ನು ಕಂಡು ಹೆದರಿ ಓಡಿದನು,

3. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?

ಉತ್ತರ: ಪಾಪ ಪ್ರಾಪ್ತಿಯಾಗುತ್ತದೆ

4. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

ಉತ್ತರ: ಉತ್ತರನನ್ನು ನಾಡನರಿ ಎಂದು ಕರೆದಿದ್ದಾನೆ.

5. ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?

ಉತ್ತರ: ಇಂದ್ರ ಪದವಿ ಪಡೆಯುವುದಕ್ಕಿಂತ ಜೀವ ಉಳಿಸಿಕೊಂಡು ಬದುಕುವುದೇ ಒಳ್ಳೆಯದು.

6. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?

ಉತ್ತರ: ಅರಮನೆಯ ನಾರಿಯರು ತುಂಬುತ್ತಾರೆ.

MAJEED SHAKEEL

*. **ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶತ್ರುಬಲಕ್ಕೆ ನಮೋ ಎಂದು ಉತ್ತರನು ಏಕೆ ಹೇಳಿದನು?

ಉತ್ತರ: ಕೌರವರ ಸೇನೆಯನ್ನು ಕಂಡ ಉತ್ತರನಿಗೆ ಯಾವಾಗಲು ಕಾಣದ ಅದ್ಭುತವನ್ನು ಕಂಡಂತಾಯಿತು. ಇಡೀ ಭೂಮಿ ಸೈನ್ಯದಿಂದ ತುಂಬಿತ್ತು. ಇವರೊಡನೆ ಕಾದಲು ಸಾಕ್ಷಾತ್ ಶಿವನಿಂದ ಮಾತ್ರ ಸಾಧ್ಯ ಇವರೊಡನೆ ಯುದ್ಧ ಮಾಡಿ ಗೆದ್ದಂತೆಯೇ ಈ ಸೈನ್ಯಕ್ಕೆ ನಮೋ ಎಂದು ಹೇಳಿದನು.

2. ಒಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?

ಅರ್ಜುನನು ರಥವನ್ನು ನಾಲ್ಕೆಂಟು ಅಡಿಗಳಷ್ಟು ಮುಂದಕ್ಕೆ ಹೋದಾಗ ಈ ಸಾರಥಿ ನನ್ನನ್ನು ಕೊಂದು ಬಿಟ್ಟನು ಎಂದು ಮೈ ಮೇಲಿನ ಸೆರಗನ್ನು ಒಟ್ಟುಗೂಡಿಸಿ ರಥದಲ್ಲಿ ಹಿಂದಕ್ಕೆ ಬಂದು ನಿಂತು ಕೆಳಗೆ ಧುಮ್ಮಿಕ್ಕಿದನು. ಬದುಕಿದೆ ಎಂದು ತಲೆಗೂದಲು ಕೆದರಿ ಹಾರಾಡುವಂತಹ ವೇಗದಿಂದ ಓಡಲು ಪ್ರಾರಂಭಿಸಿದನು. ಅದನ್ನು ನೋಡಿ ಅರ್ಜುನನು ಒಡಲು ಒಡೆವಂತೆಮನದಲ್ಲಿ ನಕ್ಕನು.

3. ಕಾದುನಡೆ ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?

ಉತ್ತರ: ಉತ್ತರನು ಹೆಂಗೆಳೆಯರ ಮುಂದೆ ಕೌರವನ ಸೇನೆಯನ್ನು ಸುಲಭವಾಗಿ ಎದುರಿಸಬಹುದು ಎಂದು ಬಾಯ್ಗೆ ಬಮದಂತೆ ಮಾತನಾಡಿದನು. ಆದರೆ ಯುದ್ಧದಲ್ಲಿ ಕೌರವ ಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು. ಆಗ ಅರ್ಜುನನು ಸೈನ್ಯವನ್ನು ಸರಿಯಾಗಿ ಅರಿಯದೆ ಹಲ್ಲುಕಿರಿದು ಮಾತನಾಡಿದನು. ಈಗ ಅಂಜುಬುರಕ ನರಿಯಂತೆ ಓಡುವುದು ಸರಿಯಲ್ಲ.ಕಾದುನಡೆ ಎಂದು ಅರ್ಜುನನು ಉತ್ತರನಿಗೆ ಹೇಳಿದನು.

4. ಯುದ್ಧವನ್ನು ಮಾಡದಯೆ ಸುಖಪಡಬಹುದು ಎಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು?

ಉತ್ತರ: ಯುದ್ಧ ಭೂಮಿಯಿಂದ ಓಡಿ ಬಂದ ಪಾತಕವನ್ನು ಬ್ರಾಹ್ಮಣರು ಕಳೆಯುತ್ತಾರೆ. ಅಶ್ವಮೇಧ ಯಾಗಮಾಡಬಹುದು. ಫಲವನ್ನು ಪ್ರತ್ಯಕ್ಷವಾಗಿಯೇ ಮಾಡಬಹುದು. ಅದರ ಫಲವನ್ನು ಪಡೆಯಲು ಸ್ವರ್ಗಲೋಕದ ಅಪ್ಸರೆಯರು ಬೇಕಾಗಿಲ್ಲ ನನ್ನ ಅರಮನೆಯ ನಾರಿಯರೇ ಸಾಕು. ನಮ್ಮ ದೊರೆತನವೇ ನಮಗೆ ಇಂದ್ರ ಪದವಿ ಎಂಬುದಾಗಿ ಯುದ್ಧವನ್ನು ಮಾಡದೆಯೇ
ಸುಖಪಡಬಹುದು ಎಂಬುದನ್ನು ಉತ್ತರನು ಸಮರ್ಥಿಸಿದನು.

* **ಕೆಳಗಿನ ಪೂಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

ಉತ್ತರ: ಕೌರವರು ವಿರಾಟರಾಜನ ಗೋವುಗಳನ್ನು ಅಪಹರಿಸುತ್ತಾರೆ. ಪಾಂಡವರನ್ನು ಹುಡುಕುವ ಉದ್ದೇಶ ಅವರದಾಗಿರುತ್ತದೆ. ಉತ್ತರ ಕುಮಾರನ ಸಾರಥಿಯಾಗಿ ಅರ್ಜುನನು ಬೃಹನ್ನಳೆಯ ವೇಷದಲ್ಲಿ ರಣರಂಗಕ್ಕೆ ಬಂದಾಗ ಕೌರವರ ಭಯಂಕರ ಸೈನ್ಯವನ್ನು ಕಂಡು, ಶಿವನಿಂದ ಮಾತ್ರ ಈ ಸೇನೆಯನ್ನು ಗೆಲ್ಲುವುದಕ್ಕೆ ಸಾಧ್ಯ ತನ್ನಿಂದಾಗದು, ಎಂದು ಉತ್ತರನು ರಥದ ಹಿಂಬದಿಯಿಂದ ಧುಮ್ಮಿಕ್ಕಿ, ಬೆನ್ನು ತಿರುಗಿಸಿ ಬಿಟ್ಟಮಂಡೆಯಲ್ಲಿ ಓಡಲು ತೊಡಗುತ್ತಾನೆ. ಆಗ ಅರ್ಜುನ ಅವನನ್ನು ತಡೆದು ಅರಮನೆಯಲ್ಲಿ ಹೆಂಗೆಳೆಯರ ಮುಂದೆ ಜಂಭ ಕೊಚ್ಚಿದ ಪ್ರಸಂಗವನ್ನು ನೆನೆಪಿಸುತ್ತಾನೆ. ಆದರೆ ಉತ್ತರ ಕುಮಾರನು ತನಗೆ ತನ್ನ ಅರಮನೆಯ ಸೌಖ್ಯವೇ ಸಾಕು ಎಂದು ಉತ್ತರಿಸುತ್ತಾನೆ. ಇಂದ್ರಪದವಿಯು ತನಗೆ ಬೇಡ, ಅಪ್ಸರೆಯರು ಬೇಡ, ನನಗೆ ನಮ್ಮ ಅರಮನೆಯ ಸ್ತ್ರೀಯರೇ ಸಾಕು, ನನ್ನ ಜೀವ ಉಳಿದರೆ ಅಷ್ಟೇ ಸಾಕೆಂದು ಓಡತೊಡಗಿದನು. ಆಗ ಅರ್ಜುನನು ಉತ್ತರನಿಗೆ ಅಂಜುಬುರುಕ ನಾಡನರಿಯ ಹಾಗೆ ಓಡುವುದು ಸರಿಯಲ್ಲ ಕಾದು ನಡೆ ಎಂದನು.

2. ಅರ್ಜುನ ಮತ್ತು ಉತ್ತರ ಇವರ ಗುಣ ಸ್ವಭಾವದಲ್ಲಿಯ ವ್ಯತ್ಯಾಸಗಳನ್ನು ಬರೆಯಿರಿ.

ಉತ್ತರ: ಅರ್ಜುನನು ಧೈರ್ಯ, ಪರಾಕ್ರಮ, ವೀರತನದ ಸಂಕೇತವಾದರೆ ಉತ್ತರನು ಹೇಡಿತನ ಜಂಭದ ಪ್ರತಿಕವಾಗಿದ್ದಾನೆ. ಅಚಿಜಬುರುಕನಾದ ಉತ್ತರನಂತಹ ಬದುಕು ಬೇಡ ಅರ್ಜುನನ ಹಾಗೆ ಧೀರವಂತರಾಗಬೇಕು ಎಂಬ ಸಂದೇಶವೂ ಇವರ ಗುಣಸ್ವ ಭಾವಗಳಲ್ಲಿ ಡಗಿದೆ. ಅರಮನೆಯಲ್ಲಿ

MAJEED SHAKEEL

ಹೆಂಗೆಳೆಯರ ಮುಂದೆ ಜಂಭ ಕೊಚ್ಚಿಕೊಂಡ ಉತ್ತರ ಕುಮಾರ ಕೌರವ ಸೈನ್ಯವನ್ನು ನೋಡಿ ಭಯದಿಂದ ಬಿಟ್ಟಮಂಡೆಯಲಿ ಓಡುತ್ತಾನೆ. ಇವನನ್ನು ನೋಡಿ ಎಲ್ಲರೂ ನಗುತ್ತಾರೆ. ನನಗೆ ಇಂದ್ರಪದವಿಯು ಬೇಡ, ಅಪ್ಸರೆಯರು ಬೇಡ, ನನ್ನ ಅರಮನೆಯ ಸ್ತ್ರೀಯರೇ ಸಾಕು, ನನ್ನ ಜೀವ ಉಳಿದರೆ ಅಷ್ಟೇ ಸಾಕೆಂದು ಓಡತೊಡಗಿದನು. ಅವನ ಈ ನಡುವಳಿಕೆ ಎಲ್ಲರಿಗೂ ನಗುವನ್ನು ತರಿಸುತ್ತದೆ. ಆದರೆ ಅರ್ಜುನ ಶೌರ್ಯದ ಪ್ರತೀಕವಾಗಿದ್ದಾನೆ. ತನ್ನ ಪರಾಕ್ರಮದಿಂದ ಕೌರವರ ಸೇನೆಯೊಡನೆ ಹೋರಾಡಿ, ವಿಕ್ರಮವನ್ನು ಪಡೆದು, ವಿಜಯಶಾಲಿಯಾ ಆದುದು ಅವನ ಭುಜಭಲ ಪರಾಕ್ರಮಕ್ಕೆ ಕನ್ನಡಿಯಾಗಿದೆ. ಇದಕ್ಕಾಗಿಯೇ ಎಲ್ಲರೂ ಬಯಸುವುದು ಅರ್ಜುನನಂತಹ ಆಗುವದು ಉತ್ತರಕುಮಾರನಂತೆ ಅಲ್ಲ.

* **ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿರಿ.**

1. ಶಿವಶಿವ ಕಾದಿಗೆಲಿದವು.

ಸಂದರ್ಭ:ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಮಹಾಕಾವ್ಯದಿಂದ ಆಯ್ದ ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:ಈ ಮಾತನ್ನು ವಿರಾಟರಾಜನ ಮಗನಾದ ಉತ್ತರಕುಮಾರನು ಬೃಹನ್ನಳೆ ವೇಷಧಾರಿ ಅರ್ಜುನನಿಗೆ ಹೇಳಿದನು. ಕೌರವರ ಭಯಂಕರ ಸೇನೆಯನ್ನು ಕಂಡು ಹೆದರಿ ರಣರಂಗದಿಂದ ಓಡಲು ತೊಡಗಿದಾಗ ಬೃಹನ್ನಳೆ ವೇಷ ಧರಿಸಿದ್ದ ಅರ್ಜುನನು ತಡೆದು ಯುದ್ಧ ಭೂಮಿಯಿಂದ ಓಡುವುದು ಪಾಪವೆಂದು ಹೇಳಿದಾಗ ಈ ಮೇಲಿನ ಮಾತನ್ನು ಉತ್ತರ ಕುಮಾಅರ ಹೇಳುತ್ತಾನೆ.

2. ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.

ಸಂದರ್ಭ:ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಮಹಾಕಾವ್ಯದಿಂದ ಆಯ್ದ ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:-ಕೌರವ ಸೇನೆಯನ್ನು ಕಂಡು ಹೆದರಿದ ಉತ್ತರನು ಕೌರವ ಸೇನೆಯೊಡನೆ ಯುದ್ಧ ಮಾಡಲು ತನ್ನಿಂದ ಸಾದ್ಯವಿಲ್ಲವೆಂದು ನಿದಾನವಾಗಿ ರಥದ ಹಿಂದಿನಿಂದ ಓಡಲು ಪ್ರಾರಂಭಿಸಿದಾಗ ಮೇಲಿನ ಮಾತು ಬಂದಿದೆ.

3. ನಾಡನರಿಯೊಲ್ ಹಲುಗಿರಿಯೆ ಬಿಡುವೆನೆ.

ಸಂದರ್ಭ: ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ
ಸ್ವಾರಸ್ಯ:ಮಹಾಕಾವ್ಯದಿಂದ ಆಯ್ದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸಸ್ಯ:-ಈ ಮಾತನ್ನು ಅರ್ಜುನ ಉತ್ತರನಿಗೆ ಹೇಳಿದನು.ಉತ್ತರನು ಹೆಂಗಳೆಯರ ಮುಂದೆ ಬಾಯ್ಗೆ ಬಂದಂತೆ ಮಾತನಾಡಿದನು. ಆದರೆ ಯುದ್ಧರಂಗದಲ್ಲಿ ಕೌರವಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು. ಆಗ ಅರ್ಜುನನು ಹಲು_ ಕಿರಿದು ಅಂಜುಬುರುಕ ನರಿಯಂತೆ ಓಡಿಹೋಗಲು ಬಿಡುವುದಿಲ್ಲ ಕಾದು ನಡೆ ಎಂದು ಉತ್ತರನಿಗೆ ಹೇಳಿದನು.

4. ಎಮ್ಮರಮನೆಯ ನಾರಿಯರೆ ಸಾಕು.

ಸಂದರ್ಭ:ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ
ಸ್ವಾರಸ್ಯ: ಮಹಾಕಾವ್ಯದಿಂದ ಆಯ್ದ ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಲಾಗಿದೆ.

ಸ್ವಾರಸ್ಯ:-ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳಿದನು. ಯುದ್ಧರಂಗದಿಂದ ಓಡಿಹೋದರೆ ಪಾಪ ಸುತ್ತಿಕೊಳ್ಳುವುದು. ಎಂದಾಗ ಉತ್ತರ ನನಗೆ ಯುದ್ಧದಲ್ಲಿ ಸೋತು ವೀರ ಸ್ವರ್ಗ ಸೇರುವುದು ಬೇಡ ಇಂದ್ರ ಪದವಿಯೂ ಬೇಡ ಸುರರಸತಿಯರೂ ಬೇಡ ಎಂದು- ಹೇಳುವಾಗ ಈ ಮಾತು ಬಂದಿದೆ.

**ಪೂರಕ ಓದು 01- ಕಳ್ಳರ ಗುರು.**

MAJEED SHAKEEL

1. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು?
ವೈದ್ಯರು ತನ್ನ ವೃತ್ತಿಯ ಬಗ್ಗೆ ಹೀಗೆ ಹೇಳುತ್ತಾರೆ. ಈ ವೈದ್ಯವೃತ್ತಿ ದುಡ್ಡುಗಳಿಸಬೇಕಾದುದ್ದಲ್ಲ ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು. ಸಮಾದದಿಂದ ನಮಗೆ ಬದುಕಿ ಇರಲು ಏನಾದರು ದೊರೆತರೆ ಸಾಕು ಎಂದು ವೈದ್ಯರು ತನ್ನ ವೃತ್ತಿಯ ಬಗ್ಗೆ ತನ್ನ ಹೆಂಡತಿ ರತ್ನಾಳಿಗೆ ಹೇಳಿದರು.

2. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?
ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸುವದಿಲ್ಲ. ಮನುಷ್ಯ ಮನುಷ್ಯನಿಗೆ ಸುಮ್ಮನೆ ಬಿಡುವನೆ? ಅವನ ಆಸೆಯ ಹಾವು ಗಿಂತ ಕೆಟ್ಟದು. ಯಾರು ಕೆಣಕದಿದ್ದರೂ ಎಲ್ಲರನ್ನುಕಡಿಯುವುದು ಎಂದು ಹಾವನ್ನು ಕಂಡ ವೈದ್ಯರು ತಲೆಯಲ್ಲಿ ವಿಚಾರಗಳು ಮೂಡಿಬಂದವು.

3. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?
ವೈದ್ಯರು ಮಗುವಿನ ನಾಡಿಯನ್ನು ಹಿಡಿದು ನೋಡಿದರು ಜ್ವರದ ರೀತಿಯಲ್ಲಿ ಪರೀಕ್ಷಿಸಿ ಗುರುತಿಸಿದರು. ಔಷಧಿಯ ಮಾತ್ರೆಯನ್ನು ಮಗುವಿಗೆ ಕುಡಿಸಿದರು. ವೈದ್ಯರಿಗೆ ಭೀಮನಾಯಕನ ಪ್ರಾಣ ರಕ್ಷಿಸಲು ಒಂದು ಸೊಪ್ಪು ಬೇಕಾಯಿತು. ವೈದ್ಯರು ಸೊಪ್ಪನ್ನು ಹುಡುಕಲು ಹೋದರು. ಸೊಪ್ಪಿನ ರಸದೊಂದಿಗೆ ಔಷಧಿ□ಯನ್ನು ಕುಡಿಸಿದರು. ಕುಪ್ಪೆಯಲ್ಲಿದ್ದ ಒಂದು ಲೋಹವನ್ನು ಹಣೆ ತುಂಬ ಬಳಿದರು ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣ ವನ್ನು ಉಳಿಸಿದರು

4. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಯನ್ನು ಸಲ್ಲಿಸಿದನು?
ಉತ್ತರ; ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ ಆ ಕಾಣದ ದೇವರು ನಿವು. ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ನಿಮ್ಮ ಉಪಕಾರವನ್ನು ಎಂದೋ ಮರೆಯಲಾರೆ. ಎಂದು ಕೃತಜ್ಞತೆಯನ್ನು ಸಲ್ಲಿಸಿದನು.

5. ವೈದ್ಯರು ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?
ಉತ್ತರ:ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ ಎಂಬ ಮಾತುಗಳನ್ನು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

6. ವೈದ್ಯರು ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ಲಭಿಸಿದವು ಎಂದು ತನ್ನ ಹೆಂಡತಿಗೆ ಹೇಳಿದರು?
ಉತ್ತರ:ನಿಮ್ಮ ವೈದ್ಯಕ ಪ್ರಾವಿಣ್ಯಕ್ಕೆ ದೊರೆಯುವ ಪ್ರತಿಫಲ ಹೀಗೆ ಕಾಣಿಸಿತು. ಕಾಲ ತುಂಬಾ ನೆಟ್ಟ ಮುಳ್ಳು. ಎಡವಿದ ಗಾಯ, ನಿದ್ದೆಗೆಡುವುದು, ಉಪವಾಸವೇ ಪ್ರತಿಫಲವು ಲಭಿಸಿದವು.

7. ಭೀಮ ನಾಯಕನು ವೈದ್ಯರ ವಸ್ತಗಳನ್ನು ಹಿಂತುರಿಗಿಸಿ ಏನೆಂದು ಹೇಳಿದನು?
ಉತ್ತರ:ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ದೇವರ ಒಡವೆಗಳನ್ನು ದೇವರಿಗೆ ಒಪ್ಪಸಲು ಬಂದಿದ್ದೇನೆ ನನ್ನನ್ನು ಕ್ಷಮಿಸಿ, ದಯವಿಟ್ಟು ಎಲ್ಲವನ್ನು ಒಪ್ಪಿಸಿ ಕೊಳ್ಳಬೇಕು ಎಂದನು.

8. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ್ದ ಬಗೆ ಹೇಗೆ?
ಉತ್ತರ: ಆಳುಗಳಿಬ್ಬರು ಗಂಟನ್ನು ಬಿಚ್ಚಿ ಮುಂದೆ ಇಟ್ಟರು. ವೈದ್ಯರು ಮನೆಯಲ್ಲಿ ಕಳುವಾದ ವಸ್ತುಗಳೆಲ್ಲ ಅಲ್ಲಿ ಇದ್ದವು. ಭೀಮನಾಯಕ ಮತ್ತೆ ನುಡಿದ. ತಮ್ಮ ಹಾಸಿಗೆ ನನ್ನ ಮಗನ ಮಗ್ಗಲಲ್ಲಿ ಇದೆ. ಅದೊಂದು ಮಾತ್ರ ತಿಂದಿಲ್ಲ. ಅದು ತಮ್ಮ ಹರಕೆಯಾಗಿ ನನ್ನ ಮಗನಿಗೆಂದು ಇರಲಿ ಎಂದನು. ಈ ರೀತಿ ವಸ್ತುಗಳು ಸಿಕ್ಕವು.

9. ಕಳ್ಳರ ಗುರುವಿನ ನಮಃಪರಿವರ್ತನೆ ಹೇಗಾಯಿತು?
ಉತ್ತರ;ಭೀಮನಾಯಕನ ಮಗನಿಗೆ ಜ್ವರ ಬಂದಾಗ ವ್ಯದ್ಯರು ಅವನಿಗೆ ವೈದ್ಯರು ಮದ್ದುಕೊಟ್ಟು ಸರಿಪಡಿಸಿದರು. ಕಾಯುವದು ದೇವರ ಕೆಲಸ ಕೊಲ್ಲುವದು ರಾಕ್ಷರ ಕೆಲಸ ಎಂದು ವೈದ್ಯರು ಹೇಳುತ್ತಾರೆ ಕಳ್ಳರ ಗುರುವಿನ ಮಗ ಗುಣವಾದಾಗ ಅವನ ಮನ ಪರಿವರ್ತನೆ ಆಯಿತು.

**10. ಕಳ್ಳರ ಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರವೇನು?**

MAJEED SHAKEEL

ಉತ್ತರ;ನಾವು ಪ್ರತಿಫಲ ಬಯಸದೆ ಒಳ್ಳೆಯ ಕಾರ್ಯ ಮಾಡಿದಾಗ ದೇವರು ಅದರ ಫಲ ನೀಡುತ್ತಾನೆ. ಯಾವ ರೀತಿ ವೈದ್ಯ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದನು. ವೈದ್ಯನು ತಾನೇ ಕಷ್ಟಕ್ಕೆ ಒಳಗಾಗಿ ಭೀಮನಾಯಕನ ಜೀವನವನ್ನು ಉಳಿಸಲು ಹಲವಾರು ಕ್ರಮವನ್ನು ವಹಿಸಿದನು. ವೈದ್ಯರು ಸ್ವತಃ ಕಾಡಿನಲ್ಲಿ ತೆರಳಿ ಭೀಮನಾಯಕನ ಮಗನಿಗೆ ಔಷಧಿಯನ್ನು ತಂದು, ಅವನ ಜೀವನವನ್ನು ರಕ್ಷಿಸಿದನು.

**ಪೂರಕ ಓದು ಪಾಠ-02**

**1. ಬದುಕು ಬದುವ ಬೇಲಿ ಯಾವ ರೀತಿ ಇದೆ?**

ಉತ್ತರ;ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಂತೆ, ಮಲಗಿದ ಮಲ್ಲಿಗೆಯಂತೆ, ರೂಪ ತಾಯಿಯಂತೆ, ನೆರಳು ಕರುಳಿನಂತೆ ಮಡಿಲ ರೀತಿಯಲ್ಲಿದೆ.

2. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

ಉತ್ತರ;ರಾಜ್ಯಹುಟ್ಟಿ, ರಾಜ್ಯವುರುಳಿ, ಸಾಗಿ ಸಾಗಿ ಶತ ಶತಮಾನಗಳ ನೇಗಿಲಯೋಗಿ ಸಾಗಿಸಾಗಿ ಅದೇ ಸಂತೆ, ಅದೇ ಜಾತ್ರೆ ಗೊಬ್ಬರದ ಹಾಡು ಹೊಮ್ಮಿದೆ ಎಂಬ ನೆನಪುಗಳಿವೆ.

3. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ?

ಉತ್ತರ:ಬಣ್ಣ ಬಣ್ಣದ ಚಿಟ್ಟೆ ಹಾರಿ ಭೃಂಗದ ಸಂಗೀತ ಕೇಳಿ ಕೆಳಗೆ ಹೊರಗೆ, ಜೀವ ಹೂವ ಹಾಸಿಗೆಯ ಗಮ ಗಮನಿಸುವ ಗಮಲಿನಲ್ಲಿ ಇಲ್ಲೇ ಎಲ್ಲೋ ಅಡಗಿ ನಾಳೆಯೆಂಬ ಖುಷಿಯಿದೆ ಎಂದು ಹೇಳಿದ್ದಾರೆ.

4. ನಾಗರಿಕತೆಯ ಬೇಳವಣಿಗೆಯ ಬಗ್ಗೆ ಕವಿಯಿತ್ರಿಗೆ ಯಾವ ಅಲಕು ಇದೆ?

ಉತ್ತರ:ಜನರು ನಗರವನ್ನು ಎಲ್ಲಾ ತಿಂದು ತೇಗಿದ್ದು ಬಗೆಬಗೆಯ ಕಾರೇನು, ಪಟಪಟ ಮೋಟಾರುಗಲೆನು ಅಲ್ಲಿ ಮೇಲೆ ಲೋಹದ ಹಕ್ಕಿಹಾರಾಟವೇನು ಈ ಎಲ್ಲಾ ಜೀವದ ಇಂಧನ ತೀರುತ್ತಲಿದೆ ಬದುಕು ನಾಳೆ ಏನೋ ಯಾಕೋ ಏನೋ ಎಂದು ಕವಯಿತ್ರಿಗೆ ಅಳುಕು ಇದೆ.

5. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

ಉತ್ತರ:ತೆಂಗು ತಾರೆಗಳ ನಾಡಿನಲ್ಲಿ ಬೆವರ ಹನಿಯಲಿ ಸಾಲೆಯಲ್ಲಿ ಜೀವಾ ಅಮೃತವಡಗಿದೆ. ಜೀವವನ್ನು ಹಿಂಡಿ ಒಡಲನ್ನು ಹಿಂಡಿ ತೈಲಧಾರೆಯು ಹೊಮ್ಮಿ ಬರಲಿ ಹೊಂಗೆ, ಹಿಪ್ಪೆ, ಜೀವ ಮೇಳ ನಡೆಯಲಿ ನಾಳೆ ಎಂಬ ಚಪ್ಪರದ ಕೆಳಗೆ ಮನುಕುಲದ ಭವ್ಯ ಬದುಕು ಮೊಳಕೆಯ ಒಡೆಯಲಿ, ಭವ್ಯವಾದ ಬದುಕು ಅರಳಬೇಕಿದೆ.

**ಕೊಟ್ಟಿರುವ ಪದ್ಯದ ಸಾರಂಶವನ್ನು ವಾಕ್ಯರೊಪದಲ್ಲಿ ಬರೆಯಿರಿ.**

**1)**

ಏಕಾಂಗಿಯಾಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದವನು ಅಡವಿ ದಾರಿ ಹಿಡಿದನು!
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

ಈ ಪದ್ಯವನ್ನು ಬಸವರಾಜ ಸಬರದ ಅವರು ಬರೆದಿರುವ ಬೋಧಿ ವೃಕ್ಷದ ಹಾಡು ಪದ್ಯದಿಂದ ಆರಿಸಲಾಗಿದೆ. ಬುದ್ಧನು ಏಕಾಂಗಿಯಾಗಿ ತಮ್ಮ ಹತ್ತಿರವಿದ್ದ ಎಲ್ಲಾ ಸುಖ ಸೌಲಭ್ಯ ಹೆಂಡತಿ ಮಗುವನ್ನು ಬಿಟ್ಟು ರಾತ್ರಿಯಲ್ಲಿ ಕಾಡಿನ ಕಡೆಗೆ ನಡೆದನು. ದು:ಖಕ್ಕೆ ಕಾರಣವನ್ನು ಹುಡುಕಲು ಗೊತ್ತು ಗುರಿ ಇಲ್ಲದೆ ಕಾಡಿನ ಕಡೆಗೆ ನಡೆದನು.

**2)**

ಕಾಡು ಕಾಡು ಅಲೆದವನಿಗೆ ನಾಡಿನಾರ್ಥ ಹೊಳೆಯಿತು
ಕೋಗಿಲೆಯ ಹಾಡೊಂದು ದೊರದಿಮದ ಕೇಳಿತು

MAJEED SHAKEEL

ಬೆಳ್ಳಿಚುಕ್ಕೆ ಬಾನಿನಲ್ಲಿ ಆಗತಾನೆ ಬೆಲಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.

ಈ ಪದ್ಯವನ್ನು ಬಸವರಾಜ ಸಬರದ ಅವರು ಬರೆದಿರುವ ಬೋಧಿ ವೃಕ್ಷದ ಹಾಡು ಪದ್ಯದಿಂದ ಆರಿಸಲಾಗಿದೆ. ಬುದ್ಧನು ಮನೆಯನ್ನು ಬಿಟ್ಟು ಬಂದು ದುಖ:ಕ್ಕೆ ಕಾರಣವನ್ನು ಹುಡುಕುತ್ತ ಒಂದು ಕಾಡಿನಿಂದ ಇನ್ನೋದು ಕಾಡಿಗೆ ತಿರುಗುತ್ತಾನೆ. ಕೋಗಿಲೆಯ ಹಾಡು ಕೆಳಿಸುತ್ತದೆ. ಆಕಾಶದಲ್ಲಿ ಚುಕ್ಕೆಗಳು ಕಾಣಿಸುತ್ತವೆ.ಬೋದಿ ವೃಕ್ಷದೆ ಕೆಳಗೆ ಒಂದು ಬೆಲಕು ಕಾಣಿಸುತ್ತದೆ. ನಾಡಿನ ಅರ್ಥತಿಳಿಯತ್ತದೆ. ಬುದ್ಧನಿಗೆ ಜ್ಞಾನೋದಯವಾಗುತ್ತದೆ.

3) ಕೊರಡ ಕೊನರಿಸಿ ತುದಿಗೆ ಮುಗಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

ಈ ಪದ್ಯವನ್ನು ಬಸವರಾಜ ಸಾದರ ಅವರು ಬರೆದಿರುವ ಸವಿಚೈತ್ರ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಚೈತ್ರ ಮಾಸದಲ್ಲಿ ಆಗುವ ಬದಲಾವಣೆಗಳ ಬಗ್ಗೆ ಹೇಳಿದ್ದಾರೆ. ಬೇಸಿಗೆಯಲ್ಲಿ ಒಣಗಿದ ಹಾಗೆ ಆದ ಮರದ ರೆಂಬೆ ಕೊಂಬೆಗಳು ಚಿಗುರುತ್ತವೆ. ಬರಡಾಗಿರುವ ನಮ್ಮ ಜೀವನದಲ್ಲಿ ಸಂತೊಷ ಹೊಸ ಉಲ್ಲಾಸ ತುಂಬುತ್ತದೆ. ಕೊಗಿಲೆ ಪಕ್ಷಿಗಳ ಹಾಡಿನ ರಾಗ ಆಕಾಶಕ್ಕೆ ಮುಟ್ಟುತ್ತದೆ.

4)
ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವಿನ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

ಈ ಪದ್ಯವನ್ನು ಬಸವರಾಜ ಸಾದರ ಅವರು ಬರೆದಿರುವ ಸವಿಚೈತ್ರ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಚೈತ್ರ ಮಾಸಕ್ಕಿಂತೆ ಮೊದಲಿನ ತಿಂಗಳಲ್ಲಿ ಆದ ಎಲ್ಲಾ ಕೊಳೆಯನ್ನು ತಿಕ್ಕಿ ತೊಳೆದಂತೆ ಆಗುತ್ತದೆ. ಎಲ್ಲಾಕಡೆಗೆ ಸಂತೋಷದ ಮುಖಗಳು ಕಾಣುತ್ತವೆ. ಯುಗಾದಿಯ ಹಬ್ಬದಲ್ಲಿ ಬೇವು ಬೆಲ್ಲಾತಿಂದು ಬೆಲ್ಲಾ ಬೇವಿಗೆ ಸೇರಿ ಬೆಲ್ಲಾದ ಪ್ರಭಾವ ಹೆಚ್ಚಾಗಿ ಕಹಿ ಕಳೆದು ಸಿಹಿ ಹೆಚ್ಚಾಗಿ ಜನರ ಎದೆಗೆ ಸಂತೋಷ ಮೂಡುತ್ತದೆ.

5)
ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗು ವಂಬುಜದಂತೆ ಧ್ಯೆಯದಾಳ್ವಿಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

ಈ ಪದ್ಯವನ್ನು ಎಂ ಗೋಪಾಲ ಕೃಷ್ಣ ಅಡಿಗ ಅವರು ಬರೆದ ಗುರಿ ಪದ್ಯದಿಂದ ಆರಿಸಿಕೋಳ್ಳಲಾಗಿದೆ. ಮನುಷ್ಯ ತನ್ನ ಗುರಿಯನ್ನು ಕಮಲದ ಹೂವಿನ ಹಾಗೆ ಇಡಬೇಕು. ಯಾವ ರೀತಿ ಕಮಲ ಕೆಸರಿನ ಒಳಗೆ ಹುಟ್ಟಿದರೋ ಮೇಲೆ ಆಕಾಶದಲ್ಲಿದ್ದ ಸೋರ್ಯನ ಕಿರಣವನ್ನು ನೋಡಿ ಸಂತೋಷ ಗೊಳ್ಳುತ್ತದೆ ಹಾಗೆ ನಾವು ನಮ್ಮ ಜೀವನ ನಡೆಸಬೇಕು. ಧ್ಯೇಯ ಇಡಬೇಕು ಮನುಷ್ಯನಾಗಿ ಹುಟ್ಟಿ ಬಂದ ಸಾರ್ಥಕತೆಗೆ ಎಓದು ಹೇಳಿದ್ದಾರೆ.

6)
ಒಂದು ಬಾಣಕ್ಕೆ ಗುರಿಯುಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

MAJEED SHAKEEL

ಈ ಪದ್ಯವನ್ನು ಎಂ ಗೋಪಾಲ ಕೃಷ್ಣ ಅಡಿಗ ಅವರು ಬರೆದ ಗುರಿ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಮನುಷ್ಯ ತನ್ನ ಗುರಿ ಹೇಗಿಡಬೇಕೆಂದು ಹೇಳಿದ್ದಾರೆ.ಯಾವ ರೀತಿ ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆ ಒಂದು ದೇಹದಲ್ಲಿ ಒಂದು ಆತ್ಮಿರುತ್ತದೆ. ಮನುಷ್ಯನ ಜೀವನದಲ್ಲಿ ಹಲವು ಸಾಧ್ಯಗಳು ಏಕೆ ಬೇಕು. ಮನುಷ್ಯ ಒಂದೇ ಹಿರಿದಾದ ಗುರಿಯನ್ನು ಸಾಧಿಸಲು ದಿನ ರಾತ್ರಿ ಶ್ರಮಪಡಬೇಕು.

**7)**

ನೀರು ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.

ಈ ವಾಕ್ಯವನ್ನು ಬಸವಣ್ಣನವರು ಬರೆದಿರುವ ವಚನಗಳಿಂದ ಆರಿಸಿಕೊಳ್ಳಲಾಗಿದೆ. ಬಸವಣ್ಣನವರು ಜನರ ಮೋಢ ನಂಬಿಕೆಯ ಬಗ್ಗೆ ಹೇಳಿದ್ದಾರೆ. ನೀರು ಎಲ್ಲಿ ಕಾಣತ್ತದೆ ಅಲ್ಲಿ ಮುಳುಗುತ್ತಾರೆ. ಮರ ಎಲ್ಲಿ ಕಾಣುತ್ತದೆ ಅದರ ಸುತ್ತ ಸುತ್ತುತಾರೆ. ಒಂದು ದಿನ ಬತ್ತಿ ಹೋಗುವ ನೀರು ಒಣಗಿ ಹೋಗುವ ಮರ ಇಷ್ಟ ಪಡುವವರು ಭಗವಮತನ ಮಾತುಗಳನ್ನು ಎಲ್ಲಿ ತಿಳಿಯುತ್ತಾರೆ.

8)

ಮರವಿದ್ದಯ ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

ಈ ವಾಕ್ಯವನ್ನು ಅಕ್ಕಮಹಾದೇವಿ ಅವರು ಬರೆದ ವಚನಗಳಿಂದ ಆರಿಸಿಕೊಳ್ಳಲಾಗಿದೆ. ಮರ ಇದ್ದು ಅದು ನೆರಳು ಕೊಡದೆ ಇದ್ದರೆ ಅದರಿಂದ ಲಾಭ ಆಗುವದಿಲ್ಲ. ಧನ ಇದೆ ಆದರೆ ದಯೆ ಇರದಿದ್ದರೆ ಅದರಿಂದ ಲಾಭ ಆಗುವದಿಲ್ಲ. ಹಸುಹಾಲು ಕೊಡದೆ ಇದ್ದರೆ ಅದರಿಂದ ಲಾಭ ಆಗುವದಿಲ್ಲ. ರೋಪ ಇದ್ದವರ ಹತ್ತಿರ ಗುಣ ಇರದಿದ್ದರೆ ಅದರಿಣದ ಲಾಬ ಆಗುವದಿಲ್ಲ.ತಟ್ಟೆ ಇದೆ ಅದರಲ್ಲಿ ಅನ್ನ ಇರದಿದ್ದರೆ ಅದರಿಂದ ಲಾಭ ಆಗುವದಿಲ್ಲ. ನಾವು ಹುಟ್ಟಿದ ಮೇಲೆ ದೇವರ ಜ್ಞಾನ ಇಲ್ಲದಿದ್ದರೆ ನಾವು ಹುಟ್ಟಿದ್ದು ವೈರ್ಥ ಆಗುತ್ತದೆ.

**9)**

ಕಡೆಗೆ ಹಾಯುವ ಕಂಗಳೀ ಬಲ
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ.

ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಎಂತಹ ಅದ್ಭುತವಾದ ಸೈನ್ಯ ಕೊನೆಯವರೆಗೆ ದೃಷ್ಟಿ ಹೋಗುತ್ತಿಲ್ಲ. ಈ ಸ್ಯನ್ಯದೊಡನೆ ನಾನು ಯುದ್ಧ ಮಾಡಲು ಸಾಧ್ಯವಿಲ್ಲ. ಯಾವುದೇ ಅದ್ಭುತವಾದ ಕೆಲಸ ಮಾಡಲು ಮೊದಲು ಜೀವಂತವಾಗಿರಬೇಕು. ಈ ಸೈನ್ಯಕ್ಕೆ ಭೂಮಿತಾಯಿ ಜನ್ಮ ಕೊಟ್ಟಿದಹಾಗೆ ಕಾಣುತ್ತದೆ. ಈ ಸೈನ್ಯದೊಡನೆ ಯುದ್ಧ ಮಾಡಲು ಶಿವನಿಂದ ಮಾತ್ರ ಸಾಧ್ಯ. ಇನರೊಡನೆ ಯುದ್ಧ ಮಾಡಿ ಗೆದ್ದ ಹಾಗೆಯೆ ಈ ಸ್ಯನ್ಯಕ್ಕೆ ನಮೋ ಎನ್ನುತ್ತಾನೆ.

MAJEED SHAKEEL

10)

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು.
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.

ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಉತ್ತರಕುಮಾರ ಕೌರವ ಸೈನ್ಯವನ್ನು ನೋಡಿ ಹೆದರಿದಾಗ ಅರ್ಜುನ ರಥವನ್ನು ವೇಗವಾಗಿ ನಡೆಸುತ್ತಾನೆ. ಆಗ ಉತ್ತರಕುಮಾರ ಸಾರಥಿ ನೀನು ನನಗೆ ಕೊಂದೆ ಎಂದು ಸೆರಗನ್ನು ಒಟ್ಟಿಗೂಡಿಸಿರಥದಿಂದ ಜಿಗಿದು ಬದುಕಿದೆನೆಂದು ಓಡಲು ಪ್ರಾರಂಬಿಸುತ್ತಾನೆ.

## ಅಲಂಕಾರಗಳು.

**ಉಪಮಾ ಅಲಂಕಾರ:-** ಉಪಮೆಯ ಮತ್ತು ಉಪಮಾನಗಳನ್ನು ಒಂದಕ್ಕೊಂದು ಹೋಲಿಕೆಮಾಡಿ ಹೇಳುವದೇ ಉಪಮಾಲಂಕಾರ.

**1) ಕಾಡು ತುಂಬ ಪ್ರೀತಿಹೊಳೆ ಕೋಡಿಯಂತೆ ಹರಿಯಿತು.**

ಉಪಮಾನ :-ಕೋಡಿ
ಉಪಮೇಯ :-ಪ್ರೀತಿ ಹೊಳೆ
ಉಪಮಾವಾಚಕ ಪದ :-ಅಂತೆ
ಸಮಾನ ಧರ್ಮ :- ಹರಿಯುವಿಕೆ.

ಇಲ್ಲಿ ಉಪಮೇಯವಾದ ಪ್ರೀತಿಯ ಹೊಳೆ ಯನ್ನು ಉಪಮಾನವಾದ ಕೋಡಿಗೆ ಹೋಲಿಸಿ ಹೇಳಿದರಿಂದ ಇದು ಉಪಮಾ ಅಲಂಕಾರ.

**2) ಗಿಡ ಗಿಡವು ಅಪ್ಪಿಕೊಂಡು ಕುಣಿಯುವಂತೆ ಕಂಡಿತ್ತು**

ಉಪಮಾನ :-ಅಪ್ಪಿಕೊಂಡು ಕುಣಿಯುವದು.
ಉಪಮೇಯ :-ಪ್ರೀತಿ ತುಂಬಿರುವದು.
ಉಪಮಾವಾಚಕ ಪದ:- ಅಂತೆ.
ಸಮಾನ ಧರ್ಮ:- ಪ್ರೀತಿ

ಇಲ್ಲಿ ಉಪಮೇಯವಾದ ಪ್ರೀತಿ ತುಂಬಿರುವದನ್ನು ಉಪಮಾನವಾದ ಅಪ್ಪಿಕೊಂಡು ಕುಣಿಯುವದಕ್ಕೆ ಹೋಲಿಸಿ ಹೇಳುವದರಿಂದ ಇದು ಉಪಮಾಲಂಕಾರವಾಗಿದೆ.

**3) ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು.**

ಉಪಮಾನ :-ಕರ್ಪೂರ ಮೌನದದಿಂದ ಕರಗುವದು.
ಉಪಮೇಯ :-ಬದುಕಿನ ಕರ್ತವ್ಯ.
ಉಪಮಾವಾಚಕ ಪದ:- ವೊಲು.
ಸಮಾನ ಧರ್ಮ:- ಮೌನ

ಇಲ್ಲಿ ಉಪಮೇಯವಾದ ಬದುಕಿನ ಕರ್ತವ್ಯವನ್ನು ಉಪಮಾನವಾದ ಕರ್ಪೂರ ಮೌನದಿಂದ ಕರಗುವದಕ್ಕೆ ಹೋಲಿಸಿ ಹೇಳಲಾಗಿದ್ದರಿಂದ ಇದು ಉಪಮಾಲಂಕಾರ ಆಗಿದೆ.

**4) ದೀಪದೆದುರಿಗೆ ತಿಮಿರ ಸರಿಯುವಂತೆ ಶಾಂತಿಯಲ್ಲಿ ಬದುಕಿ ಕರ್ತವ್ಯವನ್ನು ಮುಗಿಸು.**

ಉಪಮಾನ :-ದೀದೆದುರಿಗೆ ತಿಮಿರ ಸರಿಯುವದು.

MAJEED SHAKEEL

ಉಪಮೇಯ :-ಬದುಕಿನ ಕೆಲಸ.
ಉಪಮಾವಾಚಕ ಪದ:- ಅಂತೆ.
ಸಮಾನ ಧರ್ಮ:- ಮೌನ
ಇಲ್ಲಿ ಉಪಮೇಯವಾದ ಬದಿಕಿನ ಕೆಲಸವನ್ನು ಉಪಮಾನವಾದ ದೀಪದೆದುರಿಗೆ ತಿಮಿರ ಸರಿಯುವದಕ್ಕೆ ಹೇಳಲಾಗಿರುವದರಿಂದ ಇದು ಉಪಮಾಲಂಕಾರ ಆಗಿದೆ.

**5)ರವಿಕರಕೆ ಕರಗುವ ಇಬ್ಬನಿವೋಲಲರು ಸಿಡುಕು ಮಿಡುಕನ್ನು ತೊರೆದು ಮೌನಿಯಾಗು.**

ಉಪಮಾನ :-ಕರಗು ಇಬ್ಬನಿ.
ಉಪಮೇಯ :-ಕೋಪ ಬಿಟ್ಟು ಮೌನಿಯಾಗು.
ಉಪಮಾವಾಚಕ ಪದ:- ವೊಲು.
ಸಮಾನ ಧರ್ಮ:- ಮೌನ. (ಶಾಂತಿ)
ಇಲ್ಲಿ ಉಪಮೇಯವಾದ ಕೋಪ ತೊರೆದು ಮೌನಿಯಾಗಿರುವದನ್ನು ಉಪಮಾನವಾದ ಕರಗುವ ಇಬ್ಬನಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

**6) ಬಾಳೆ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ.**

ಉಪಮಾನ:-ಬಾಳೆ ಹಣ್ಣು.
ಉಪಮೇಯ:-ಕುಣಿಗಲು ಕೆರೆ.
ಉಪಮಾವಾಚಕ ಪದ:- ಅಂತೆ.
ಸಮಾನ ಧರ್ಮ:- ಬಾಗುವಿಕೆ.
ಇಲ್ಲಿ ಉಪಮೇಯವಾದ ಕುಣಿಗಲು ಕೆರೆಯನ್ನು ಉಪಮಾನವಾದ ಬಾಐಎಲು ಹಣ್ಣಿಗೆ ಹೋಲಿಸಿ ಹೇಳಿದ್ದರಿಂದ ಇದು ಉಪಮಾಲಂಕಾರ.

**7) ನಿಂಬೆ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ.**

ಉಪಮಾನ:-ನಿಂಬೆಯ ಹಣ್ಣು.
ಉಪಮೇಯ:-ಕುಣಿಗಲು ಕೆರೆ.
ಉಪಮಾವಾಚಕ ಪದ:-ಅಂತೆ.
ಸಮಾನ ಧರ್ಮ:- ತುಂಬಿರುವದು.
ಇಲ್ಲಿ ಉಪಮೇಯವಾದ ಕುಣಿಗಲು ಕೆರೆಯನ್ನು ಉಪಮಾನವಾದ ನಿಂಬೆಹಣ್ಣಿಗೆ ಹೋಲಿಸಿ ಹೇಳಿರುವದರಿಂದ ಇದು ಉಪಮಾ ಅಲಂಕಾರವಾಗಿದೆ.

8) ಸಂಗೀತ ಲೋಕದಲ್ಲಿ ಧ್ರುವತಾರೆಯಂತೆ ಬೆಲಗುತ್ತಿರುವ ಪಂಡಿತ ಪುಟ್ಟರಾಜ ಗವಾಯಿಗಳು.
ಉಪಮಾನ:-ಧ್ರುವತಾರೆ.
ಉಪಮೇಯ:-ಪುಟ್ಟರಾಜ ಗವಾಯಿಗಳು.
ಉಪಮಾವಾಚಕ ಪದ:-ಅಂತೆ.
ಸಮಾನ ಧರ್ಮ:- ಬೆಳಗುವದು.
ಇಲ್ಲಿ ಉಪಮೇಯವಾದ ಪುಟ್ಟರಾಜ ಗವಾಯಿಗಳನ್ನು ಉಪಮಾನವಾದ ಧ್ರುವತಾರೆಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರ.

9) ನಾಡನರಿವೊಲು ಎನಗೆ ನಿ ಹಲುಗಿರಿಯೆ.
ಉಪಮಾನ:-ನಾಡನರಿ.
ಉಪಮೇಯ:-ಉತ್ತರಕುಮಾರ.
ಉಪಮಾವಾಚಕ ಪದ:-ವೋಲ್.
ಸಮಾನ ಧರ್ಮ:- ಹೇಡಿತನ.

ನಿಲ್ಲಿ ಉಪಮೇಯವಾದ ಉತ್ತರಕುಮಾರನನ್ನು ಉಪಮಾನವಾದ ನಾಡನರಿಗೆ ಹೋಲಿಸಿ ಹೇಳಿದ್ದರಿಂದ ಇದು ಉಪಮಾಲಂಕಾರ.

10) ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ.

ಉಪಮಾನ:-ಸಾವಿರಾರು ಮಳೆಬಿಲ್ಲುಗಳು.

ಉಪಮೇಯ:-ಬಗೆಬಗೆಯ ಹೂವುಗಳು.

ಉಪಮಾವಾಚಕ ಪದ:-ಅಂತೆ.

ಸಮಾನ ಧರ್ಮ:- ಸಂಧಯಮ.

ಇಲ್ಲಿ ಉಪಮೇಯವಾದ ಬನದ ಹೂಗಳನ್ನು ಮಳೆಬಿಲ್ಲಿಗೆ ಹೋಲಿಸಿ ಹೇಳಿದ್ದರಿಂದ ಇದು ಉಪಮಾಲಂಕಾರ.

**ರೂಪಕ ಅಲಂಕಾರ**

**ಉಪಮಾನ ಮತ್ತು ಉಪಮೇಯಗಳಲ್ಲಿ ಭೇದವನ್ನು ತೋರಿಸದೆ ಎರಡು ಒಂದೇ ಎಂದು ಭಾವಿಸಿ ಹೇಳುವ ಅಲಂಕಾರವೇ ರೂಪಕ ಅಲಂಕಾರ.**

1) ಬಲಗಡಲು.

ಉಪಮಾನ:-ಕಡಲು.

ಉಪಮೇಯ:-ಬಲ. (ಸೈನ್ಯ)

ಇಲ್ಲಿಉಪಮಾನವಾದ ಕಡಲಿಗು ಉಪಮೇಯವಾದ ಬಲಕ್ಕೆ ಯಾವುದೆ ವ್ಯತ್ಯಾಸವನ್ನು ತೋರಿಸದೇ ಎರಡೂ ಒಂದೇ ಎಂದು ಅಭೇದವನ್ನು ಕಲಿಸಿ ಹೇಳಿರುವದರಿಂದ ಇದು ರೂಪಕಲಂಕಾರ.

2)ವನಜಮುಖಿ.

ಉಪಮಾನ:-ವನಜ.

ಉಪಮೇಯ:ಮುಖಿ (ಅರಮನೆಯ ಸಖಿಯರು).

ಇಲ್ಲಿ ಉಪಮಾನವಾದ ವನಜಕ್ಕೆ ಉಪಮೇಯವಾದ ಮುಖಿಯರಿಗೂ ಯಾವುದೆ ವ್ಯತ್ಯಾಸವನ್ನು ತೋರಿಸದೇ ಎರಡೂ ಒಂದೇ ಎಂದು ಅಭೇದವನ್ನು ಕಲಿಸಿ ಹೇಳಿರುವದರಿಂದ ಇದು ರೂಪಕಲಂಕಾರ.

3)ನಾಡನರಿ.

ಉಪಮಾನ:-ನಾಡನರಿ.

ಉಪಮೇಯ:ಉತ್ತರಕುಮಾರ.

ಇಲ್ಲಿ ಉಪಮಾನವಾದ ನಾಡನರಿಗು ಉಪಮೇಯವಾದ ಉತ್ತರಕುಮಾರನಿಗೂ ಯಾವುದೆ ವ್ಯತ್ಯಾಸವನ್ನು ತೋರಿಸದೇ ಎರಡೂ ಒಂದೇ ಎಂದು ಅಭೇದವನ್ನು ಕಲಿಸಿ ಹೇಳಿರುವದರಿಂದ ಇದು ರೂಪಕಲಂಕಾರ.

4)ಸೇನಾಸಾಗರ.

ಉಪಮಾನ:-ಸಾಗರ.

ಉಪಮೇಯ:ಸೇನೆ.

ಇಲ್ಲಿ ಉಪಮಾನವಾದ ಸಾಗರಕ್ಕೆ ಉಪಮೇಯವಾದ ಸೈನ್ಯಕ್ಕೆ ಯಾವುದೆ ವ್ಯತ್ಯಾಸವನ್ನು ತೋರಿಸದೇ ಎರಡೂ ಒಂದೇ ಎಂದು ಅಭೇದವನ್ನು ಕಲಿಸಿ ಹೇಳಿರುವದರಿಂದ ಇದು ರೂಪಕಲಂಕಾರ.

5)ಸೀತೆಯ ಮುಖಕಮಲ ಅರಳಿತು.

ಉಪಮಾನ:-ಕಮಲ.

ಉಪಮೇಯ:ಸೀತೆಯ ಮುಖ.

ಇಲ್ಲಿ ಉಪಮಾನವಾದ ಕಮಲಕ್ಕೆ ಉಪಮೇಯವಾದ ಸೀತೆಯ ಮುಖಕ್ಕೆ ಯಾವುದೆ ವ್ಯತ್ಯಾಸವನ್ನು ತೋರಿಸದೇ ಎರಡೂ ಒಂದೇ ಎಂದು ಅಭೇದವನ್ನು ಕಲಿಸಿ ಹೇಳಿರುವದರಿಂದ ಇದು ರೂಪಕಲಂಕಾರ.

MAJEED SHAKEEL

# ಗಾದೆಗಳು

**1) ಹಾಸಿಗೆ ಇದ್ದಷ್ಟು ಕಾಲು ಚಾಚು**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ
ಕೂಡಿರುತ್ತವೆ.

**ವಿವರಣೆ** - ನಾವು ನಮ್ಮ ಅರ್ಹತೆಗೆ ತಕ್ಕ ಗುರಿಯನ್ನು, ಆಸೆಯನ್ನು ಹೊಂದಿರಬೇಕು. ಇಲ್ಲದಿದ್ದರೆ ತಿರುಕ ಕಂಡ ಕನಸಿನಂತೆ ಕನಸು ಕನಸಾಗಿಯೇ ಉಳಿಯುತ್ತದೆ. ಮುಂದೆ ಪಡಬಾರದ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಹಣವನ್ನು ದುಂದುವೆಚ್ಚ ಮಾಡಬಾರದು. ನ್ಯಾಯಯುತವಾಗಿ ಸಂಪಾಧಿಸಿದ ಸಂಪಾದನೆಯಲ್ಲಿಯೇ ಜೀವನನಡೆಸಬೇಕು ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**2) ಅತಿ ಆಸೆ ಗತಿಗೇಡು**

**ಪೀಠಿಕೆ** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದಅರ್ಥದಿಂದ ಕೂಡಿರುತ್ತವೆ.

**ವಿವರಣೆ** ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಅತಿಯಾದ ಅಸೆ ದುಃಖಕ್ಕೆಕಾರಣವಾಗಿ ಇರುವುದನ್ನು ಕಳೆದುಕೊಂಡು ಗತಿಹೀನರನ್ನಾಗಿ ಮಾಡುತ್ತದೆ. ಉದಾ - ಊಟ ಬಹಳ ರುಚಿಯಾಗಿದೆಎಂದು ಹೆಚ್ಚು ತಿಂದರೆಅಜೀರ್ಣವಾಗುತ್ತದೆ. ಖ್ಯಾತ ಕವಿ ಡಿ.ವಿ.ಜಿ ಅವರು ಹೇಳುವಂತೆ ಜೀವನದಲ್ಲಿ ಅತಿ ಎಂಬುದುಎಲ್ಲಿಯೂ ಇಲ್ಲದಿದ್ದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಆದ್ದರಿಂದ ಅತಿ ಆಸೆ ಹೊಂದದೆ ಇದ್ದುದರಲ್ಲಿಯೇತೃಪ್ತರಾಗಿರಬೇಕು ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

3) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದಅರ್ಥದಿಂದ ಕೂಡಿರುತ್ತವೆ.

**ವಿವರಣೆ** ಕುಂಬಾರ ಮಣ್ಣನ್ನು ತಂದು ಹದ ಮಾಡಿ ಮಡಿಕೆ ಮಾಡಲು ತುಂಬಾ ಸಮಯ ತೆಗೆದುಕೊಳ್ಳುತ್ತದೆ.ಆದರೆ ಅದನ್ನು ಒಡೆದು ಹಾಕಲು ದೊಣ್ಣೆಗೆ ಒಂದೆ ನಿಮಿಷ ಸಾಕಾಗುತ್ತದೆ. ಕಟ್ಟುವುದು ಕಠಿಣ ಕೆಡಿಸುವುದು ಸುಲಭಎನ್ನುವ ಹಾಗೆ ಒಳ್ಳೆಯ ಕಾರ್ಯಮಾಡಿ ಸಮಾಜದಲ್ಲಿ ಉನ್ನತಿಯನ್ನು ಸಾಧಿಸಲು ತುಂಬಾ ಶ್ರಮಿಸ ಬೇಕಾಗುತ್ತದೆ.ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

**4) ಮನಸ್ಸಿದ್ದರೆ ಮಾರ್ಗ**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಬಿನ ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ**-ಸರ್ವ ಕಾರ್ಯಗಳಿಗೂ ಮನಸ್ಸೇ ಕಾರಣವಾಗಿದೆ. ಮನಸ್ಸು ದೃಢವಾಗಿದ್ದರೆ ನಾವು ಕೈಗೊಂಡ ಕಾರ್ಯವನ್ನು ಸಾಧಿಸುವುದು ಸುಲಭವಾಗುತ್ತದೆ. ಮನಸ್ಸು ಚಂಚಲವಾಗಿದ್ದರೆ ಕೈಗೊಂಡ ಕಾರ್ಯವು ವಿಫಲವಾಗುತ್ತದೆ. ಆದ್ದರಿಂದ ನಾವುಮಾಡುವ ಕೆಲಸದಲ್ಲಿ ನಮ್ಮ ಮನಸ್ಸು ಕೇಂದ್ರಿಕೃ ತವಾಗಿರಬೇಕು ಎಂಬುದು ಈ ಮೇಲಿನ ಗಾದೆಯ ಅರ್ಥ ಹಾಗೂ ಆಶಯವಾಗಿದೆ.

**5) ಕಾಯಕವೇ ಕೈಲಾಸ.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಬಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣ:** ಕಾಯಕವೇ ಕೈಲಾಸ ಈ ಮಾತನ್ನು ಹನ್ನೆರಡನೇ ಶತಮಾನದಲ್ಲಿ ಆಯ್ದ್ದಕ್ಕಿ ಲಕ್ಕಮ್ಮ ಶರಣೆ ಹೇಳಿದ ಮಾತಾಗಿದೆ. ಈಗ ಇದೊಂದು ಗಾದೆ ಮಾತಾಗಿ ಮಾರ್ಪಟ್ಟಿದೆ. ಕೈಲಾಸ ಎನ್ನುವುದು ಬೇರೆ ಎಲ್ಲೂ ಇಲ್ಲ, ಅದು ನಾವು ಮಾಡುವ ಕಾರ್ಯದಲ್ಲಿ ಅಡಗಿದೆ. ಆದ್ದರಿಂದ ಪ್ರತಿಯೊಬ್ಬರು ಕಾಯಕ ಮಾಡಬೇಕು ಅದು ಸತ್ಯ ಶುದ್ಧವಾಗಿರಬೇಕು.ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**6) ಆಳಾಗಿ ದಡಿಯಬಲವ್ಲ ಅರಸನಾಗಿ ಆಳಬಲ್ಲ.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ - ನಾವು ಮಾಡುವ ಯಾವುದೆ ಕೆಲಸ ಕಾರ್ಯಗಳಿರಲಿ ಅದರಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭಾವನೆಯನ್ನುಹೊಂದಬಾರದು. ಶ್ರದ್ಧೆ, ನಿಷ್ಠೆ, ಭಕ್ತಿ ಇರಬೇಕು. ಶ್ರಮವಹಿಸಿ ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ನಾವು ಸೋಮಾರಿಗಳಾಗಬಾರದು ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

MAJEED SHAKEEL

**7) ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ** - ದೇಶದ ಪ್ರಗತಿಯಲ್ಲಿ ಕೃಷಿಯ ಪಾತ್ರ ಹಿರಿದಾದುದು. ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು. ಎಂಬ ಗಾದೆ ಮಾತಿನಂತೆ ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಎಲ್ಲರೂ ಭಿಕ್ಷುಕರಂತಾಗುತ್ತೇವೆ ಜಗತ್ತು ತೊಂದರೆಗೆ ಒಳಗಾಗುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರೆದರು ಆಹಾರವಿಲ್ಲದೆ ಬದುಕಲು ಅಸಾಧ್ಯ.ಆದ್ದರಿಂದ ಕೃಷಿಕನೇ ಈ ನಾಡಿನ ಬೆನ್ನೆಲುಬು. ಒಟ್ಟಾರೆಯಾಗಿ ಕೃಷಿಯ ಮಹತ್ವ ತಿಳಿಸುವ ಗಾದೆಮಾತು ಇದಾಗಿದೆ.

**8) ತಾಳಿದವನು ಬಾಳಿಯಾನು.**

**ಪೀಠಿಕೆ**:ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನು ್ನವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬಫ ’ಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಬಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ**: ಮಾನವ ಜೀವನದಲ್ಲಿ ತಾಳ್ಮೆ ಬಹಳ ಮುಖ್ಯವಾದದ್ದು. ನೆಮ್ಮದಿಯ ಜೀವನ ನಮ್ಮದಾಗಬೇಕಾದರೆ ಬದುಕಿನಲ್ಲಿ ತಾಳ್ಮೆ ಎಂಬುದು ನೆಲೆಗೊಂಡಿರಬೇಕು . ವಾದಿರಾಜರು ತಾಳುವಿಕೆಗಿಂತ ತಪವು ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ನಾವು ಯಾವುದೇ ಕೆಲಸ ಕಾರ್ಯ ಮಾಡುವಾಗ ತಾಳ್ಮೆಯಿಂದ ಯೋಚಿಸಿ ಕಾರ್ಯ ಪ್ರವೃತ್ತರಾಗಬೇಕು ಎಂಬುದು ಈ ಗಾದೆ ಮಾತಿನ ಉದ್ದೇಶವಾಗಿದೆ.

**9) ಕೈ ಕೆಸರಾದರೆ ಬಾಯಿ ಮೊಸರು.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬಫಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಬಿನ ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ**: ಕೈ ಕೆಸರಾದರೆ ಬಾಯಿ ಮೊಸರು ಎಂದರೆ ಕಷ್ಟ ಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಉದಾಹರಣೆಗೆ ರೈತರು ಸರಿಯಾದ ಸಮಯದಲ್ಲಿ ಹೊಲದಲ್ಲಿ ಉತ್ತಿ ಬಿತ್ತಿ ಬೆಳೆ ಬೆಳೆದರೆ ಮುಂದೆ ಫಸಲು ಸಮೃದ್ಧವಾಗಿ ಸಿಗುತ್ತದೆ. ಆಳಾಗಿ ದುಡಿ ಅರಸನಾಗಿ ಉಣ್ಣು, ಎಂಬ ಗಾದೆಮಾತಿಗೆ ಸಮಾನವಾದ ಗಾದೆಯಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**10)ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ.**

**ಪೀಠಿಕೆ**:ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನು ್ನವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬಫಜನ್ಯದಿಂದ ಮೂಡಿ ಬಂದಿವೆ.ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ವಿಶೇಷಅರ್ಥದಿಂದ ಕೂಡಿರುತ್ತವೆ.

**ವಿವರಣೆ** : ಹಕ್ಕಿಗಳ ಆಶ್ರಯ ತಾಣ ಗೂಡು. ಹಕ್ಕಿ ಮತ್ತು ಗೂಡಿಗೆ ಅವಿನಾಭಾವ ಸಂಬಂಧವಿದೆ. ಅದರಂತೆ ತಾಯಿ ಮತ್ತು ಮಕ್ಕಳಲ್ಲಿಯೂ ಅನೋನ್ಯವಾದ ಪ್ರೀತಿಯ ಸಂಬಂಧವಿದೆ ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ.ಪ್ರತಿಯೊಬ್ಬರಿಗೂ ಕಣ್ಣಿಗೆ ಕಾಣುವ ದೇವರೆಂದರೆ ತಾಯಿಯಾಗಿದ್ದಾಳೆ. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಮೇಲಿನ ಗಾದೆಗೆ ಸಮಾನ ಅರ್ಥಕೊ ಡುವ ಗಾದೆ ಮಾತಾಗಿದೆ.

**11) ದೇಶ ಸುತ್ತಿ ನೋಡು; ಕೋಶ ಓದಿ ನೋಡು**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ: ದೇಶ ಸುತ್ತಿ ನೋಡು, ಕೋೀಶ ಓದಿ ನೋಡು. ಇದೊಂದು ಪ್ರಚಲಿತದಲ್ಲಿರುವ ಗಾದೆಮಾತಾಗಿದೆ. ಜ್ಞಾನ ಸಂಪಾಧನೆಯು ಪ್ರವಾಸ ಮಾಡುವುದರಿಂದ ಇಲ್ಲವೇ ಪುಸ್ತಕ ಓದುವುದರಿಂದ ಸಾಧ್ಯವಾಗುತ್ತದೆ ಎಂಬುದು ಈ ಗಾದೆಮಾತಿನ ಅರ್ಥವಾಗಿದೆ. ಪ್ರವಾಸ ಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ ಆದರೆ ಜ್ಞಾನ ಭಂಡಾರದ ಕೀಲಿಕೈಯಂತಿರುವ ಪುಸ್ತಕವನ್ನು ಓದುವುದು ಎಲ್ಲರಿಂದಲೂ ಸಾಧ್ಯ ಎಂಬುದು ಈ ಗಾದೆ ಮಾತಿನ ವೈಶಿಷ್ಟ್ಯವಾಗಿದೆ.

**12)ತಾ ಕಳ್ಳ ಪರರ ನಂಬ.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ**: ತನ್ನಂತೆ ಇತರರನ್ನು ಕಾಣುವುದು ಮಾನವನ ಸಹಜ ಗುಣವಾಗಿದೆ. ಅದು ಸರ್ವಜ್ಞ ಕವಿ ಹೇಳಿದಂತೆ ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಾಣವಕ್ಕು ಸರ್ವಜ್ಞ ಎಂದಾದರೆ ಒಳ್ಳೆಯದು. ಆದರೆ ಕಳ್ಳರು ತಮ್ಮ ದೋಷ ಗುಣವನ್ನು ಇತರರಲ್ಲಿ ಕಂಡು ಇವರೂ ಕಳ್ಳರು ಎಂಬ ಅನುಮಾನವನ್ನು ಹೊಂದುತ್ತಾರೆ. ಕಾಮಾಲೆ ಕಣ್ಣಿನವರಿಗೆ ಜಗತ್ತೆಲ್ಲ ಹಳದಿ ಕಾಣುತ್ತದೆ. ಎನ್ನುವ ಹಾಗೆ ಇವರು ಯಾರೊಂದಿಗೂ ವಿಶ್ವಾಸದಿಂದ ಇರುವುದಿಲ್ಲ.ನಾವು ಇತರರಬಗ್ಗೆ ಸಕಾರಾತ್ಮಕ ಮನೋಭಾವನೆಯನ್ನು ಹೊಂದಬೇಕು ಎನ್ನುವುದು ಈ ಗಾದೆ ಮಾತಿನ ಆಶಯವಾಗಿದೆ.

MAJEED SHAKEEL

**13)ಬೆಳ್ಳಗಿರುವುದೆಲ್ಲ ಹಾಲಲ್ಲ**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದಕೂಡಿರುತ್ತವೆ.

**ವಿವರಣೆ**- ಸಮಾಜದಲ್ಲಿ ಕೆಲವು ಜನರು ನೋಡಲು ಸಜ್ಜನರಂತೆ ಕಾಣುತ್ತಾರೆ. ಆದರೆ ಅವರ ಮನಸ್ಸು ಗೋಮುಖ ವ್ಯಾಘ್ರನಂತೆ ಇರುತ್ತದೆ. ನಾವು ಯಾರನ್ನಾದರು ನಂಬ ಬೇಕಾದರೆ ಅವರನ್ನು ಪೂರ್ಣವಾಗಿ ತಿಳಿದಿರಬೇಕು. ಇಲ್ಲದಿದ್ದರೆ ಮೋಸಹೋಗ ಬೇಕಾಗುತ್ತದೆ. ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**14) ಬೆಳೆಯುವ ಸಿರಿ ಮೊಳಕೆಯಲ್ಲಿ.**

**ಪೀಠಿಕೆ**: ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ**- ಮುಂದೆ ಬೆಳೆಯಬಹುದಾದ ಪೈರಿನ ಗುಣವನ್ನು ಅದು ಮೊಳಕೆಯಲ್ಲಿ ಇದ್ದಾಗಲೇ ಕಂಡುಬರುತ್ತದೆ. ಒಬ್ಬ ಸಾಧಕನ ಸಾಧನೆಯ ಗುಣ ಆತನ ಬಾಲ್ಯದಲ್ಲಿಯೇ ಕಂಡು ಬರುತ್ತದೆ. ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ.ಪಂಡಿತ ಪುಟ್ಟರಾಜ ಗವಾಯಿಗಳ ಸಾಧನೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

## ನಿಬಂಧಗಳು.

**1) ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ:**

**ಪೀಠಿಕೆ** - ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.

**ವಿವರಣೆ** - ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳುಮಾಡುತ್ತಿದ್ದಾನೆ. ಇದಕ್ಕೆಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ,ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ,ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.ಉಪಸಂಹಾರ - ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು,ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನಅಗತ್ಯವಾಗಿದೆ.

**2) ಸಮೂಹ ಮಾಧ್ಯಮಗಳು:**

**ಪೀಠಿಕೆ** - ಹಲವು ಜನರನ್ನು ಏಕಕಾಲದಲ್ಲಿ ಸಂಪರ್ಕ ಕಲಿಸ್ಪ ುವ ಮಾಧ್ಯಮಗಳನ್ನು ಸಮೂಹ ಮಾಧ್ಯಮಗಳೆಂದುಕರೆಯುವರು. ಆಧುನಿಕ ಯುಗದಲ್ಲಿ ಇವುಗಳ ಅವಶ್ಯಕತೆ ತುಂಬಾ ಹೆಚ್ಚಾಗಿದೆ. ಇವುಗಳಿಲ್ಲದ ಜೀವನ ಕಲ್ಪಿಸಿಕೊಳ್ಳಲುಸಾಧ್ಯವಾಗದ ಮಟ್ಟಿಗೆ ಮನುಷ್ಯನ ಬದುಕಿನಲ್ಲಿ ಇವು ಬೆಸೆದುಕೊಂಡಿವೆ. ಇವುಗಳ ಬಳಕೆಯಿಂದ ಜಗತ್ತು ಸಣ್ಣದಾಗಿದೆಎಂದು ಅನಿಸುತ್ತದೆ.

**ವಿವರಣೆ** - ದಿನಪತ್ರಿಕೆ, ರೇಡಿಯೊ, ದೂರದರ್ಶನ, ದೂರವಾಣಿ, ಚಲನಚಿತ್ರ, ಅಂತರ್ಜಾಲ ವ್ಯವಸ್ಥೆ, ಟ್ವೀಟರ್,ಫೇಸಬುಕ್,ವಾಟ್ಸಪ್ ಇನ್ನು ಮುಂತಾದವುಗಳು ಸಮೂಹ ಮಾಧ್ಯಮಗಳಾಗಿವೆ. ಇವು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯವಾಗಿ ಜನರ ಸಂಪರ್ಕವನ್ನು ಬೆಸೆಯುತ್ತಿವೆ. ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆದೃಷ್ಟಿಯಿಂದ ಇವುಗಳ ಪಾತ್ರ ಮಹತ್ವದ್ದಾಗಿದೆ.ದೇಶದ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆಗಳು, ಕ್ರೀಡೆಗಳು,ಉಪನ್ಯಾಸಗಳನ್ನು ನಾವು ಕುಳಿತಲ್ಲೆ ನೋಡುವ, ಕೇಳುವ ಅವಕಾಶ ಇವುಗಳಿಂದ ದೊರಕಿದೆ. ಆದ್ದರಿಂದ ವಿದ್ಯಾರ್ಥಿಯನ್ನೊಳಗೊಂಡ ಎಲ್ಲರಿಗೂ ಇವುಗಳ ಅವಶ್ಯಕತೆ ಬಹಳಷ್ಟಿದೆ ಎಂದು ಹೇಳಬಹುದು. **ಉಪಸಂಹಾರ** ಒಟ್ಟಾರೆಯಾಗಿ ಅಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ. ಇವುಗಳನ್ನುಸಕಾರಾತ್ಮಕವಾಗಿ ಯೋಚಿಸಿ ಒಳ್ಳೆಯ ಕಾರ್ಯಕ್ಕೆ ಬಳಸಿಕೊಳ್ಳಬೇಕು.

**3) ಕ್ರೀಡೆಗಳ ಮಹತ್ವ:**

**ಪೀಠಿಕೆ**: ಆರೋಗ್ಯವೇ ಭಾಗ್ಯ ನಾಣ್ಣುಡಿಯಂತೆ ಕ್ರೀಡೆಗಳು ಆಧುನಿಕತೆಯಲ್ಲಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. ಸದೃಢ ದೇಹದಲ್ಲಿ ಸದೃಢ ಮನಸ್ಸು ರೂಪಗೊಳ್ಳುತ್ತದೆ. ಆದ್ದರಿಂದ ಪಾಠದ ಜೊತೆಗೆ ಆಟವು ಬೇಕಾಗಿದೆ.

**ವಿವರಣೆ**: ಇಂದು ಮಾನವನ ಬದುಕು ಯಾಂತ್ರಿಕ ಬದುಕಾಗಿದೆ. ಜೀವನದಲ್ಲಿ ಉತ್ಸಾಹ ತುಂಬಲು ಮಕ್ಕಳಿಂದಹಿಡಿದು ವೃದ್ದರೆಲ್ಲರಿಗೂ ಕ್ರೀಡೆಗಳು ಅವಶ್ಯಕವಾಗಿವೆ. ನಮಗೆ ಇಷ್ಟವಾದ ಕ್ರಿಡೆಯನ್ನು ಆಯ್ಕೆಮಾಡಿಕೊಂಡು ಸತತವಾಗಿಪ್ರಯತ್ನಮಾಡಿದರೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಬಹುದು. ಇದಕ್ಕೆ ಉತ್ತಮ ಉದಾಹರಣೆಯಾಗಿರಾಹುಲ್ ದ್ರಾವಿಡ್, ಅನೀಲ ಕುಂಬ್ಳೆ ಮುಂತಾದವರು ನಮ್ಮ ಕಣ್ಮುಂದೆ ಇದ್ದಾರೆ. ಮಗು ಕ್ರೀಡೆಯಲ್ಲಿಭಾಗಿಯಾಗುವುದರಿಂದ ಏಕಾಗ್ರತೆ, ಚುರುಕುತನ, ತತಕ್ಷಣದಲ್ಲಿ ಪ್ರತಿಕ್ರಿಯಿಸುವ ಮನೋಭಾವ ಹಾಗೂ ನಾಯಕತ್ವದಗುಣಗಳು ಬೆಳೆದು ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯವಾಗುತ್ತದೆ.

MAJEED SHAKEEL

**ಉಪಸಂಹಾರ**: ಒಟ್ಟಾರೆಯಾಗಿ ಕ್ರೀಡೆಗಳು ಮಾನವನ ಬದುಕಿನ ಒಂದು ಅಂಗವಾಗಿವೆ. ನಮ್ಮ ಪೂರ್ವಜರಿಂದಬಳುವಳಿಯಾಗಿ ಬಂದಿರುವ ಜನಪದ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದಾಗಬೇಕಿದೆ.

**4) ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:**

**ಪೀಠಿಕೆ** : ಸಂಪರ್ಕ ಮಾಧ್ಯಮಗಳಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಮಾಧ್ಯಮ ದೂರದರ್ಶನವಾಗಿದೆ. ಹೆಸರೇ ಹೇಳುವಂತೆ ದೂರದಲ್ಲಿರುವುದನ್ನು ಕುಳಿತಲ್ಲಿಯೇ ದರ್ಶನ ಮಾಡಿಸುವುದು ದೂರದರ್ಶನವಾಗಿದೆ.

**ವಿವರಣೆ** : ದೂರದರ್ಶನ ಜನಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಕ್ಕಳಾದಿಯಾಗಿ ವಯೋವೃದ್ದರವರೆಗೂ ಎಲರನ್ನು ಆಕರ್ಷಿಸುವ ಮಾಧ್ಯಮವಾಗಿದೆ. ಸಮಾಜದ ನಾನಾ ವೃತ್ತಿಗಳಲ್ಲಿ ತೊಡಗಿರುವ ಎಲ್ಲಾಜನರಿಗೂ ಉಪಯುಕ್ತ ಮಾಹಿತಿಯನ್ನು ಒದಗಿಸುವುದರೊಂದಿಗೆ ಮನೋರಂಜನಾ ಮಾಧ್ಯಮವಾಗಿಯೂ ಕಾರ್ಯನಿರ್ವಹಿತ್ತಿದೆ ಉದಾಹರಣಗೆ ರೈತರಿಗೆ ಕೃಷಿ ಮಾಹಿತಿಯನ್ನು, ವರ್ತಕರಿಗೆ ಮಾರುಕಟ್ಟೆಯ ವಿವರವನ್ನು, ಕರಾವಳಿ ತೀರದವರಿಗೆ ಹವಾಮಾನ ಹಾಗೂ ವಾಯುಗುಣದ ಎಚ್ಚರಿಕೆಯನ್ನು ಕುಳಿತಲ್ಲೇ ಏಕಕಾಲಕ್ಕೆ ಎಲ್ಲರಿಗೂ ತಿಳಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ವಿಜ್ಞಾನ, ಗಣಿತ ವಿಷಯಗಳ ಪಾಠಮಾಲಿಕೆ ಪ್ರಸಾರವಾಗುತ್ತಿವೆ. ಕ್ರೀಡೆ, ಸಂಗೀತ, ವಿಜ್ಞಾನ, ಚಲನಚಿತ್ರ, ವಿವಿಧ ಕ್ಷೇತ್ರಗಳ ಮಾಹಿತಿ ನೀಡುವುದರೊಂದಿಗೆ ಇದೊಂದು ಜ್ಞಾನಾಭಿವೃದ್ಧಿಯನ್ನುಉಂಟು ಮಾಡುವ ಮಾಧ್ಯಮವಾಗಿದೆ.

**ಉಪಸಂಹಾರ** ಆಧುನಿಕತೆಯಲ್ಲಿ ದೂರದರ್ಶನದ ಪಾತ್ರ ಪ್ರಮುಖವಾದದ್ದು. ವಿದ್ಯಾರ್ಥಿಗಳು ಇದರ ಸಾಧಕ ಭಾದಕಗಳನ್ನು ಅರಿತು ಉಪಯೋಗಿಸಿಕೊ ಳ್ಳಬೇಕು.

**5) ಸ್ವಚ್ಛ ಭಾರತ ಅಭಿಯಾನ**

**ಪೀಠಿಕೆ** - ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯ ವರು 02.10.2014 ರಲ್ಲಿ ಈ ಯೋಜನೆ ಯನ್ನುಜಾರಿಗೆ ತಂದರು.

**ವಿವರಣೆ** - ಪ್ರದಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯ ವರ ದೇಶದ ಅಭಿವೃದ್ಧಿಯಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾಕಾಲೇಜು ವಿದ್ಯಾರ್ಥಿಗಳಸಹ ಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯ ಧನನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ ಎಂಬುದಾಗಿದೆ.

**ಉಪಸಂಹಾರ**: ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ.ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**6) ಕಂಪ್ಯೂಟರ್‌ನ ಉಪಯೋಗಗಳು**

**ಪೀಠಿಕೆ**: ಕಂಪ್ಯೂಟರ್ ಈ ಪದದ ಅರ್ಥವು ಕನ್ನಡದಲ್ಲಿ ಗಣಕಯಂತ್ರ ಎಂದಾಗುತ್ತದೆ. ಆಧುನಿಕತೆಯಲ್ಲಿ ಇದರಪ್ರಾಮುಖ್ಯತೆ ಬಹಳ ಷ್ಟಿದೆ. ಇಂದು ಪ್ರತಿಯೊಂದು ಶಾಲಾ ಕಾಲೇಜು, ವಿವಿಧ ಕಛೇರಿಗಳಲ್ಲಿಯೋ ಕಂಪ್ಯೂಟರ್‌ನ ಬಳಕೆಯಿದೆ. ವಿಜ್ಞಾನಮುಂದುವರೆದಂತೆ ಇದರಲ್ಲಿ ಅನೇಕ ವಿಧಗಳನ್ನು ನೋಡುತ್ತಿದ್ದೇವೆ.

**ವಿವರಣೆ**; ಕಂಪ್ಯೂಟರ್ ಎಂಬ ಈ ಮಾಯ ಪೆಟ್ಟಿಗೆಯ ಬಳಕೆಯಿಂದ ಮಾನವನು ಕೈಯಾರೆ ಮಾಡುವ ಮೊರ್ನಾಲ್ಕುದಿನದ ಕೆಲಸವನ್ನು ಈ ಕಂಪ್ಯೂಟ್‌ರ ಸಹಾಯದಿಂದ ಕೆಲವೇ ಗಂಟೆಗಳಲ್ಲಿ ಮಾಡಬಹುದಾಗಿದೆ. ಗಣಿತ, ವಿಜ್ಞಾನ,ಸಾಮನ್ಯ ಜ್ಞಾನ, ಸಾಹಿತ್ಯ, ಸಂಸ್ಕೃತಿ ಜಗತ್ತಿನ ಅನುಭವ ಪರಿಧಿಯು ನಮಗೆ ಅಂಗೈಯಲ್ಲಿನ ನಲೆ ್ಲಕಾಯಿಯಂತಾಗಿದೆ. ಮಾನವನು ತನಗೆ ಅವಶ್ಯವಿರುವ ದಾಖಲೆಗಳನ್ನು ಇದರಲ್ಲಿ ಸಂಗ್ರಹಿಸಿ ಬೇಕೆಂದಾಗ ತಕ್ಷಣದಲ್ಲಿ ಪಡೆಯಬಹುದಾಗಿದೆ.

**ಉಪಸಂಹಾರ**: ಒಟ್ಟಾರೆಯಾಗಿ ಕಂಪ್ಯೂಟ್‌ರನ ಬಳಕೆ ಆಧುನಿಕ ಯುಗದಲ್ಲಿ ಬಹಳ ಮಹತ್ವ ಪಡೆದುಕೊಂಡಿದೆ. ವೈಜ್ಞಾನಿಕ ಜಗತ್ತಿನ ವಿಶಿಷ್ಟ ಕೊಡುಗೆಯಿಂದ ಕಂಪ್ಯೂಟ್‌ರ ವಿಶಿಷ್ಟ ಸಂಪತ್ತಾಗಿದೆ.

**7) ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.**

**ಪೀಠಿಕೆ** ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ವಿವರಣೆ** ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು ನಾವೂ ಭಾರತೀಯರುಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು.ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು

MAJEED SHAKEEL

ಅಗಸ್ಟ 15ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದುಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ ಗಣರಾಜ್ಯೋತ್ಸವ ದೇಶವಿಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

**ಉಪಸಂಹಾರ** ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರಧ್ವಜಾರೋಹಣಮಾಡಿ ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳುಪ್ರಮುಖ ಪಾತ್ರವಹಿಸುತ್ತವೆ.

**8) ಸ್ವಚ್ಛತಾ ಆಂದೋಲನದಲ್ಲಿ ವಿದ್ಯಾರ್ಥಿಗಳ ಪಾತ್ರ.**

**ಪೀಠಿಕೆ** - ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯ ವರು 02.10.2014 ರಲ್ಲಿ ಈ ಯೋಜನೆಉನನು ಜಾರಿಗೆ ತಂದರು.

**ವಿವರಣೆ** - ಪ್ರದಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನನೆ 'ಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹ ಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019ಅಕ್ಟೋಬರ್ 2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ ಎಂಬುದಾಗಿದೆ. ಈ ಮಾಹಿತಿಯನ್ನುಎಲ್ಲ ವಿದ್ಯಾರ್ಥಿಗಳು ತಮ್ಮ ಮನೆ ಹಾಗೊ ನೆರೆ ಹೊರೆಯವರಿಗೆ ಮನವರಿಕೆ ಮಾಡಿಕೊಡುವುದು ಮತ್ತು ಅವರಲ್ಲಿ ಅರಿವುಮೂಡಿಸುವುದು ಅವಶ್ಯವಾಗಿದೆ.

**ಉಪಸಂಹಾರ** ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ. ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**9) ಜಲ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು**

**ಪೀಠಿಕೆ :** ಮಾನವನ ಅತೀ ಮುಖ್ಯ ಅವಶ್ಯಕತೆಗಳಲ್ಲಿ ಒಂದಾದ ನೀರು ಇಂದು ಸಮರ್ಪಕವಾಗಿ ದೊರೆಯುತ್ತಿಲ್ಲ. ಕಾರಣ ಪರಿಸರ ಮಾಲಿನ್ಯ. ಪರಿಸರ ಮಾಲಿನ್ಯದ ಒಂದು ಅಂಗವೇ ಜಲಮಾಲಿನ್ಯ. ಮಾಲಿನ್ಯವು ಇದೇ ರೀತಿ ಮುಂದುವರೆದರೆ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ ದೊರೆಯದೆ ಜೀವ ಸಂಕುಲ ತೊಂದರೆಗೆ ಒಳಗಾಗುತ್ತದೆ. ಆದ್ದರಿಂದ ಜಲಮಾಲಿನ್ಯವನ್ನು ತಡೆಗಟ್ಟುವುದು ನಮ್ಮೆಲ್ಲರ ಹೊಣೆಯಾಗಿದೆ.

**ವಿವರಣೆ :** ನಿಸರ್ಗದ ಅಮುಲ್ಯ ಕೊಡುಗೆಗಳಲ್ಲಿ ಒಂದಾದ ನದಿಗಳು ಕಾರ್ಖಾನೆಗಳು ಹೊರ ಹಾಕುವ ಹೊಲಸು ನೀರಿನಿಂದ ಕಲುಷಿತಗೊಂಡಿವೆ. ರಾಸಾಯನಿಕ ಗೊಬ್ಬರ ಬಳಕೆ, ಪ್ಲಾಸ್ಟಿಕ್ ಬಳಕೆ, ಗಣಿಗಾರಿಕೆ ಇವೆಲ್ಲದರಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿವೆ. ಮಣ್ಣಿನ ಸವೆತದಿಂದ ಜಲಮೂಲಗಳಲ್ಲಿ ಹೂಳು ತುಂಬಿ ಅಂತರ್ಜಲ ಮಟ್ಟಕುಸಿಯುತ್ತಿದೆ.

ಉಪಸಂಹಾರ : ಜೀವಾಮೃತವಾದ ಜಲವನ್ನು ಇಂದು ನಾವು ಸಂರಕ್ಷಿಸಬೇಕಾಗಿದೆ. ಮಳೆಕೊಯ್ಲಿನಂತ ಮಾರ್ಗಗಳನ್ನು ಅನುಸರಿಸುವುದು ಅವಶ್ಯಕವಾಗಿದೆ.

**10)ಭ್ರಷ್ಟಾಚಾರ**

**ಪೀಠಿಕೆ** - ಭ್ರಷ್ಟಾಚಾರವು ದೇಶಕ್ಕೆ ಅಂಟಿದ ಶಾಪವಾಗಿದೆ. ಇದರಿಂದ ದೇಶದಲ್ಲಿ ಭದ್ರತೆ, ಸುಸ್ಥಿರತೆ ಇಲ್ಲದಾಗುತ್ತದೆ. ಆರ್ಥಿಕ ಕುಸಿತದಿಂದ ಅರಾಜಕತೆ ಉಂಟಾಗುತ್ತದೆ. ಆದ್ದರಿಂದ ಪ್ರಜ್ಞಾವಂತ ನಾಗರಿಕ ಸಮಾಜ ಭ್ರಷ್ಟಾಚಾರದ ವಿರುದ್ಧಹೋರಾಡಬೇಕಿದೆ.

**ವಿವರಣೆ**: ಲಾಭಕ್ಕಾಗಿ ಮಾಡುವ ಕಳ್ಳ ವ್ಯಾಪಾರವೇ ಭ್ರಷ್ಟಾಚಾರ ದೇಶದ ಪ್ರತಿಭಾವಂತ ಜನರಲ್ಲಿ ಅನ್ಯಾಯವನ್ನು ಖಂಡಿಸುವ ಹಾಗೂ ಅದರ ವಿರುದ್ಧ ಹೋರಾಡುವ ಮನೋಭಾವ ಬೆಳೆಯಬೇಕಾಗಿದೆ. ರಾಜಕೀಯ,ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಪ್ರಾಮಾಣಿಕತೆಯನ್ನು ತರುವ ಪ್ರಯತ್ನ ನಡೆಯಬೇಕಿದೆ. ಭ್ರಷ್ಟಾಚಾರದಹೆಚ್ಚಳದಿಂದ ದೇಶದಲ್ಲಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ, ಬಡವರು ಬಡವರಾಗಿಯೇ ಉಳಿದಿದ್ದಾರೆ. ಈಅಸಮತೋಲನವನ್ನು ಹೋಗಲಾಡಿಸುವುದಕ್ಕಾಗಿ ಭ್ರಷ್ಟಚಾರವೆಂಬ ಪೆಡಂಭೂತ ದೇಶ ಬಿಟ್ಟು ತೊಲಗಬೇಕಿದೆ.

ಉಪಸಂಹಾರ - ಭ್ರಷ್ಟಚಾರ ಹೋಗಲಾಡಿಸಲು ಕೆಲವೆ ಕೆಲವು ಜನರು ಹೋರಾಡಿದರೆ ಸಾಲದು. ದೇಶದ ಸಮಸ್ತ ಜನರು ಅದರ ವಿರುದ್ಧ ಹೋರಾಡಬೇಕಿದೆ.

**11) ಪರಿಸರ ಸಂರಕ್ಷಣೆ**

**ಪೀಠಿಕೆ**-ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು.ಪರಿಸರ ಎಂಬುದು ಮನಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ.ಇದರಿಂದ ಪರಿಸರ ನಾಶವಾಗುತ್ತಿದೆ.

MAJEED SHAKEEL

**ವಿವರಣೆ**-ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳುಮಾಡುತ್ತಿದ್ದಾನೆ. ಇದಕ್ಕೆಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ,ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.

**ಉಪಸಂಹಾರ** - ಪರಿಸರ ದಿನದಿಂದ ದಿನಕ್ಕೆ ನಾಶವಾಗುತಾ¸ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು,ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆಯ ಇಂದಿನ ಅಗತ್ಯವಾಗಿದೆ.

### 12) ರಾಷ್ಟ್ರೀಯ ಹಬ್ಬಗಳು

**ಪೀಠಿಕೆ**: ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ವಿವರಣೆ**: ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15 ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ ಗಣರಾಜ್ಯೋತ್ಸವ ದೇಶವಿಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

**ಉಪಸಂಹಾರ**: ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳುಪ್ರಮುಖ ಪಾತ್ರವಹಿಸುತ್ತವೆ.

MAJEED SHAKEEL